ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 2 ಭಾನುವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 285 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com





ಮೈಸೂರು ಮಿತ್ರ
ಭಾನುವಾರ 2 ಫೆಬ್ರವರಿ 2025

ಮೈಸೂರಲ್ಲಿ ರಾಜ್ಯ ಮಟ್ಟದ ಸಮುದಾಯ ಆರೋಗ್ಯಾಧಿಕಾರಿಗಳ ಸಂರಕ್ಷಣಾ ಸಮಾವೇಶ

ಸಮುದಾಯ ಆರೋಗ್ಯ ಅಧಿಕಾರಿಗಳ ಸೇವೆ ಖಾಯಂ ಬಗ್ಗೆ ಚರ್ಚೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಅಖಿಲ ಕರ್ನಾಟಕ ರಾಜ್ಯ ಸಮುದಾಯ ಆರೋಗ್ಯ ಗುತ್ತಿಗೆ ನೌಕರರ ಸಂಘ ಆಯೋಜಿಸಿದ್ದ ರಾಜ್ಯ ಮಟ್ಟದ ಸಮುದಾಯ ಆರೋಗ್ಯಾಧಿಕಾರಿಗಳ ಸಂರಕ್ಷಣಾ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಉದ್ಘಾಟಿಸಿದರು.

ಮೈಸೂರು, ಫೆ.1 (ಬಿಎಲ್‌ಯು)– ಆರೋಗ್ಯ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಮುದಾಯ ಆರೋಗ್ಯ ಅಧಿಕಾರಿಗಳ ಸೇವೆಯನ್ನು ಖಾಯಂ ಮಾಡುವ ಬಗ್ಗೆ ಚರ್ಚೆ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಅಖಿಲ ಕರ್ನಾಟಕ ರಾಜ್ಯ ಸಮುದಾಯ ಆರೋಗ್ಯ (ಎನ್.ಹೆಚ್.ಎಂ) ಗುತ್ತಿಗೆ ನೌಕರರ ಸಂಘ ಆಯೋಜಿಸಿದ್ದ ರಾಜ್ಯ ಮಟ್ಟದ ಸಮುದಾಯ ಆರೋಗ್ಯಾಧಿಕಾರಿಗಳ ಸಂರಕ್ಷಣಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಬೇಡಿಕೆ ನಿಮ್ಮ ಹಕ್ಕು, ಪರಿಶೀಲನೆ ನಮ್ಮ ಕರ್ತವ್ಯ ಎಂದು ಅಭಿಪ್ರಾಯಪಟ್ಟರು.

ಸಮುದಾಯ ಆರೋಗ್ಯ ಅಧಿಕಾರಿಗಳು ಬೇಡಿಕೆ ಸಲ್ಲಿಸಿರುವಂತೆ ಬೋನಸ್ ನೀಡಲಾಗುವುದು, ವಾರ್ಷಿಕವಾಗಿ ಶೇಕಡ 5ರಷ್ಟು ವೇತನ ಹೆಚ್ಚಳ ಮಾಡುವುದು, ಅಂತರ ಜಿಲ್ಲೆ ವರ್ಗಾವಣೆಗೆ ಅವಕಾಶ ನೀಡುವುದು, ಆರೋಗ್ಯ ವಿಮೆ ಜಾರಿಗೊಳಿಸುವ ಬೇಡಿಕೆಂಯನ್ನು ನಿಶ್ಚಿತವಾಗಿ ಈಡೇರಿಸಲಾಗುವುದು ಎಂದು ಆಶ್ವಾಸನೆ ನೀಡಿದರು.

ಕೆಲವು ಬೇಡಿಕೆ ಈಡೇರಿಸುವುದಾಗಿ ಖಚಿತಪಡಿಸಿದ್ದೇನೆ. ಆದರೆ ಖಾಯಂ ಮಾಡುವ ಬಗ್ಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಜೊತೆ ಸಮಾಲೋಚನೆ ನಡೆಸುತ್ತೇನೆ. ಆದರೆ ನೀವೇಳಿದಂತೆ ಖಾಯಮಾತಿಯನ್ನು ಇಲ್ಲೇ ಆದೇಶ ಮಾಡಲು ಸಾಧ್ಯವಿಲ್ಲ. ನಿಮ್ಮ ಈ ಬೇಡಿಕೆ ಕುರಿತಂತೆ ಸಮಗ್ರವಾಗಿ ಚರ್ಚಿಸಿ ತರುವಾಯ ತೀರ್ಮಾನ ಮಾಡುತ್ತೇನೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಪ್ರತಿ ಮನೆಗೆ ಹೋಗಿ ಅನಾರೋಗ್ಯ ಕ್ಕೀಡಾಗುವ ವ್ಯಕ್ತಿಯಲ್ಲಿ ಏನು ರೋಗವಿದೆ ಎಂದು ಪತ್ತೆ ಮಾಡಬೇಕಿದೆ. ಸರ್ಕಾರ ನೀಡಿರುವ ಈ ಸೌಲಭ್ಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಈ ಮೂಲಕ ಸರ್ಕಾರದ ಈ ಸೌಲಭ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳುವಂತೆ ಜನರಿಗೆ ತಿಳಿಹೇಳಬೇಕು ಎಂದು ಸಲಹೆ ನೀಡಿದರು. ಶ್ರೀಮಂತರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಆದರೆ ಬಡವರು ಸರ್ಕಾರಿ ಆಸ್ಪತ್ರೆಯನ್ನೆ ಅವಲಂಬಿಸಿರುತ್ತಾರೆ. ಈ ಹಿನ್ನೆಲೆ ಜನರು ನಿಮ್ಮ ಬಗ್ಗೆ ಇಟ್ಟಿರುವ ನಿರೀಕ್ಷೆಯನ್ನು ಹುಸಿಗೊಳಿಸದೆ ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಸಿದ್ದರಾಮಯ್ಯ ತಾಕೀತು ಮಾಡಿದರು.

ಖಾಯಮಾತಿಯನ್ನು ಆರನೇ ಗ್ಯಾರಂಟಿಯಾಗಿ ಮಾಡಬೇಕಂತೆ

“ರಾಜ್ಯಾದ್ಯಂತ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ನೌಕರರ 6ನೇ ಗ್ಯಾರಂಟಿಯಾಗಿ ತಮ್ಮನ್ನು ಖಾಯಂ ಮಾಡುವಂತೆ ಕೋರುತ್ತಿದ್ದಾರೆ. ನಾನು ಸರ್ಕಾರದ ಕೆಲವು ಕಾರ್ಯಕ್ರಮಕ್ಕೆ ಹೋದ ಸಂದರ್ಭದಲ್ಲಿ ತಮ್ಮನ್ನು ಖಾಯಂ ಮಾಡುವಂತೆ ಕೋರುತ್ತಾರೆ. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಯಲ್ಲಿ 6ನೇ ಗ್ಯಾರಂಟಿಯಾಗಿ ಇದನ್ನು ಜಾರಿಗೊಳಿಸಿ ಎಂದು ಕೇಳುತ್ತಾರೆ. ರಾಜ್ಯಾದ್ಯಂತ ಸಮುದಾಯ ಆರೋಗ್ಯ ಅಧಿಕಾರಿಗಳು ಆರು ಸಾವಿರಕ್ಕೂ ಹೆಚ್ಚಿದ್ದೀರಾ. ನಿಮ್ಮನ್ನು ಖಾಯಂ ಮಾಡುವ ಬಗ್ಗೆ ಚರ್ಚೆ ಮಾಡುತ್ತೇನೆ.

–ಮುಖ್ಯಮಂತ್ರಿ ಸಿದ್ದರಾಮಯ್ಯ

ನಾನು ಕೂಡ ಯೋಗ ಮಾಡುತ್ತಿದ್ದೆ, ಆದರೆ ಈಗ....

ನಾನು ಕೂಡ ಯೋಗ ಮಾಡುತ್ತಿದ್ದೆ ಆದರೆ ಈಗ ಯೋಗ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಹಾಯಕತೆ ವ್ಯಕ್ತಪಡಿಸಿದರು. ಮೈಸೂರಿನ ಆಯರಹಳ್ಳಿಯಲ್ಲಿ ಸ್ಥಾಪನೆ ಆಗಿರುವ ಆರೋಗ್ಯ ಮಂದಿರ ಉದ್ಘಾಟನೆ ಸಂದರ್ಭದಲ್ಲಿ ಸಮಯಾಭಾವದ ಕಾರಣ ಯೋಗ ಮಾಡಲಾಗುತ್ತಿಲ್ಲ ಎಂದರು. ಕೃಷಿಯಲ್ಲಿ ರಾಸಾನಿಯಕ ಗೊಬ್ಬರ ಬಳಕೆ ಹೆಚ್ಚಾಗಿದೆ. ಇದರಿಂದ ರೋಗಗಳು ಹೆಚ್ಚಾಗಿವೆ. ಈ ಹಿನ್ನೆಲೆ ಸಾವಯವ ಕೃಷಿ ಅಳವಡಿಸಿಕೊಳ್ಳಬೇಕು. ಸಿರಿಧಾನ್ಯ ಬಳಕೆ ಹೆಚ್ಚು ಮಾಡಬೇಕು ಎಂದು ಸಿದ್ದರಾಮಯ್ಯ ಹೇಳಿದರು.

ಈ ಮೊದಲು ಕೃಷಿಯಲ್ಲಿ ಕೊಟ್ಟಿಗೆ ಗೊಬ್ಬರ ಬಳಕೆ ಮಾಡುತ್ತಿದ್ದರು. ಆದರೆ ಈಗ ರಾಸಾಯನಿಕ ಗೊಬ್ಬರ ಬಳಕೆ ಮಾಡಲಾಗುತ್ತಿದೆ. ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದನೆ ಮಾಡಲು ಭಾರತದಲ್ಲಿ 60ರ ದಶಕದಲ್ಲಿ ಕೃಷಿ ಕ್ರಾಂತಿ ಆರಂಭವಾಯಿತು. ಈ ವೇಳೆ ರಾಸಾಯನಿಕ ಗೊಬ್ಬರ ಉತ್ಪಾದನೆ ಬಳಸಲು ಆರಂಭಿಸಲಾಯಿತು. ಈ ಕಾರಣದಿಂದ ಸಾವಯವ ಕೃಷಿ ಮರೆಯಾಗಿ ರಾಸಾಯನಿಕ ಗೊಬ್ಬರ ಹೆಚ್ಚಾಗಿ ಬಳಸಲಾಗುತ್ತಿದೆ. ಇದರಿಂದ ಅನೇಕ ರೋಗಗಳು ಬರುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಶಾಸಕರಾದ ಕೆ.ಹರೀಶ್‌ಗೌಡ, ಡಾ.ತಿಮ್ಮಯ್ಯ, ಜಿಲ್ಲಾ ಸರ್ವೇಕ್ಷಣ ಅಧಿಕಾರಿ ಡಾ.ಡಿ.ಜಿ.ನಾಗರಾಜ್, ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ನೌಕರರ ಸಂಘದ ರಾಜ್ಯಾಧ್ಯಕ್ಷ ಮಮಿತ್ ಗಾಯಕ್ವಾಡ್, ರಾಜ್ಯ ಪ್ರಧಾನ ಕಾರ್ಯದರ್ಶಿ ಚನ್ನಪ್ಪ ನಾಯ್ಕ, ಖಜಾಂಚಿ ಗಿಡ್ಡೇಗೌಡ, ರಾಜ್ಯ ಸಂಘಟನಾ ಸಮಿತಿ ಉಪಾಧ್ಯಕ್ಷ ಬಸವನಂದ ಹೊಸಮನಿ, ಸಂಘಟನಾ ಕಾರ್ಯದರ್ಶಿ ಮಲ್ಲಿಕಾರ್ಜುನ್ ನೂಲಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಸೇರಿದಂತೆ ರಾಜ್ಯಾದ್ಯಂತ ಗೃಹ ಆರೋಗ್ಯ ಯೋಜನೆ ವಿಸ್ತರಣೆ

ಆರೋಗ್ಯ ಸಚಿವ ದಿನೇಶ್ ಗೂಂಡೂರಾವ್ ಭರವಸೆ



ಮೈಸೂರು, ಫೆ.1(ಬಿಎಲ್‌ಯು)– ಕೋಲಾರದಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಿರುವ ಗೃಹ ಆರೋಗ್ಯ ಯೋಜನೆಯನ್ನು ಮೈಸೂರು ಸೇರಿದಂತೆ ರಾಜ್ಯಾದ್ಯಂತ ಜಾರಿಗೊಳಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಇಂದು ನಡೆದ ರಾಜ್ಯ ಮಟ್ಟದ ಸಮುದಾಯ ಆರೋಗ್ಯಾಧಿಕಾರಿ ಗಳ ಸಂರಕ್ಷಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಪ್ರತಿ ಮನೆಗೆ ಹೋಗಿ ವಿವಿಧ ಆರೋಗ್ಯ ಸೇವೆ ನೀಡುವ ಈ ಯೋಜನೆಗೆ ಕೋಲಾರದಲ್ಲಿ ಉತ್ತಮ ಸ್ಪಂದನೆ ದೊರೆತ ಕಾರಣ ರಾಜ್ಯಾದ್ಯಂತ ವಿಸ್ತರಣೆ ಮಾಡಲಾಗುವುದು ಎಂದರು.

ಮೈಸೂರು ಜಿಲ್ಲೆಂಯಲ್ಲಿ 235 ಆರೋಗ್ಯ ಮಂದಿರ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದರಲ್ಲಿ 58 ಆರೋಗ್ಯ ಮಂದಿರವನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಗುವುದು ಎಂದರು.

ಸಮುದಾಯ ಆರೋಗ್ಯಾಧಿಕಾರಿಗಳಿಗೆ ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಮಾದರಿಯಲ್ಲಿ ಆರೋಗ್ಯ ವಿಮೆ ಸೌಲಭ್ಯ ಕಲ್ಪಿಸಲಾಗುವುದು ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ಬಹಳಷ್ಟು ಜನರಿಗೆ ಆರ್ಥಿಕ ಸಂಕಷ್ಟದ ಕಾರಣ ಖಾಸಗಿ ಆಸ್ಪತ್ರೆಗೆ ಹೋಗಲು ಸಾಧ್ಯವಾಗುವುದಿಲ್ಲ. ಇದರಿಂದ ಸರ್ಕಾರಿ ಆಸ್ಪತ್ರೆಯನ್ನೆ ಅವಲಂಬಿಸಿರುತ್ತಾರೆ. ಈ ಹಿನ್ನೆಲೆ ಸಮುದಾಯ ಆರೋಗ್ಯಾಧಿಕಾರಿಗಳು ಜನರ ನಿರೀಕ್ಷೆಯಂತೆ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಗುಣಾತ್ಮಕ ಆರೋಗ್ಯ ಸೇವೆ ಆ ದೇಶದ ಅಭಿವೃದ್ಧಿಯನ್ನು ಬಿಂಬಿಸಲಿದೆ. ಈ ಹಿನ್ನೆಲೆ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರು ಪ್ರಾಮಾಣಿಕ ಹಾಗೂ ಸಮರ್ಥವಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ರಾಷ್ಟ್ರೀಯ ಆರೋಗ್ಯ ಅಭಿ ಯಾನದಲ್ಲಿ ನೀವೆಲ್ಲಾ ನೇಮಕ ಗೊಂಡಿದ್ದೀರಾ. ಇದರಿಂದ ನಿಮ್ಮನ್ನು ಖಾಯಂಗೊಳಿಸಲು ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ನಡೆಸಬೇಕು. ಈ ಹಿನ್ನೆಲೆ ಖಾಯಂಮಾತಿ ಬಗ್ಗೆ ಸ್ಪಷ್ಟವಾಗಿ ಖಚಿತ ಭರವಸೆ ನೀಡಲು ಸಾಧ್ಯವಿಲ್ಲ. ಆದರೆ ನೀವು ಸಲ್ಲಿಸಿರುವ ಉಳಿದ ಬೇಡಿಕೆಗಳನ್ನು ಈಡೇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮತಿಸಿದ್ದಾರೆ ಎಂದು ತಿಳಿಸಿದರು.

ನಿಮ್ಮ ಬೇಡಿಕೆ ಈಡೇರಿಸಲು ನಾನು ಒಪ್ಪಿದ್ದೇವೆ. ಆದರೆ ಸರ್ಕಾರದ ನಿರೀಕ್ಷೆಯಂತೆ ನೀವು ಕಾರ್ಯನಿರ್ವಹಿಸಬೇಕು ಎಂದು ದಿನೇಶ್ ಗೂಂಡೂರಾವ್ ತಾಕೀತು ಮಾಡಿದರು.

ನಾಳೆ ‘ಸೋಮವಾರ ಸಂತೆ’ಗೆ ಚಾಲನೆ




ಮೈಸೂರು, ಫೆ1–ಮೈಸೂರು ತಾಲೂಕು ಜಯಪುರ ಗ್ರಾಮ ಪಂಚಾಯಿತಿ ವತಿಯಿಂದ ನೂತನವಾಗಿ ಆರಂಭಿಸಲಾಗಿರುವ ‘ಸೋಮವಾರ ಸಂತೆ’ಗೆ ಫೆ.3ರಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಲಿದ್ದಾರೆ.

ಜಯಪುರ ಹೋಬಳಿಯ ಕೇಂದ್ರದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಡಿಜಿಟಲ್ ಗ್ರಂಥಾಲಯ ಕಟ್ಟಡ ಮತ್ತು 3 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಲಿದ್ದಾರೆ. ಜಯಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ 57 ಮಂದಿ ಅಂಗವಿಕಲರಿಗೆ 5 ಸಾವಿರ ರೂ. ಸಹಾಯಧನ ಚೆಕ್ ವಿತರಣೆ, ಪಿಹೆಚ್.ಡಿ ವ್ಯಾಸಂಗ ಮಾಡುತ್ತಿರುವ ಇಬ್ಬರು ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ವಿತರಣೆ ಹಾಗೂ ಇತ್ತೀಚೆಗೆ ಅನಾರೋಗ್ಯದಿಂದ ಮೃತಪಟ್ಟವರ ಶವಸಂಸ್ಕಾರಕ್ಕೆ ಸಹಾಯಧನ ಚೆಕ್ ವಿತರಣೆ ಮಾಡುವರು.


ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣ ಅಧಿಕಾರಿ ಕೆ.ಎಂ.ಗಾಯಿತ್ರಿ, ಮೈಸೂರು ತಾಲೂಕು ತಹಸೀಲ್ದಾರ್ ಕೆ.ಎಂ ಮಹೇಶ್ ಕುಮಾರ್, ತಾಲೂಕು ಪಂಚಾಯತ್ ಇಓ ಸಿ.ಕೃಷ್ಣ, ಪಂಚಾಯತ್ ರಾಜ್ ಮೈಸೂರು ಉಪವಿಭಾಗ ಸಹಾಯಕ ಎಂಜಿನಿಯರ್ ಎಚ್.ಸಿ.ರವಿಕುಮಾರ್, ತಾಲೂಕು ಮಟ್ಟದ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಜಯಪುರ ಗ್ರಾಮ ಪಂಚಾಯಿತಿ ಪಿಡಿಓ ಬಸವಣ್ಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೈಲ್ವಾನ್ ಮರಿಗೌಡ ನಿಧನ



ಮೈಸೂರು: ಮೈಸೂರಿನ ಸರಸ್ವತಿಪುರಂ 6ನೇ ಮೇನ್ ನಿವಾಸಿ ಪೈ.ಮರಿಗೌಡರು ಶನಿವಾರ ಸಂಜೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಸರೋಜಮ್ಮ, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 12 ಗಂಟೆಗೆ ಕೆ.ಜಿ.ಕೊಪ್ಪಲಿನ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.


ದೊಡ್ಡ ಮೊಗಶೆಟ್ಟಿ



ಕೆ.ಆರ್.ಪೇಟೆ: ತಾಲೂಕಿನ ಆಲಂಬಾಡಿ ಗ್ರಾಮದ ಹಿರಿಯ ಮುಖಂಡರಾದ ದೊಡ್ಡ ಮೊಗಶೆಟ್ಟಿ ಶುಕ್ರವಾರ ನಿಧನ ಹೊಂದಿದರು.

ಮೃತರು ಪತ್ನಿ, ಪುತ್ರ ಕೆಎಸ್‌ಆರ್‌ಟಿಸಿ ನಿರ್ವಾಹಕ ಮಂಜುನಾಥ್, ಸೇರಿದಂತೆ ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶನಿವಾರ ಮಧ್ಯಾಹ್ನ ಸ್ವಗ್ರಾಮ ಆಲಂಬಾಡಿ ಗ್ರಾಮದಲ್ಲಿ ನಡೆಯಿತು.

ಸುಬ್ಬರಾಯ



ಮೈಸೂರು: ವಿಜಯನಗರ 4ನೇ ಹಂತ 3ನೇ ಫೇಸ್ ನಿವಾಸಿಯಾದ, ನಿವೃತ್ತ ಮುಖ್ಯೋಪಾಧ್ಯಾಯ ಎನ್.ಸುಬ್ಬರಾಯರು (87) ಬುಧವಾರ ಸ್ವಗೃಹದಲ್ಲಿ ನಿಧನರಾದರು.

ಟಿ.ನರಸೀಪುರದ ದಳವಾಯಿ ಅಗ್ರಹಾರದ ನಂಜುಂಡಶಾಸ್ತ್ರಿ ನರಸಮ್ಮರವರ ಪುತ್ರ ಹಾಗೂ ಸಹಕಾರಿ ಧುರೀಣರಾದ ಬಿ.ಕೆ. ಆತ್ಮರಾಮ್‌ರವರ ಬಾಮೈದರಾಗಿದ್ದ ಸುಬ್ಬರಾಯರು ವಿದ್ಯಾರಣ್ಯಪುರಂ ಸಾರ್ವಜನಿಕ ಪ್ರೌಢಶಾಲೆ, ಅಗರ, ಯಳಂದೂರು ಪುರಿಗಾಲಿ, ಚಾಮುಂಡಿಬೆಟ್ಟದ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಸಮಾಜ ವಿಜ್ಞಾನ ವಿಭಾಗದಲ್ಲಿ ಶಿಕ್ಷಕರಾಗಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದ್ದರು, ಸಹೋದರಿ ಎನ್.ವಿಶಾಲಕ್ಷಮ್ಮ ಸೇರಿದಂತೆ ಬಂಧುಮಿತ್ರರು ಮತ್ತು ಅಪಾರ ಶಿಷ್ಯ ವೃಂದವನ್ನು ಅಗಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.02.2025 ಭಾನುವಾರ, ಮಳೆ ನಕ್ಷತ್ರ: ಶ್ರವಣ 24.01.2025 ರಿಂದ 05.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಉಭಾ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** ಬೆಳಗ್ಗೆ 9 ಗಂಟೆಗೆ ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತ ಪಿತ್ತ) ಚಿಕಿತ್ಸಾ ಶಿಬಿರ; ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ.

■ **ನೇತ್ರಧಾಮ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಬೆಂಗಳೂರು, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣಾ ಘಟಕ, ಮೈಸೂರು, ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆ ಐಸಿಟಿಸಿ ವಿಭಾಗ, ಜಿಲ್ಲಾ ಮಾನಸಿಕ ಆರೋಗ್ಯ ಕೇಂದ್ರ, ಎನ್.ಜೆ.ಆಸ್ಪತ್ರೆ, ಕೆವಿಸಿ ಆಸ್ಪತ್ರೆ, ಆರ್ಯ ಆಸ್ಪತ್ರೆ, ಶ್ರೀನಿವಾಸ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ:** ಉಚಿತ ಕಣ್ಣಿನ ತಪಾಸಣೆ, ಸಮಗ್ರ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಮೈಸೂರು ಒನ್ ಮೈದಾನ, ಗೋಕುಲಂ 3ನೇ ಹಂತ, ವಾರ್ಡ್ ನಂ. 6, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ಗಾನಭಾರತೀ :** ಹರಿದಾಸೋತ್ಸವ ಮತ್ತು ತ್ಯಾಗರಾಜರ ಆರಾಧನೆ, ಬೆಳಗ್ಗೆ 10 ರಿಂದ ಹಿಂದೂಸ್ಥಾನಿ ಗಾಯನದಲ್ಲಿ ಹರಿದಾಸ ಕೀರ್ತನೆ, ವಿದುಷಿ ಸಂಧ್ಯಾ ಭಟ್–ಗಾಯನ, ವಿದ್ವಾನ್ ಡಿ.ಎನ್. ಇಂದ್ರಕುಮಾರ್–ಹಾರ್ಮೋನಿಯಂ, ವಿದ್ವಾನ್ ರಮೇಶ್ ಧನ್ನೂರ್–ತಬಲಾ; ಬೆಳಗ್ಗೆ 10.45 ರಿಂದ ಕರ್ನಾಟಕ ಶೈಲಿಯಲ್ಲಿ ಹರಿದಾಸ ಕೀರ್ತನೆ, ವಿದುಷಿ ಪೃಥ್ವಿ ಭಾಸ್ಕರ್–ಗಾಯನ, ವಿದ್ವಾನ್ ಕೇಶವ ಮೋಹನ್ ಕುಮಾರ್–ಪಿಟೀಲು, ವಿದ್ವಾನ್ ಎ. ರಾಧೇಶ್–ಮೃದಂಗ; ಮಧ್ಯಾಹ್ನ 12 ರಿಂದ ನಗರದ ವಿದುಷಿಯರು ವಿದ್ವಾಂಸರಿಂದ ತ್ಯಾಗರಾಜರ ಪಂಚರತ್ನ ಕೃತಿಗಳು ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ.

■ **ಬಸವ ಸಮಿತಿ:** ಶರಣ ಸಂಗಮ–302, ಡಾ. ಹೆಚ್.ಯು. ಸುಕುಮಾರಿ ಅವರಿಂದ ಆರೋಗ್ಯಕರ ಜೀವನ ಶೈಲಿ ಹಾಗೂ ಜೀವನ ಕ್ರಮ ಬದಲಾವಣೆಯ ಅಗತ್ಯತೆ ಕುರಿತು ಉಪನ್ಯಾಸ, ಅಭಿನಂದಿತರು : ಬಸವ ಜಯಂತಿ ಅಧ್ಯಕ್ಷ ಬಿ.ಕೆ. ನಾಗರಾಜು, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಕ್ರಿಯಾ ಅಭಿವ್ಯಕ್ತಿ ಸಾಂಸ್ಕೃತಿಕ ಘಟಕ :** ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಹುತಾತ್ಮರಾದ ಸರ್ವೋದಯ ದಿನದ ಸಂದರ್ಭವನ್ನು ನೆನೆದು ಕವನ ಸಂಕಲನ ರೂಪದಲ್ಲಿ ಹೊರತರುತ್ತಿರುವ ಸಾಹಿತಿ ಡಾ.ನೀ.ಗೂ.ರಮೇಶ್ ಅವರ ‘ಗಾಂಧೀಮರ’ ಕವನ ಸಂಕಲನ ಲೋಕಾರ್ಪಣೆ, ಕೃತಿ ಬಿಡುಗಡೆ : ಹಿರಿಯ ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್ (ಸಿ.ಪಿ.ಕೆ), ಮುಖ್ಯ ಅತಿಥಿಗಳು : ಗಾಂಧಿವಾದಿಗಳು ಹಾಗೂ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಎಚ್.ಜೆ.ಸರಸ್ವತಿ, ಕೃತಿ ಕುರಿತು : ಲೇಖಕ ಪ್ರಸನ್ನಕುಮಾರ್ ಕೆರಗೋಡು, ಉಪಸ್ಥಿತರು : ಪ್ರಕಾಶಕರಾದ ಕೆ.ಸಿ.ಓಂಕಾರಪ್ಪ, ಕವಿಗಳಾದ ಡಾ.ನೀ.ಗೂ.ರಮೇಶ್, ಸ್ಥಳ: ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಭಾಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ವ್ಯವಸ್ಥಾಪಕರು :** ಸುಗ್ಗಿ ಸಂಭ್ರಮ, ಮುಳ್ಳೂರು ಶಾಲೆಯ ವಿದ್ಯಾರ್ಥಿಗಳಿಂದ ಕನ್ನಡದ ಹುಲಿ ಟಿಪ್ಪು ನಾಟಕ ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ನಿರ್ದೇಶನ : ಕೀರ್ತಿರಾಜ, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ವ್ಯವಸ್ಥಾಪಕರು :** ಗಂಗಾಧರ್ ಕಂದೇಗಾಲರವರ ‘ಬೆಂಕಿ ಬಿರುಗಾಳಿ’ ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಸುಗತಪಾಲ್ ಬಂತೇಜಿ, ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಉದ್ಘಾಟನೆ: ಶಾಸಕ ದರ್ಶನ್ ಧ್ರುವನಾರಾಯಣ್, ಅಧ್ಯಕ್ಷತೆ : ಮಾಜಿ ಮೇಯರ್ ಪುರುಷೋತ್ತಮ್, ಕೃತಿ ಲೋಕಾರ್ಪಣೆ : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದೀಪಕ್, ಕೃತಿ ಕುರಿತು : ಬರಹಗಾರ ಹರಕುಮಾರ್, ಅನುಸೋಗೆ ಸೋಮಶೇಖರ್, ಮುಖ್ಯ ಅತಿಥಿಗಳು : ಶ್ರೀಮತಿ ಪುಷ್ಪ ಅಮರನಾಥ್, ಗೋವಿಂದಸ್ವಾಮಿ ಗುಂಡಾಪುರ, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಅಶೋಕ ಸರ್ಕಲ್, ಬೆಳಗ್ಗೆ 10.30ಕ್ಕೆ.

■ **ಸುಯೋಗ್ ಆಸ್ಪತ್ರೆ :** ಸುಯೋಗ ವಾಣಿ ಮಾಸಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಸಮಾರಂಭ, ಪ್ರಥಮ ಸಂಚಿಕೆ ಬಿಡುಗಡೆ : ಹಿರಿಯ ಪತ್ರಕರ್ತ ರವೀಂದ್ರ ಭಟ್, ಅಧ್ಯಕ್ಷತೆ : ವೈದ್ಯ ಸಾಹಿತಿ ಡಾ. ನಾ. ಸೋಮೇಶ್ವರ, ಮುಖ್ಯ ಅತಿಥಿಗಳು : ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್ ವ್ಯವಸ್ಥಾಪಕ ಸಂಪಾದಕ ವಿಕ್ರಂ ಮುತ್ತಣ್ಣ, ಉಪಸ್ಥಿತರು : ಡಾ. ಎಸ್.ಪಿ. ಯೋಗಣ್ಣ, ಡಾ. ಸೀಮಾ ಯೋಗಣ್ಣ, ಡಾ. ಆರ್. ರಾಜೇಂದ್ರಪ್ರಸಾದ್, ಡಾ. ಸುಯೋಗ್ ಯೋಗಣ್ಣ, ಡಾ.ಯಶಿತಾ ರಾಜ್, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ಖಾಸಗಿ ಅನುದಾನಿತ ಕಾಲೇಜುಗಳ ಆಡಳಿತಾತ್ಮಕ ಸಿಬ್ಬಂದಿಯವರ ಕ್ಷೇಮಾಭಿವೃದ್ಧಿ ಸಂಘ :** ನಿವೃತ್ತ ಸಹೋದ್ಯೋಗಿ ಮಿತ್ರರಿಗೆ ಸನ್ಮಾನ ಸಮಾರಂಭ, ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಮುಖ್ಯ ಅತಿಥಿಗಳು : ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ಧರ್ಮಪ್ರಕಾಶ ಡಿ. ಬನುಮಯ್ಯ ವಿದ್ಯಾಸಂಸ್ಥೆ ಅಧ್ಯಕ್ಷ ಡಾ. ವಿ.ಬಿ. ಜಯದೇವ, ಕಾಲೇಜು ಶಿಕ್ಷಣ ಇಲಾಖೆ ಸಹಾಯಕ ನಿರ್ದೇಶಕ ಎ.ಬಿ. ನಾಗೇಂದ್ರ ಪ್ರಸಾದ್, ಬನುಮಯ್ಯ ಕಾಲೇಜು ಪ್ರಿನ್ಸಿಪಾಲ್ ಬಸವರಾಜು, ನಿವೃತ್ತ ಪತ್ರಾಂಕಿತ ವ್ಯವಸ್ಥಾಪಕ ಎಲ್. ಗುರುಸ್ವಾಮಿ, ಸ್ಥಳ: ಡಿ. ಬನುಮಯ್ಯ ಕಲಾ ಭವನ, ಬೆಳಗ್ಗೆ 11ಕ್ಕೆ

■ **ಶ್ರೀ ಪಂಚಶನೇಶ್ವರಸ್ವಾಮಿ ಆರಾಧನಾ ಮಹೋತ್ಸವ ಹಾಗೂ ಮಲೆಯಾಳದ ಹುತ್ತೂರಮ್ಮನ ಜಾತ್ರೆ** : ಸಾನ್ನಿಧ್ಯ : ಒಕ್ಕಲಿಗರ ಪರ್ಯಾಯ ಮಠದ ಸಂಸ್ಥಾಪಕ ಶ್ರೀ ಕುಮಾರ ಚಂದ್ರಶೇಖರ ಸ್ವಾಮೀಜಿ, ಉದ್ಘಾಟನೆ : ಶ್ರೀ ತ್ರಿನೇತ್ರ ಮಹಾನಂದಯೋಗಿ ಸ್ವಾಮೀಜಿ, ಸಮ್ಮುಖ : ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಶಿವಾನಂದಪುರಿ ಮಹಾ ಸ್ವಾಮೀಜಿ, ಶ್ರೀ ಮುಮ್ಮಡಿ ಶಿವಾಚಾರ್ಯ ಸ್ವಾಮೀಜಿ, ಶ್ರೀ ಘಟಕಸ್ಥಳ ಬ್ರಹ್ಮಶ್ರೀ ಬಸವಲಿಂಗ ಸ್ವಾಮೀಜಿ, ಶ್ರೀಗುರುಶಾಂತ ಮಹಾ ಸ್ವಾಮೀಜಿ, ಶ್ರೀ ನಟರಾಜ ಮಹಾಸ್ವಾಮೀಜಿ, ಉದ್ಘಾಟನೆ : ಮುಖ್ಯ ಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ : ಟಿ.ಎಸ್.ಶ್ರೀವತ್ಸ, ಉಪಸ್ಥಿತರು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಚಿವ ಕೆ.ವೆಂಕಟೇಶ್, ಶಿವಪ್ರಕಾಶ್ ಗುರೂಜಿ, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ.ದೇವರಾಜ್, ಎಂ.ಎಸ್.ರಮೇಶ್‌ಕುಮಾರ್, ಮಾ. ವೆಂಕಟರಾಮ್, ಸ್ಥಳ: ನಜರ್‌ಬಾದ್ ಮೊಹಲ್ಲಾ, ಸಿದ್ದಾರ್ಥನಗರ, ಕಮಾನ್‌ಗೇಟ್ ಪಕ್ಕದಲ್ಲಿರುವ ಲಲಿತ ಮಹಲ್ ಹೋಟೆಲ್ ಮುಂಭಾಗದ ಹಸಿರು ಚಪ್ಪರದ ಆವರಣ, ಮಧ್ಯಾಹ್ನ 1ಕ್ಕೆ.

■ **ವಿಶಾರ ಸಂಸ್ಥೆ:** ಹಾವೇರಿ, ಹಾನಗಲ್ ತಾಲೂಕಿನ ಗಜಾನನ ಯುವಕ ಮಂಡಳಿಯಿಂದ ಕುವೆಂಪು ವಿರಚಿತ ‘ಶ್ರೀರಾಮಾಯಣ ದರ್ಶನಂ’ ಕುರಿತು ಆಧಾರಿತ ವಾಲಿವಧೆ ನಾಟಕ ಪ್ರದರ್ಶನ, ನಿರ್ದೇಶನ: ಗಣೇಶ ಮಂದಾರ್ತಿ ಉಡುಪಿ, ಸ್ಥಳ: ಕಲಾಮಂದಿರ, ಮಧ್ಯಾಹ್ನ 3 ಮತ್ತು 7 ಗಂಟೆಗೆ.

■ **ಸಂಸ್ಕೃತ ಭಾರತಿ ಕರ್ನಾಟಕ ದಕ್ಷಿಣ ಸಂಸ್ಕೃತ ಕಾವೇರಿ:** ಪ್ರಾಂತ ಸಮ್ಮೇಳನ–ಮೈಸೂರು, ಬೆಳಗ್ಗೆ 8.45ಕ್ಕೆ ಸಂಸ್ಕೃತ ಭಾರತಿ ಒಂದು ಸಂಘಟನೆ, ಮುಖ್ಯ ವಕ್ತಾರ : ದೆಹಲಿ, ಅಖಿಲ ಭಾರತೀಯ ಸಂಘಟನೆ ಮಂತ್ರಿ, ಸಂಸ್ಕೃತ ಭಾರತಿ ಜಯಪ್ರಕಾಶ್ ಗೌತಮ್, ಅತಿಥಿಗಳು : ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ. ನಾಗರಾಜರಾವ್, ಅಧ್ಯಕ್ಷತೆ : ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ ಡಾ. ವಿದ್ವಾನ್ ಟಿ.ಎನ್. ಪ್ರಭಾಕರ, ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಸಂಸ್ಕೃತ ಭಾರತಿ, ಕರ್ನಾಟಕ ದಕ್ಷಿಣ ಅಧ್ಯಕ್ಷ ಪ್ರೊ.ಪ.ನಾ. ಶಾಸ್ತ್ರಿ, ಅತಿಥಿಗಳು: ಶಿಲ್ಪಿ ಅರುಣ್ ಯೋಗಿರಾಜ್, ಉಪಸ್ಥಿತರು : ಪ್ರಾಂತ ಮಂತ್ರಿ ಗುರುರಾವ್ ಕುಲಕರ್ಣಿ, ಅಖಿಲ ಭಾರತೀಯ ಪ್ರಧಾನ ಕಾರ್ಯದರ್ಶಿ ಸತ್ಯನಾರಾಯಣ ಭಟ್, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಗೌರಿ ಸಂಗೀತ ಶಾಲೆ :** 10ನೇ ವರ್ಷದ ಶ್ರೀಮದ್ವ ಪುರಂದರೋತ್ಸವ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಸಂಸ್ಕೃತ ಪಂಡಿತ ವಿದ್ವಾನ್ ಡಾ. ಬೆ.ನ. ವಿಜಯೇಂದ್ರಾಚಾರ್, ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಪ್ರಾಂಶುಪಾಲ ಎನ್.ಆರ್. ಮಂಜುನಾಥ, ಪಿಟೀಲು ವಾದಕ ವಿದ್ವಾನ್ ವಿ. ಅಂಬಾಪ್ರಸಾದ್, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ, ನಂಜುಮಳಿಗೆ, ಸಂಜೆ 4.30ಕ್ಕೆ.

■ **ಕೆಎಂಎಂ ಸಮಾಜ ಸೇವಾ ಬಳಗ :** ಜನಾಶೀರ್ವಾದ ಸಮಾವೇಶ, ಉದ್ಘಾಟನೆ : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಮೈಸೂರು ನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ತೋಂಟದಾರ್ಯ, ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ಚಾಮರಾಜ ಕ್ಷೇತ್ರ ಅಧ್ಯಕ್ಷ ದಿನೇಶ್‌ಗೌಡ, ಸ್ಥಳ: ಮೈಸೂರು ಒನ್ ಮೈದಾನ, ಗೋಕುಲಂ 3ನೇ ಹಂತ, ಸಂಜೆ 5 ಗಂಟೆಗೆ

■ **ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನ :** 12ನೇ ಪ್ರತಿಷ್ಠಾಪನ ವರ್ಧಂತಿ ಮಹೋತ್ಸವದ ಪ್ರಯುಕ್ತ ವಿದುಷಿ ಕುಮಾರಿ ಶ್ರೀಲಲಿತಾ ಉಳಿಯಾರು ಅವರಿಂದ ಸುಂದರಕಾಂಡ ಹರಿಕಥೆ, ನಾರಾಯಣ್ – ತಬಲಾ, ಶ್ರೀಹರಿ ಆಚಾರ್ಯ ಹುಳಿಯಾರು–ಹಾರ್ಮೋನಿಯಂ, ಸ್ಥಳ: ಟಿ.ಪಿ.ಕೈಲಾಸಂ ರಂಗಮಂದಿರ, ಸದ್ವಿದ್ಯಾ ಶಾಲೆ, ಸಂಜೆ 6 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ಪುರಂದರದಾಸರ ಮತ್ತು ಶ್ರೀ ತ್ಯಾಗರಾಜರ ಆರಾಧನೆ ಪ್ರಯುಕ್ತ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಸಂಜೆ 6 ರಿಂದ ಕು. ಅರುಣಾ ತ್ಯಾಗರಾಜು ಅವರಿಂದ ಗಾಯನ, ಸಂಜೆ 7.15 ರಿಂದ ವಿದ್ವಾನ್ ಕೆ.ವಿ. ಪ್ರಣವ್ ಅವರಿಂದ ವೇಣು ವಾದನ, ಸಹಕಾರ : ಕು. ಪ್ರೇರಣಾ ಪ್ರವೀಣ್, ವಿದ್ವಾನ್ ಶುಭಾಂಗ್ ಸಾಮಗ, ವಿದ್ವಾನ್ ರವಿಕಿರಣ್ ಭಾರಿಘಾಟ್, ಸ್ಥಳ: ಶ್ರೀ ವಿನಾಯಕ ದೇವಸ್ಥಾನ, ವಿಜಯನಗರ 2ನೇ ಹಂತ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಕಾಣೆ ಆದವರು ನಾಟಕ ಪ್ರದರ್ಶನ, ನಿರ್ದೇಶನ : ಸೌರವ್, ರಂಗಸಜ್ಜಿಕೆ ನಿರ್ವಹಣೆ : ಜನಾರ್ಧನ್ ಪಿ. ರಮೇಶ್, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

■ **ಗುರುದೇವ ಅಕಾಡೆಮಿ ಆಫ್ ಫೈನ್ ಆರ್ಟ್ಸ್ :** ಚೇತನೋತ್ಸವ–2025, ಶಾಸ್ತ್ರೀಯ ನೃತ್ಯಗಳ ಉತ್ಸವ ಹಾಗೂ ವಸಂತ ಪಂಚಮಿ ಹಬ್ಬದ ಆಚರಣೆ, ಬೆಳಗ್ಗೆ 10.30ಕ್ಕೆ ಪ್ರತಿಭಾ ಮಂಜರಿ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ಶ್ರೀಮತಿ ಅನಿತಾ ಸದಾನಂದ ಶುಕ್ಲಾ, ಅಧ್ಯಕ್ಷತೆ : ನಗರ ಪಾಲಿಕೆ ಮಾಜಿ ಸದಸ್ಯ ಎಸ್.ಬಿ.ಎಂ. ಮಂಜು, ಉಪಸ್ಥಿತರು : ಗುರುದೇವ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ಸಂಸ್ಥಾಪಕ ಡಾ. ಪಿ.ಎಂ. ಚೇತನ ರಾಧಾಕೃಷ್ಣ; ಸಂಜೆ 5 ರಿಂದ ಗುರುದೇವ ಅಕಾಡೆಮಿ ಕಿರಿಯ ವಿದ್ಯಾರ್ಥಿಗಳಿಂದ ಭರತನಾಟ್ಯ ಕಾರ್ಯಕ್ರಮ; ಸಂಜೆ 6ಕ್ಕೆ ಗುರುದೇವ ಪ್ರತಿಭಾ ಕುಂಜ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಶ್ರೀಮತಿ ಜಾಹ್ನವಿ ಮೂರ್ತಿ, ತುಮಕೂರು ವಿವಿ ವಿಶ್ರಾಂತ ಕುಲಪತಿ ಡಾ.ವೈ.ಎಸ್. ಸಿದ್ದೇಗೌಡ, ಗುರುದೇವ ಪ್ರಶಸ್ತಿ ಮತ್ತು ಸನ್ಮಾನ : ಬೆಂಗಳೂರು ಆತ್ಮಾಲಯ ಅಕಾಡೆಮಿ ಅಧ್ಯಕ್ಷೆ ಡಾ. ಪದ್ಮಜಾ ವೆಂಕಟೇಶ್ ಸುರೇಶ್, ಅಧ್ಯಕ್ಷತೆ : ಗುರುದೇವ ಅಕಾಡೆಮಿ ವ್ಯವಸ್ಥಾಪಕ ನಿರ್ದೇಶಕ ಪಿ.ಎಂ. ರಾಧಾಕೃಷ್ಣ, ಉಪಸ್ಥಿತರು : ಗುರುದೇವ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ಸಂಸ್ಥಾಪಕ ಡಾ. ಚೇತನ ರಾಧಾಕೃಷ್ಣ ಪಿ.ಎಂ., ಸ್ಥಳ: ಜಗನ್ಮೋಹನ ಅರಮನೆ.


ನೇರಳೆಯಲ್ಲಿಂದು (ಹೆಚ್.ಡಿ.ಕೋಟೆ ತಾ.)

■ **ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ, ಬೆಳಗ್ಗೆ 7ಕ್ಕೆ ಸರಳ ವ್ಯಾಯಾಮ, ಬೆಳಗ್ಗೆ 8.30 ರಿಂದ ಶ್ರಮದಾನ, ಸಂಜೆ 4ಕ್ಕೆ ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ : ಅಂತರಸಂತೆ ಕೃಷಿ ಪತ್ತಿನ ಸಹಕಾರ ಸಂಘದ ಸಿಇಓ ಕಾಳಿಹುಂಡಿ ಸಿದ್ದೇಗೌಡ, ಸ್ಥಳ: ನೇರಳೆ ಗ್ರಾಮ

ಹೆಬ್ಬಾಡಿ ಗ್ರಾಮದಲ್ಲಿಂದು, ಶ್ರೀರಂಗಪಟ್ಟಣ ತಾಲೂಕು

■ **ಶ್ರೀ ಕೋಡಿಲಿಂಗೇಶ್ವರಸ್ವಾಮಿ ದೇವಸ್ಥಾನ :** ಪ್ರತಿಷ್ಠಾಪನಾ ಕಾರ್ಯಕ್ರಮ, ಅಗ್ರೋಧಕ, ಯಾಗಶಾಲಾ ಪ್ರವೇಶ, ಪುಣ್ಯಾಹ, ಪಂಚಗವ್ಯ, ದೈವನಾಂದಿ, ರಕ್ಷಾಬಂಧನ, ಹೋಮ ಹವನಾದಿಗಳು, ದೇವತಾ ಕಾರ್ಯಗಳು, ಸ್ಥಳ: ದೇವಸ್ಥಾನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಅರ್ಚನಾ. ಆರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ. ವಿಶ್ವನಾಥ್, ಎನ್. ಹೇಮಾ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕರುನಾಡ ಕಲ್ಪವೃಕ್ಷ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು, 9.05 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ‘ರುಮೆಟಾಯ್ಡ್ ಆರ್‌ಥ್ರೈಟಿಸ್ ಡೇ’ ಕುರಿತು ಮೈಸೂರಿನ ಜೆ.ಎಸ್.ಎಸ್ ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆಯ ಸಂಧಿವಾತ ಮತ್ತು ಕೀಲುರೋಗ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಹಬಲೇಶ್ವರ ಮಮದಾಪುರ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH-TRISH and Balty boy ನಾವು ಭಾರತೀಯರು ‘ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕು ಚೆಲ್ಲುವ ಬಾನುಲಿ ಸರಣಿ’, 10.45 ಮಕ್ಕಳ ಮಂಟಪ– ‘ಹಕ್ಕಿಗೂಡು’, ಪುನರಾವರ್ತನೆ ಅಧ್ಯಯನ ಕುರಿತು ತಿಳಿಸುತ್ತಾರೆ–ಕೆ.ಎಸ್.ಮುಕುಂದನ್, ಸಮೂಹ ಗಾಯನ, ಕಥೆ, ಪ್ರಸ್ತುತಿ: ಎಂ.ಎಸ್.ಭಾರತಿ **ಮಧ್ಯಾಹ್ನ:** 12.05 ವನಿತಾ ವಿಹಾರ – ಭಕ್ತ ರಾಮದಾಸರ ನವರತ್ನ ಕೀರ್ತನೆಗಳನ್ನು ಆದರಿಸಿದ ಸಂಗೀತ ಕಾರ್ಯಕ್ರಮ. ಪ್ರಸ್ತುತಿ– ಬೆಂಗಳೂರಿನ ರಾಮಾಮೃತ ಗಾನವೃಂದದ ಅನುಪಮಾ ಪಂಡಿತ್ ಮತ್ತು ತಂಡದವರು, 12.35 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ–ತಲಕಾಡಿನ ಭಟ್ಟಮ್ಮ ಮತ್ತು ಸಂಗಡಿಗರಿಂದ ಬಂಡರಸಮ್ಮನ ಹಾಡು, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, KERA ಸುರಕ್ಷಾ ವಿಮಾ ಯೋಜನೆ ಈ ಕುರಿತು ಮಾತನಾಡುತ್ತಾರೆ ಮಹಬಲೇಶ್ವರ ಶಾಸ್ತ್ರಿ, ಪ್ರಸ್ತುತಿ: ತಿಮ್ಮಪ್ಪ .ಎಚ್.ಗೌಡ, 1.20 ಭಾವಗೀತೆಗಳು–ಸಾವಿತ್ರಿ ಪ್ರಭಾಕರ್, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ– ಸೋತು ಗೆದ್ದವಳು, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ– ತಾಳಮದ್ದಲೆ, ಪ್ರಸಂಗ–ಶಶಿಪ್ರಭಾ ಪರಿಣಯ, ಪ್ರಸ್ತುತಿ: ಮಂಗಳೂರು ಕುಳಾಯಿಯ ಯಕ್ಷಜ್ಯೋತಿ ಮಹಿಳಾ ಯಕ್ಷಗಾನ ಸಂಘದ ಸದಸ್ಯರು, 4.45 ಚಿತ್ರಗೀತೆಗಳು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ–ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ– ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಹಾದಿಯಲ್ಲಿ ಕಂಡ ಮುಖ– ಬಾನುಲಿ ಸರಣಿ, ಮೈಸೂರು ತಾಲೂಕು ರಮ್ಮನಹಳ್ಳಿಯ ನೀಲಗಾರ ಗಾಯಕ ಅಂಕಪ್ಪ ಅವರೊಂದಿಗೆ ಸಂವಾದ. ಪ್ರಸ್ತುತಿ : ಅಬ್ದುಲ್ ರಶೀದ್, 9.15 ರಂಗಗೀತೆಗಳು –ಮಹಾಕವಿ ಕಾಳಿದಾಸ ನಾಟಕದ ಹಾಡು, 9.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ವಿದುಷಿ ಮಧುಭಟ್ ತೈಲಂಗ್–ಧ್ರುಪದ್ ಧಮರ್ ಗಾಯನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಫೆಬ್ರವರಿ 2 ಭಾನುವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 285 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಕ್ಕರೆ ಅದೇ ಸ್ವರ್ಗ

ಯಮ : ನೀನು ಸಿಡಿಲು ಬಡಿದು ಸತ್ತೆ, ಆದರೂ
ಸತ್ತವ : ಆದರೂ ಏನು ಪ್ರಭು?
ಯಮ : ಸಾಯೋವಾಗ ಯಾಕೆ ನಗ್ತಾ ಇದ್ದೆ?
ಸತ್ತವ : ಸಿಡಿಲು ಬರುವ ಮುನ್ನ ಮಿಂಚು ಬಂತು ಯಾರೋ ಬಡ್ಡಿ ಮಕ್ಕಳು ಫೋಟೋ ತೆಗೀತಾ ಇರಬೇಕು ಅಂತಾ ಸ್ಮೈಲ್ ಕೊಟ್ಟೆ ಪ್ರಭು

ಮೈಸೂರು ಮಿತ್ರ
ಭಾನುವಾರ, 2 ಫೆಬ್ರವರಿ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಅಕ್ಕರೆ ಇಲ್ಲದ ಸಂಬಂಧಕ್ಕೆ
ಬಿಕ್ಕಿ ಬಿಕ್ಕಿ ಕಣ್ಣೀರಿಟ್ಟರೇನು? ಅದು ನೀಡುವುದು
ಬೇವಿನ ಕಹಿಯೇ ಹೊರತು ಬೆಲ್ಲದ ರುಚಿಯನ್ನಲ್ಲ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನದಲ್ಲ ಸರ್ವ ಆಸ್ತಿ, ಒಳ್ಳೆಯದಲ್ಲ ಗರ್ವ ಜಾಸ್ತಿ.

ನಿಮ್ಮ ಪತ್ರಗಳು

ದೆಹಲಿ ಚುನಾವಣೆ: ಗ್ಯಾರಂಟಿಗಳಿಗೆ ಜನ ಮಾರುಹೋಗದಿರಲಿ!

ಮಾನ್ಯರೆ,

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಮುಂದಿನ ತಿಂಗಳ 5 ರಂದು ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ಶತಾಯ ಗತಾಯ ಜಯ ಗಳಿಸಬೇಕು ಎಂಬ ಗುರಿಯೊಂದಿಗೆ ಬಿಜೆಪಿ, ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷ (ಎಎಪಿ) ಭಾರಿ ಪ್ರಯತ್ನ ನಡೆಸಿವೆ. ಈ ಚುನಾವಣೆಯಲ್ಲಿ ಸ್ಪರ್ಧಿಸಿರುವ ವಿವಿಧ ರಾಜಕೀಯ ಪಕ್ಷಗಳು ಈ ಹಣಾಹಣಿಯನ್ನು ಒಂದು ರೀತಿಯ 'ಮಾಡು ಇಲ್ಲವೆ ಮಡಿ' ಕದನವಾಗಿ ಪರಿಗಣಿಸಿ ಮತದಾರರಿಗೆ ಹಲವು ಗ್ಯಾರಂಟಿಗಳ ಆಸೆ ಆಮಿಷ ಹಾಗೂ ಆಶ್ವಾಸನೆಗಳನ್ನು ನೀಡುತ್ತಿವೆ.

ಚುನಾವಣೆ ವೇಳೆಯ ಸಮಯದಲ್ಲಿ ರಾಜಕೀಯ ಪಕ್ಷಗಳು ಮತದಾರರನ್ನು ತಮ್ಮತ್ತ ಸೆಳೆಯಲು ಘೋಷಣೆ ಮಾಡುವ ಈ ಉಚಿತ ಗ್ಯಾರಂಟಿ ಕೊಡುಗೆಗಳಿಂದ ರಾಜ್ಯ ಹಾಗೂ ದೇಶದ ಆರ್ಥಿಕತೆ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಈ ಹಿಂದೆ ಒಂದೆರಡು ರಾಜ್ಯಗಳಿಗೆ ಸೀಮಿತವಾಗಿದ್ದ ಉಚಿತ ಕೊಡುಗೆಗಳು ಈಗ ದೇಶಾದ್ಯಂತ ಮತದಾರರನ್ನು ಸೆಳೆಯುವ ಅಸ್ತ್ರಗಳಂತೆ ಬಳಕೆಯಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಹೇಗಾದರೂ ಸರಿ ಅಧಿಕಾರಕ್ಕೇರಲೇಬೇಕು ಎಂಬ ಉಮೇದಿಯೊಂದಿಗೆ ವಿವಿಧ ರಾಜಕೀಯ ಪಕ್ಷಗಳು ಚುನಾವಣೆ ಪೂರ್ವದಲ್ಲಿ ಮಾಡುವ ಈ ಉಚಿತ ಘೋಷಣೆಗಳು ಜಾರಿಗೆ ಬಂದರೆ ಅವುಗಳ ಹೊರೆ ಬೀಳುವುದು ಮತದಾರರ ಮೇಲೆಯೇ. ಒಂದು ಪಕ್ಷ ಅಧಿಕಾರದ ಗದ್ದುಗೆಗೆ ಏರಲು ಸಾರ್ವಜನಿಕರ ಹಣವನ್ನು ಈ ರೀತಿ ಬೇಕಾಬಿಟ್ಟಿ ಪೋಲು ಮಾಡುವುದು ಎಷ್ಟು ಸರಿ ಎಂಬ ಚರ್ಚೆ ಹಾಗೂ ಆತ್ಮಾವಲೋಕನ ನಡೆಯುವುದು ಅವಶ್ಯಕ.

ಉಚಿತ ಘೋಷಣೆಗಳ ಜಾರಿಯಿಂದಾಗಿ ರಾಜ್ಯ ಹಾಗೂ ದೇಶಗಳ ಆರ್ಥಿಕ ಪರಿಸ್ಥಿತಿ ಹಳ್ಳ ಹಿಡಿಯುತ್ತಿದೆ. ರಾಜಕೀಯ ಪಕ್ಷಗಳು ಆದಾಯ ಹೆಚ್ಚಳ, ಆರ್ಥಿಕ ವೃದ್ಧಿ ಹಾಗೂ ಉದ್ಯೋಗಾವಕಾಶಗಳ ಸೃಷ್ಟಿಯ ಮೂಲಕ ದುಡಿಯುವ ವರ್ಗವನ್ನು ಸೃಷ್ಟಿಸಬೇಕೆ ಹೊರತು ಉಚಿತ ಘೋಷಣೆಗಳನ್ನು ಮಾಡಿ ರಾಜ್ಯಗಳ ಆರ್ಥಿಕತೆಯನ್ನು ಹದಗೆಡಿಸುವುದಲ್ಲ. ಉಚಿತ ವಿದ್ಯುತ್, ಸಾಲಮನ್ನಾ, ಉಚಿತ ಬಸ್ ಪ್ರಯಾಣ, ನೀರು..... ಹೀಗೆ ಸಾಲು ಸಾಲು ಗ್ಯಾರಂಟಿಗಳನ್ನು ಉಚಿತವಾಗಿ ಕೊಡುತ್ತೇವೆ ಎಂಬ ಭರವಸೆಗಳನ್ನು ಚುನಾವಣಾ ಪೂರ್ವದಲ್ಲಿ ರಾಜಕೀಯ ಪಕ್ಷಗಳು ನೀಡಿ ಮತದಾರರನ್ನು ಸೆಳೆಯುವ ಪ್ರಯತ್ನವನ್ನು ಮೊದಲು ಕೈಬಿಡಬೇಕು. ಪ್ರತಿ ಚುನಾವಣೆಯಲ್ಲಿ ಜನರಿಗೆ ನೀಡಲಾಗುವ ಈ ರೀತಿಯ ಉಚಿತ ಘೋಷಣೆ ಹಾಗೂ ಗ್ಯಾರಂಟಿಗಳಿಗೆ ಇತಿಶ್ರೀ ಹಾಕಲೇಬೇಕಾಗಿದೆ. ರಾಜಕೀಯ ಪಕ್ಷಗಳು ಚುನಾವಣಾ ಸಮಯದಲ್ಲಿ ನೀಡುವ ಈ ಉಚಿತ ಕೊಡುಗೆಗಳಿಂದ ಭವಿಷ್ಯದಲ್ಲಾಗುವ ಗಂಭೀರ ಆರ್ಥಿಕತೆಯ ಹೊರೆಯ ಪರಿಣಾಮವನ್ನು ಪ್ರತಿಯೊಂದು ರಾಜಕೀಯ ಪಕ್ಷಗಳು ಅರಿಯಬೇಕಿದೆ. ಅಲ್ಲದೇ ಪ್ರಜ್ಞಾವಂತ ಮತದಾರ ಈ ಗ್ಯಾರಂಟಿಗಳಿಗೆ ಮಾರು ಹೋಗದೆ ದುಡಿಯುವ ಕೈಗಳಿಗೆ ಕೆಲಸ ಕೊಟ್ಟು, ಭ್ರಷ್ಟಾಚಾರರಹಿತ, ಸದೃಢ ಸಮಾಜ ಕಟ್ಟುವ ವ್ಯಕ್ತಿ ಹಾಗೂ ಪಕ್ಷಗಳನ್ನು ಬೆಂಬಲಿಸುವ ನಿಟ್ಟಿನಲ್ಲಿ ಅಂತಿಮವಾಗಿ ಒಮ್ಮತದ ನಿರ್ಧಾರ ಕೈಗೊಳ್ಳುವುದು ಅವಶ್ಯಕವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ತಳಪಾಯ ಅರ್ಧಂಬರ್ಧ ತೆಗೆಯಲ್ಪಟ್ಟ ರಾಜರ ಕಾಲದ ಲೈಟ್ ಕಂಬಗಳು



ಮಾನ್ಯರೆ,

ಮೈಸೂರು ನಗರದ ನಾರಾಯಣ ಶಾಸ್ತ್ರಿ ರಸ್ತೆಯ ಸದ್ವಿದ್ಯಾ ಶಿಕ್ಷಣ ಸಂಸ್ಥೆ ಹಾಗೂ ಮಹಾರಾಣಿ ಜೂನಿಯರ್ ಕಾಲೇಜು ಎದುರಿಗೆ ಇರುವ ರಸ್ತೆ ಡಿವೈಡರ್ ಮೇಲೆ ರಾಜರ ಕಾಲದ ಲೈಟ್ ಕಂಬಗಳಿವೆ. ಆದರೆ ಇವು ಬಹಳ ವರ್ಷಗಳಿಂದ ಯಾವ ಕೆಲಸ ಮಾಡದೇ ಪಾರಂಪರಿಕ ಅಲಂಕಾರಿಕ ಕಂಬಗಳಾಗಿವೆ. ಇತ್ತೀಚೆಗೆ ಕೆಲವು ಕಂಬಗಳನ್ನು ತೆಗೆದು ಹಾಕಲಾಗಿದೆ. ಮತ್ತೆ ಕೆಲವು ಕಂಬಗಳ ತಳಪಾಯದ ಇಟ್ಟಿಗೆಗಳನ್ನು ಅರ್ಧಂಬರ್ಧ ತೆಗೆದು ಹಾಕಿ ಕಂಬಗಳು ವಾಲಿಕೊಂಡು ಅಪಾಯಕಾರಿಯಾಗಿ ಕಾಣಿಸುತ್ತಿವೆ. ಸಾವಿರಾರು ಶಾಲಾ ಕಾಲೇಜು ಮಕ್ಕಳು ಓಡಾಡುವ ರಸ್ತೆ ಹಾಗೂ ವಾಹನ ದಟ್ಟಣೆ ರಸ್ತೆ ಇದಾಗಿರುವುದರಿಂದ ಕಂಬಗಳು ಕಳಚಿ ಬಿದ್ದರೆ ಪ್ರಾಣಕಂಟಕ ಆಗೋದು ನಿಶ್ಚಿತ. ಕಂಬಗಳ ಬುಡಗಳನ್ನು ಹಾಗೂ ಕೆಲವು ಕಂಬಗಳನ್ನು ನಗರ ಪಾಲಿಕೆಯವರು ತೆಗೆದಿದ್ದಾರೆಯೋ ಅಥವಾ ಬೇರೆ ಯಾರೋ ರಾತ್ರೋರಾತ್ರಿ ದುರುದ್ದೇಶದಿಂದ ತೆಗೆದಿದ್ದಾರೆಯೋ ಗೊತ್ತಿಲ್ಲ. ಆದ್ದರಿಂದ ಸಂಬಂಧಪಟ್ಟ ನಗರ ಪಾಲಿಕೆ ಅಧಿಕಾರಿಗಳು ಹಾಗೂ ನಮ್ಮ ಜನ ಪ್ರತಿನಿಧಿಗಳು ಇದರ ಪರಿಶೀಲನೆ ಮಾಡಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಸೂಕ್ತ ವ್ಯವಸ್ಥೆ ಮಾಡಬೇಕಾಗಿ ಕಳಕಳಿಯ ಮನವಿ.

–ಪ್ರೊ. MSS ಶರ್ಮ, ಸಾಮಾಜಿಕ ಕಾರ್ಯಕರ್ತ, ಮೈಸೂರು.

ಶಿಥಿಲ ಮರಗಳನ್ನು ತೆರವುಗೊಳಿಸಿ?



ಮಾನ್ಯರೆ,

ಮೈಸೂರಿನ ವಿ.ವಿ. ಮೊಹಲ್ಲಾದ ಚಂದ್ರಮೌಳೇಶ್ವರ ದೇವಸ್ಥಾನದ ಎದುರು ಕಾಂಪೌಂಡ್ ಬಳಿ ಇರುವ ಗುಲ್ ಮೊಹರ್ ಮರ ಶಿಥಿಲಾವಸ್ಥೆಯಲ್ಲಿ ಇರುವಂತೆ ಕಂಡು ಬರುತ್ತದೆ. ಅಲ್ಲಿ ಜನಸಂದಣಿ ಹೆಚ್ಚಿರುವುದರಿಂದ ಸಂಬಂಧಿಸಿದವರು ಇದನ್ನು ಪರಿಶೀಲಿಸಿ ಅಪಾಯ ಕಾರಿಯಾಗಿದ್ದಲ್ಲಿ ತೆರವುಗೊಳಿಸುವುದು ಸೂಕ್ತ. ಸಾಮಾನ್ಯವಾಗಿ ಈ ಗುಲ್ ಮೊಹರ್ ಮರಗಳು ಭದ್ರವಾಗಿರುವುದಿಲ್ಲ. ಬಿರುಸಾದ ಗಾಳಿ ಮತ್ತು ಮಳೆಗೆ ಬೀಳುವ ಸಂಭವಗಳು ಹೆಚ್ಚು ಇದೇ ರೀತಿಯ ಮರ ಕಳೆದ ಮಳೆಗಾಲದ ಸಂದರ್ಭದಲ್ಲಿ ನಂಜನಗೂಡು ರಸ್ತೆಯಲ್ಲಿ ಬಿದ್ದದ್ದನ್ನು ನೆನಪು ಮಾಡಿಕೊಳ್ಳಬಹುದು. ಹುಣಸೂರು ರಸ್ತೆಯ ಜಿಲ್ಲಾಧಿಕಾರಿಗಳ ಮನೆ ಮುಂದೆಯೇ ಈ ರೀತಿಯ ಗುಲ್ ಮೊಹರ್ ಮರವೊಂದು ರಸ್ತೆಗೆ ಬೀಳುವಂತೆ ಬಾಗಿದಂತಿರುವುದನ್ನು ಗಮನಿಸಿ. ಇದರ ಭದ್ರತೆಯ ಬಗ್ಗೆ ಸಂಬಂಧಿಸಿದವರು ಪರಿಶೀಲಿಸಿ ಸೂಕ್ತವೆಂದು ಕಂಡುಬಂದಲ್ಲಿ ತೆರುವುಗೊಳಿಸುವ ಕ್ರಮ ಕೈಗೊಳ್ಳಬೇಕು.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.



ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ–ರಾಜಕಾರಣಿ
ಮೊ: 9663996390

ಹಳ್ಳಿ ಹಕ್ಕಿ ಹಾಡು



ಸದುದ್ದೇಶಿತ ಸಾಲ ಶೂಲವಾಗೋಯ್ತು...!

ನಮ್ಮ ಶ್ರೇಷ್ಠ ಕವಿ ಸರ್ವಜ್ಞರ 'ಸಾಲವನು ಕೊಂಬಾಗ ಹಾಲೋಗರುಂಡಂತೆ ಸಾಲಿಗರು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ' ವಿವೇಕದ ಜೊತೆಗೆ ಎಚ್ಚರಿಕಾ ಮಾತುಗಳು ಮತ್ತೆ ಮತ್ತೆ ನೆನಪಾಗುತ್ತಿವೆ. ಜನರ ಸಂಕಟಕ್ಕೆ ಕೊನೆಯೆಂದು ಎಂಬ ಉತ್ತರವಿಲ್ಲದ ಪ್ರಶ್ನೆಯೂ ಉದ್ಭವಿಸಿದೆ. ಪ್ರತಿ ಮನುಷ್ಯನೂ ತನ್ನ ಜೀವನ ಪಯಣದ ಕವಲುದಾರಿಗಳಲ್ಲಿ ಸಾಲದ ನೆರವಿನಿಂದ ತನ್ನ ಗಮ್ಯ ತಲುಪುವುದು ಅನಿವಾರ್ಯ. ಸಂಘ–ಸಂಸ್ಥೆಗಳು, ಸರ್ಕಾರಗಳೂ ತಮ್ಮ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಾಲವನ್ನು ಆಶ್ರಯಿಸುವುದು ಸರ್ವೇ ಸಾಮಾನ್ಯ. ವಿಶ್ವದ ಅನೇಕ ರಾಷ್ಟ್ರಗಳು ವಿಶ್ವ ಬ್ಯಾಂಕ್ ನೆರವಿನಿಂದ ತಮ್ಮ ಆಡಳಿತದಲ್ಲಿ ಗುಣಾತ್ಮಕತೆ ತರಲು ಯತ್ನಿಸುತ್ತಿವೆ. ಹಾಗಾಗಿ ಸಾಲ ಮಾಡುವುದು ತಪ್ಪಲ್ಲ ಎಂಬಂತಾಯಿತು. ಇನ್ನು, ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕನು ತನ್ನ ಸಂಪಾದನೆ, ಶಕ್ತಿ ಹಾಗೂ ಸಾಲ ಮರುಪಾವತಿಸುವ ಸಾಮರ್ಥ್ಯವನ್ನು ಆಧರಿಸಿ ಸಾಲದ ಮೊರೆ ಹೋಗಬೇಕಿದೆ. ವಿದ್ಯಾಭ್ಯಾಸಕ್ಕಾಗಿ, ವ್ಯಾಪಾರ–ವ್ಯವಹಾರಕ್ಕಾಗಿ, ಮನೆ ಕಟ್ಟಲು, ಮದುವೆ, ಮುಂಜಿ ಹೀಗೆ ನಾನಾ ಉದ್ದೇಶಕ್ಕೆ, ಅಲ್ಲದೆ ವಾಹನ ಖರೀದಿಗೆ, ಪ್ರವಾಸಕ್ಕೆ, ಬದುಕಿನ ಇನ್ನಿತರೆ ಅಗತ್ಯಗಳಿಗೆ ಅನುಗುಣವಾಗಿ ಸಾಲ ಮಾಡುವುದು, ಅದನ್ನು ಮರುಪಾವತಿಸುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ.

ದೊಡ್ಡ ದೊಡ್ಡ ಕನಸುಗಳನ್ನು ನನಸು ಮಾಡಿಕೊಳ್ಳಲು ಬೃಹತ್ ಮೊತ್ತದ ಸಾಲವೇ ಬೇಕಾಗುತ್ತದೆ. ಇದು ವಿಶ್ವದ ಎಲ್ಲಾ ಆರ್ಥಿಕತೆಗಳಲ್ಲೂ ಕಂಡು ಬರುವ ಒಂದು ನಿರಂತರ, ಸಹಜ ವಿದ್ಯಮಾನ.

ಇತ್ತೀಚೆಗೆ ನಮ್ಮನ್ನೆಲ್ಲಾ ಜಗ್ಗಿಸಿ–ಜಾಲಾಡಿದ ಕೊರೊನಾ ತಂದೊಡ್ಡಿದ ಸಂಕಷ್ಟ ಸಾಕಪ್ಪಾ–ಸಾಕು. ಇದರ ಹಾವಳಿಗೆ ಬಹುಮುಖಿ ಆಯಾಮಗಳಿವೆ. ಅನೇಕ ಕುಟುಂಬಗಳು ದುಡಿವ ಕೈಗಳನ್ನು ಕಳೆದುಕೊಂಡರೆ, ಹಲವರು ವಿಚಿತ್ರ ಖಾಯಿಲೆಗಳಿಂದ ದುರ್ಬಲರಾಗಿದ್ದಾರೆ. ಚಿಕ್ಕ ಪುಟ್ಟ ಅಂಗಡಿಗಳು, ವ್ಯವಹಾರಗಳು, ಉದ್ದಿಮೆಗಳು, ಹೋಟೆಲುಗಳು ಮುಚ್ಚಿವೆ. ಲಕ್ಷಾಂತರ ಜನರು ತಾವು ಮಾಡುತ್ತಿದ್ದ ಉದ್ಯೋಗ ಕಳೆದುಕೊಂಡಿದ್ದಾರೆ. ಇಲ್ಲವೇ ಉದ್ಯೋಗದಾತರೇ ಅವರನ್ನು ಹೊರಗಟ್ಟಿದ್ದಾರೆ. ನಗರಗಳಲ್ಲಿದ್ದ ಅನೇಕರು ಇಲ್ಲಿ ಜೀವನ ದುಸ್ತರವಾಗಿ ತಮ್ಮ ತಮ್ಮ ಗ್ರಾಮಗಳಿಗೆ ಮರಳಿದ್ದಾರೆ. ಮೊದಲೇ ಕಷ್ಟದಲ್ಲಿದ್ದ ತಮ್ಮ ಕುಟುಂಬಗಳನ್ನು ಸೇರಿದ್ದಾರೆ. ಅವರ ಬಳಿ ಇರುವ ಅಲ್ಪ ಸ್ವಲ್ಪ ಜಮೀನಿನ ಆದಾಯ ಕುಟುಂಬ ಸದಸ್ಯರಿಗೆ ಅರೆ–ಬರೆ. ಕೆಲಸವಿಲ್ಲ, ಆಧಾರವಿಲ್ಲ, ಖರ್ಚುಗಳು ಕೈಮೀರಿವೆ.

ಇತ್ತ ನಮ್ಮ ಸರ್ಕಾರಗಳು ಕೊರೊನಾ ನಂತರದ ಜನರ ಸಾಮಾಜಿಕ ಆರ್ಥಿಕ ಹಾಗೂ ಭಾವನಾತ್ಮಕ ತಲ್ಲಣಗಳನ್ನು ತಿಳಿಯುವ ನಿಖರ ಹಾಗೂ ಪ್ರಾಮಾಣಿಕ ಪ್ರಯತ್ನಗಳ ಮಾಡುವಲ್ಲಿ ದಾರುಣವಾಗಿ ಸೋತಿವೆ. ಜನರ ಅವಶ್ಯಕತೆಗಳಿಗೆ ಸ್ಪಂದಿಸುವ ಗಟ್ಟಿ ಕಾರ್ಯಕ್ರಮಗಳನ್ನು ರೂಪಿ ಸದೇ, ತಮಗೆ ಸರಿ ಕಂಡ, ತಮ್ಮ ಓಟ್ ಬ್ಯಾಂಕ್ ಗಟ್ಟಿಗೊಳಿಸುವ ಅಂಶಗಳ ಮುಂದಿಟ್ಟುಕೊಂಡೇ ರಾಜ್ಯಭಾರ ಮಾಡುತ್ತಿವೆ. ಜನತೆ ಏರುತ್ತಿರುವ ಬೆಲೆ, ವಿದ್ಯಾಭ್ಯಾಸದ ವೆಚ್ಚ, ಆರೋಗ್ಯ ಸೇವೆಗಳ ಖರ್ಚು ಇವುಗಳಿಂದ ಹೈರಾಣಾಗಿದ್ದಾರೆ. ಸಾಲ ಪಡೆಯುವ ಮಾರ್ಗಗಳನ್ನು ಹುಡುಕುತ್ತಿದ್ದಾರೆ. ಬ್ಯಾಂಕುಗಳು ಖಾಸಗೀಕರಣಗೊಳ್ಳುತ್ತಿವೆ. ಅನಾರೋಗ್ಯಕರ ಪೈಪೋಟಿಗೆ ಬಿದ್ದಿವೆ. ಹೆಚ್ಚು ಬಡ್ಡಿದರ ಹಾಗೂ ಸಾಲ ನೀಡುವ ಪ್ರಕ್ರಿಯೆಯಲ್ಲಿ ಬಾರಿ ಗೊಂದಲಗಳಿವೆ.

> ಹಳ್ಳಿ, ಪಟ್ಟಣ, ನಗರ ಎನ್ನದೇ ಎಲ್ಲೆಡೆ ಕಪ್ಪು ಹಣವುಳ್ಳ ಖದೀಮರು ಫೈನಾನ್ಸ್ ದಂಧೆಗೆ ಧುಮುಕಿದ್ದಾರೆ. ನಿರುದ್ಯೋಗಿ ಯುವಕರ ಪಡೆ ಕಟ್ಟಿ, ತಯಾರಿ ಮಾಡಿ ತಾವು ಕೊಟ್ಟ ಸಾಲ ವಸೂಲಿಗೆ ನೇಮಿಸಿಕೊಂಡಿದ್ದಾರೆ. ಈ ಯುವಕರಿಗೆ ನಾಗರಿಕ ನಡೆ–ನುಡಿ, ಯಾವುದೇ ತರಬೇತಿ ಇಲ್ಲ. ಅವರಿಗೆ ವಹಿಸಿದ ವಸೂಲಿಯನ್ನು ನಿರ್ದಾಕ್ಷಿಣ್ಯವಾಗಿ ಯಾವುದೇ ದಯ–ದಾಕ್ಷಿಣ್ಯ ಇಲ್ಲದೆ ಈ ಹುಡುಗರು ಮಾಡುತ್ತಿದ್ದಾರೆ. ಅರ್ಥಾತ್ ಭುಜಬಲ ಪರಾಕ್ರಮವೇ ಮೆರೆಯುತ್ತಿದೆ. ಕೆಲವು ಹಳ್ಳಿಗಳಲ್ಲಿ ಫೈನಾನ್ಸ್‌ನವರೇ ಮನೆಮನೆಗೂ ಹೋಗಿ, ತಾವು ನಿಮಗೆ ಸಾಲ ನೀಡುತ್ತೇವೆ ಎಂದು ಆಫರ್ ನೀಡುತ್ತಿದ್ದಾರೆ. ಆದರೆ ಅಮಾಯಕ ಜನರಿಗೆ ಅರಿವಿಲ್ಲದಂತೆ ಶೇಕಡ 20ರಿಂದ 25ರಷ್ಟು ಬಡ್ಡಿಯನ್ನು ವಿಧಿಸುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಇತ್ತ ಹಳ್ಳಿ, ಪಟ್ಟಣ, ನಗರ ಎನ್ನದೇ ಎಲ್ಲೆಡೆ ಕಪ್ಪು ಹಣವುಳ್ಳ ಖದೀಮರು ಫೈನಾನ್ಸ್ ದಂಧೆಗೆ ಧುಮುಕಿದ್ದಾರೆ. ನಿರುದ್ಯೋಗಿ ಯುವಕರ ಪಡೆ ಕಟ್ಟಿ, ತಯಾರಿ ಮಾಡಿ ತಾವು ಕೊಟ್ಟ ಸಾಲ ವಸೂಲಿಗೆ ನೇಮಿಸಿಕೊಂಡಿದ್ದಾರೆ. ಈ ಯುವಕರಿಗೆ ನಾಗರಿಕ ನಡೆ–ನುಡಿ, ಯಾವುದೇ ತರಬೇತಿ ಇಲ್ಲ. ಅವರಿಗೆ ವಹಿಸಿದ ವಸೂಲಿಯನ್ನು ನಿರ್ದಾಕ್ಷಿಣ್ಯವಾಗಿ ಯಾವುದೇ ದಯ–ದಾಕ್ಷಿಣ್ಯ ಇಲ್ಲದೆ ಈ ಹುಡುಗರು ಮಾಡುತ್ತಿದ್ದಾರೆ. ಅರ್ಥಾತ್ ಭುಜಬಲ ಪರಾಕ್ರಮವೇ ಮೆರೆಯುತ್ತಿದೆ.

ಕೆಲವು ಹಳ್ಳಿಗಳಲ್ಲಿ ಫೈನಾನ್ಸ್‌ನವರೇ ಮನೆ ಮನೆಗೂ ಹೋಗಿ, ತಾವು ನಿಮಗೆ ಸಾಲ ನೀಡುತ್ತೇವೆ ಎಂದು ಆಫರ್ ನೀಡುತ್ತಿದ್ದಾರೆ. ಆದರೆ ಅಮಾಯಕ ಜನರಿಗೆ ಅರಿವಿಲ್ಲದಂತೆ ಶೇಕಡ 20%ರಿಂದ 25%ರಷ್ಟು ಬಡ್ಡಿಯನ್ನು ವಿಧಿಸುತ್ತಿದ್ದಾರೆ. ಪಾಪ, ಇದರ ಅರಿವಿಲ್ಲದ ಜನರಿಗೆ ಬಡ್ಡಿಯ ಶೂಲದ ಬಾಧೆ ನಂತರವಷ್ಟೇ ಬಡಿಯುತ್ತಿದೆ. 4 ಲಕ್ಷ ಸಾಲಕ್ಕೆ ಕೆಲವು ಜನ 19 ಲಕ್ಷ ಬಡ್ಡಿ ಕಟ್ಟಿದ್ದಾರಂತೆ. ಮತ್ತೆ ಕೆಲವರು 40 ಸಾವಿರಕ್ಕೆ 6 ಲಕ್ಷ ಬಡ್ಡಿ ನೀಡಲಾಗಿದೆಯಂತೆ!! ಹೀಗೆ ಬಡ್ಡಿ ಪೆಡಂಭೂತ ರುದ್ರನರ್ತನವಾಗಿದೆ. ನಮ್ಮ ರಾಜ್ಯದಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಸಾಲಗಾರರು ಆತ್ಮಹತ್ಯೆಯಂತಹ ಅತ್ಯಂತ ಕೆಟ್ಟ, ದುಡುಕಿನ ಕೃತ್ಯದತ್ತ ವಾಲುತ್ತಿರುವುದು ಮಹಾ ಆತಂಕಕಾರಿ ಸಂಗತಿ. ಇಂದಿನ ಸಮಾಜವು ಅನೇಕ ಸಾಮಾಜಿಕ ಕಂಟಕಗಳನ್ನು ಎದುರಿಸುತ್ತಿದೆ. ಆನ್‌ಲೈನ್ ಗೇಮಿಂಗ್, ಮಾದಕ ವಸ್ತುಗಳು ಇವೆಲ್ಲ ನೆಮ್ಮದಿಯಾಗಿದ್ದವರನ್ನು ಸಾಲಗಾರರನ್ನಾಗಿಸಿದೆ. ಮೈಕ್ರೋ ಫೈನಾನ್ಸ್‌ಗೆ ಅಂಕುಶ ಹಾಕಲು ಕರ್ನಾಟಕ ಸರ್ಕಾರ ಸುಗ್ರೀವಾಜ್ಞೆಯನ್ನೇ ತರುತ್ತಿದೆ. ಜೊತೆಗೆ ಸಹಾಯವಾಣಿ ಇಲ್ಲವೆ ಆಪ್ತ ಸಲಹೆ ಮೂಲಕ ನೊಂದವರಿಗೆ ನೆರವಾಗುವ ಜರೂರತ್ತಿದೆ. ಆತ್ಮಹತ್ಯೆ ಇದು ಒಂದು ಸಮೂಹ ಸನ್ನಿಯಾಗಿದೆ ಎಂಬ ಶಂಕೆ ಬಲಗೊಳ್ಳುತ್ತಿದೆ. ಒಂದು ಆತ್ಮಹತ್ಯೆ ಇದೇ ಸಮಸ್ಯೆ ಎದುರಿಸುತ್ತಿರುವ ಇನ್ನೂ ಅನೇಕರಿಗೆ ಪರಿಹಾರದಂತೆ ಕಾಣುತ್ತಿದೆಯೆ ಎಂದು ಅನುಮಾನ ದಟ್ಟವಾಗುತ್ತಿದೆ. ಸತ್ತವನ ಕುಟುಂಬ ಎದುರಿಸುವ ಅವಮಾನ, ನೋವು, ಆಘಾತ, ಅಸುರಕ್ಷತೆ ಇವೆಲ್ಲ ಬೇರೆಯವರಲ್ಲಿ ಎಚ್ಚರವನ್ನೇಕೆ ಮೂಡಿಸುತ್ತಿಲ್ಲ. ಹತಾಶೆ, ನೆರವಿನ ಭರವಸೆ, ಸ್ಥೈರ್ಯ ಇಲ್ಲದಿರುವುದು ಹೇಡಿತನ. ಇವೆಲ್ಲಾ ಆತ್ಮಹತ್ಯೆಯತ್ತ ನಿರಾಶವಾದ ಮನುಷ್ಯನನ್ನು ದೂಡುತ್ತವೆ.

ಈ ಫೈನಾನ್ಸರ್‌ಗಳು ಸ್ಥಳೀಯ ರಾಜಕಾರಣಿಗಳ ಬೆಂಬಲ ಹೊಂದಿರುವುದೂ, ಪೊಲೀಸರ ಕೃಪಾಕಟಾಕ್ಷ ಜೊತೆಗೆ ಅವರ ತಟಸ್ಥ ಧೋರಣೆಯೂ ಈ ಸಮಸ್ಯೆಯನ್ನು ಇನ್ನಷ್ಟು ಸಂಕೀರ್ಣವಾಗಿಸಿದೆ.

ನಮ್ಮ ಮಾಧ್ಯಮಗಳೂ ಸುದ್ದಿಗೆ ಪ್ರಾಮುಖ್ಯತೆ ಕೊಟ್ಟು ಅಲ್ಲೊಂದು ಆತ್ಮಹತ್ಯೆ, ಇಲ್ಲೊಂದು ನೇಣು ಎಂದು ಇಂತಹ ಘಟನೆಗಳನ್ನು ವೈಭವೀಕರಿಸುತ್ತಿವೆ. ಈ ರೀತಿ ಮಾಡಿಕೊಳ್ಳುವುದು ತಪ್ಪು, ಬದುಕಿಗೆ ಸಂಯಮ, ಸ್ಥೈರ್ಯ ಮುಖ್ಯ. ಆ ನಿಟ್ಟಿನಲ್ಲಿ ಯೋಚಿಸಿ, ದೃಢನಿಶ್ಚಯವಿರಲಿ ಎಂದು ಮಾಧ್ಯಮಗಳಾಗಲೀ, ಸರ್ಕಾರವಾಗಲೀ ಹತಾಶರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡುತ್ತಿಲ್ಲ.

ಮೈಕ್ರೋ ಫೈನಾನ್ಸ್ ಕಿರುಕುಳದಿಂದ ಹೈರಾಣಾದ ಇಲ್ಲವೆ ಬೀದಿಗೆ ಬಿದ್ದ ಒಂದೇ ಒಂದು ಪ್ರಸಂಗದ ವರದಿ ಪ್ರಸಾರ ಮಾಡಿ, ಜನರ ಮನೋಬಲ ಹೆಚ್ಚಿಸುತ್ತಿಲ್ಲ. ಈ ಸರಣಿ ಆತ್ಮಹತ್ಯೆಗಳ ಹಿಂದೆ ಮನೋವೈಜ್ಞಾನಿಕ ಕಾರಣಗಳಿವೆ. ಇದು ವರದಕ್ಷಿಣೆ ಕಿರುಕುಳ, ಗಂಡನ ಹಿಂಸೆ ರೈತರ ಸಮಸ್ಯೆ, ಫಲಿತಾಂಶದ ನಿರಾಶೆ ಈ ಎಲ್ಲಾ ಆತ್ಮಹತ್ಯೆಗಳ ಹಿಂದೆಯೂ ಇದೆ. ಇದನ್ನು Copycat Suicides ಅಂತ ಹೇಳುತ್ತಾರೆ. ಇದನ್ನು ಮೊದಲು ನಿಯಂತ್ರಿಸಬೇಕಾಗಿದೆ.



ಸ್ವಾತಂತ್ರ್ಯ ನಂತರ ಭಾರತವು ಹಲವು ಸಾಮಾಜಿಕ ಆರ್ಥಿಕ ಪಲ್ಲಟಗಳನ್ನು ಹಾದು ಬಂದಿದೆ. ಆಗಾಗ ಹಣಕಾಸಿನ ಸಮಸ್ಯೆಗಳು ಉಲ್ಬಣಿಸಿ ಜನ ತತ್ತರಿಸಿದ್ದಾರೆ. ಕನ್ನಡ ಸಾಹಿತ್ಯ ಕೂಡ ಇವುಗಳನ್ನು ಅಕ್ಷರಗಳಲ್ಲಿ ಚಿತ್ರಿಸಿದೆ. ನಮ್ಮ **ಶಿವರಾಮ ಕಾರಂತರು** ತಮ್ಮ **'ಚೋಮನದುಡಿ'**ಯಲ್ಲಿ ಭಾರತದ ಶ್ರಮಿಕನನ್ನು ಅಮರನನ್ನಾಗಿಸುತ್ತಾರೆ. ತಾನು ಬೆವರು ಸುರಿಸಿ ಬೆಳೆದ ಬೆಳೆಯನ್ನು ಭೂ ಮಾಲೀಕರಿಗೊಪ್ಪಿಸಿ ಬರಿ ಕೈಯ್ಯಲ್ಲಿ ಗುಡಿಸಲಿಗೆ ಬರುವ ಅವನ ಸಂಕಟ ಒಂದು ಮಹಾ ಕಾವ್ಯ. ಸುಲಿಗೆ, ಶೋಷಣೆಗೆ ಸಾಮಾನ್ಯರು ಇಂದಿಗೂ ತಲೆಯೊಡ್ಡುತ್ತಿದ್ದಾರೆ.

1975, ನಾನು ಆಗಷ್ಟೇ ಸಾರ್ವಜನಿಕ ಜೀವನವನ್ನು ಪ್ರವೇಶಿಸುತ್ತಿದ್ದ ಕಾಲ. ಬಡವರ ಗೋಳು ಹೇಳತೀರದಾಗಿತ್ತು. ನಾನು ಕಂಡ ಹಾಗೆ ಕೂಲಿ ಕಾರ್ಮಿಕರು ಶ್ರೀಮಂತರ ಹೊಲಗಳಲ್ಲಿ ಮೈಮುರಿಯುವಂತೆ ದುಡಿದು, ಬರಿಗೈಲಿ ಬಂದು ಬದುಕುತ್ತಿದ್ದರು. ಅಡವಿಡಲು ಅವರ ಬಳಿ ಬೆಲೆ ಬಾಳುವುದೇನು ಇರಲಿಲ್ಲ. ತಾವು ಉಟ್ಟ ಬಟ್ಟೆ ಉಣ್ಣುವ ತಟ್ಟೆ, ಸಾಕು ಪ್ರಾಣಿಗಳು, ಕಡೆಗೆ ತಾವು ಹೆತ್ತ ಮಕ್ಕಳನ್ನೇ ಜೀತಕ್ಕಿರಿಸುತ್ತಿದ್ದ ಕಾಲವದು. ಆಗ ಶ್ರೀಮತಿ ಇಂದಿರಾಗಾಂಧಿ ಅವರು "Land Reforms Act"" (ಭೂಸುಧಾರಣಾ ಕಾಯ್ದೆ) ಅನ್ನು ಸಶಕ್ತವಾಗಿ ಜಾರಿಗೊಳಿಸಿದರು. 'ಉಳುವವನಿಗೇ ಭೂಮಿ'–ಅನೇಕರ ಬದುಕನ್ನು ಹಸನಾಗಿಸಿ, ಬಡಜೀವಗಳ ಬದುಕಿನ ಘನತೆ ತಂದಿತ್ತು.

ನಾನು, 2004ರಲ್ಲಿ ಕರ್ನಾಟಕ ರಾಜ್ಯದ ಸಹಕಾರ ಇಲಾಖೆಯ ಸಚಿವನಾಗಿದ್ದಾಗ ಮತ್ತೊಮ್ಮೆ ನಮ್ಮ ಗ್ರಾಮ ಜೀವನದ ಕಷ್ಟ–ಕಾರ್ಪಣ್ಯಗಳಿಗೆ ಮುಖಾಮುಖಿಯಾದೆ. ಖಾಸಗಿ ಲೇವಾದೇವಿಯವರ ಕರ್ಮ ಕಥೆಗೆ ಕಡಿವಾಣವಾಗಿ Prohibition of Exorbitant Interest Act-2004 ಜಾರಿಗೊಳಿಸಿದೆವು. ಅದರ ಉಸ್ತುವಾರಿ ನಿರ್ವಹಣೆ, ಅನುಷ್ಠಾನವನ್ನು ಕಂದಾಯ ಇಲಾಖೆ ಹೆಚ್ಚುವರಿ ಆಯುಕ್ತರಿಗೆ ವಹಿಸಲಾಯಿತು. ಈ ಕಾನೂನಿನಡಿ ಬಡ ಜನರಿಗೆ ಕಿರುಕುಳ ಕೊಡುವ ಲೇವಾದೇವಿಗಾರರನ್ನು ನಿಯಂತ್ರಿಸಿ, ಅವರನ್ನು ಶಿಕ್ಷಿಸುವ ಅವಕಾಶವಿದೆ. ಇದನ್ನು ಈಗಿನ ಸರ್ಕಾರ ಬಳಸಿಕೊಳ್ಳಬೇಕು. ಮನಬಂದಂತೆ ಬಡ್ಡಿ ವಸೂಲಿ ಕರ್ನಾಟಕದಲ್ಲಿ ನಿಲ್ಲಬೇಕು. ಸರ್ಕಾರವು ಇದನ್ನು ನಿರ್ವಹಿಸುವಲ್ಲಿ ಹಣಕಾಸು ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಕಾನೂನು ಇಲಾಖೆಗಳನ್ನು ಸಮನ್ವಯಗೊಳಿಸಬೇಕೆಂಬುದು ನನ್ನ ಒತ್ತಾಸೆ. ಒಟ್ಟಾರೆ ಸಾಲ ಎನ್ನುವುದು ಪಾಪವಲ್ಲ, ಅಪರಾಧವಲ್ಲ. ಜನತೆ ಧೈರ್ಯವಾಗಿ ಇದನ್ನೆಲ್ಲ ನಿಭಾಯಿಸಿ ತುಂಬು ಜೀವನ ನಡೆಸಲಿ ಎಂಬ ಸದಾಶಯ ನನ್ನದು.

ಮಹಾನ್ ಭಾಷೆ ಸಂಸ್ಕೃತ ಸಾಮಾನ್ಯರ ಭಾಷೆಯೂ ಆಗಿತ್ತಲ್ಲ...!



ನಾದಲಹರಿ
ಡಾ.ರಮಾ ವಿ.ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಇಡೀ ವಿಶ್ವದಲ್ಲಿ ಭಾರತದ ಸ್ಥಾನವನ್ನು, ಅದರ ಔನ್ನತ್ಯವನ್ನು ಕುರಿತು ಹೇಳುವಾಗಲೆಲ್ಲ, ಸಾಮಾನ್ಯವಾಗಿ ವಿಜ್ಞಾನ, ತತ್ವ ಶಾಸ್ತ್ರ, ಗಣಿತ, ಸಂಗೀತ, ಎಲ್ಲಕಿಂತ ಮುಖ್ಯವಾಗಿ ಮಾನವನ, ವಿಶ್ವದ ಶಾಂತಿಗೆ ಅದರ ಕೊಡುಗೆ ಏನೆಂಬುದನ್ನು ಅಗತ್ಯವಾಗಿ ಉಲ್ಲೇಖಿಸಲಾಗುತ್ತದೆ. ಆಧ್ಯಾತ್ಮ, ಯೋಗ, ಸಾಂಖ್ಯ, ತರ್ಕ, ಮೀಮಾಂಸೆ ಯಾವುದೇ ವಿಷಯಗಳನ್ನು ತೆಗೆದುಕೊಂಡರೂ ಅವಕ್ಕೆ ಭಾರತೀಯರ ಕೊಡುಗೆಯನ್ನು ಅಲ್ಲಗಳೆಯುವಂತೆಯೇ ಇಲ್ಲ. ಇಷ್ಟೆಲ್ಲ ವಿಚಾರಗಳಲ್ಲಿ ಭಾರತೀಯರು ಪರಾಕಾಷ್ಠೆಯನ್ನು ಮುಟ್ಟಿದ್ದಾದರೂ ಹೇಗೆ? ಅದು ನಮ್ಮ ಋಷಿ ಮುನಿಗಳ ಚಿಂತನೆಯ, ತಪಸ್ಸಿನ, ಆಧ್ಯಾತ್ಮಿಕ ಕೃಷಿಯ ಫಲ ಎಂಬುದು ನಿರ್ವಿವಾದ. ಇಡೀ ಜಗತ್ತನ್ನು ಒಂದೇ ಕುಟುಂಬವೆಂದು ಭಾವಿಸಿ, ಅದರ ಒಳಿತನ್ನು, ಬಯಸುತ್ತಾ, ಅದನ್ನು ಆಗು ಮಾಡುವುದು ಹೇಗೆಂಬುದನ್ನು ಕುರಿತು ಚಿಂತಿಸಿ, ಅದನ್ನು ವೇದರೂಪಗಳಲ್ಲಿ ಕ್ರೋಢೀಕರಿಸಿ, ಜಗತ್ತಿಗೆ ಶಾಂತಿ ಮಂತ್ರದ ರಹಸ್ಯವನ್ನು ಉಣಬಡಿಸಿದ ಅಪೂರ್ವ ನಾಡು ಭಾರತ.

ದೇವಭಾಷೆ, ಪ್ರಾಚೀನ ಭಾಷೆ, ಲೋಕ ಭಾಷೆಯಾಗಿದ್ದ ಸಂಸ್ಕೃತದಲ್ಲಿಯೇ ಭಾರತದ ಎಲ್ಲ ಮುಖ್ಯ ಶಾಸ್ತ್ರಗಳು ಲಭ್ಯವಿರುವುದು. ಅದನ್ನು ಕಲಿಯದೆ, ನಮ್ಮ ಅಪೂರ್ವವಾದ ಜ್ಞಾನ ಸಂಪತ್ತು ನಮಗೆ ದೊರೆಯಲಾರದು. ನಾವು ಆ ಭಾಷೆಯನ್ನು ಕಲಿತಿಲ್ಲ ಎಂಬ ಕಾರಣಕ್ಕಾಗಿ ಸಂಸ್ಕೃತವನ್ನು ಮೃತಭಾಷೆ ಎಂದು ಅದನ್ನು ಪಕ್ಕಕ್ಕೆ ತಳ್ಳಿದರೆ, ಜ್ಞಾನದಿಂದ ನಾವು ವಂಚಿತರಾಗುತ್ತೇವೆ ಅಷ್ಟೆ. ಅದರಿಂದ ಆಗುವ ಅಪಾರ ನಷ್ಟ ನಮ್ಮಗೇ. ಹೊರದೇಶದವರು ಸಂಸ್ಕೃತದ ಮಹತ್ವವನ್ನು ಅರಿತು, ಅದರಲ್ಲಿ ಲಭ್ಯವಿರುವ ಜ್ಞಾನವನ್ನು ತಾವು ಪಡೆದುಕೊಳ್ಳುತ್ತಿರುವಾಗ, ಭಾರತೀಯರು (ಅದು ಯಾವುದೋ ಒಂದು ಜಾತಿಗೆ ಸೇರಿದ್ದು ಎಂದು ಭಾವಿಸಿ) ಅದನ್ನು ಮೂಲೆಗುಂಪಾಗಿಸುವ ಯತ್ನದಲ್ಲಿ ಮಗ್ನರಾಗುವುದು ನಿಜಕ್ಕೂ ದುರಂತವೇ ಹೌದು. ಯಾವುದೇ ಜ್ಞಾನಪಿಪಾಸುವಿಗೆ ಅರ್ಥವಾಗುವ ಸಂಗತಿ ಇದು. ಸಂಸ್ಕೃತದಲ್ಲಿ ರಾಮಾಯಣವನ್ನು ರಚಿಸಿದ ವಾಲ್ಮೀಕಿ ಬೇಡರವನು. ಮಹಾಭಾರತವನ್ನು ಬರೆದ ವ್ಯಾಸ ಮಹರ್ಷಿಗಳ ತಾಯಿ ಬೆಸ್ತರು. ಕಾಳಿದಾಸ ಮಹಾಕವಿಯು ಕುರಿ ಕಾಯುವ ಕುಲದವರಾಗಿದ್ದರು. ಸಂಸ್ಕೃತವು ಯಾವುದೋ ಒಂದು ಜಾತಿ–ಮತಕ್ಕೆ ಸೇರಿರಲಿಲ್ಲವೆಂಬುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಡ. ಅದು ಎಲ್ಲರಿಗೆ ಸೇರಿದ್ದ ಸಾಂಸ್ಕೃತಿಕ ಭಾಷೆಯಾಗಿತ್ತು. ಇರಲಿ.

> ದೇವಭಾಷೆ, ಪ್ರಾಚೀನ ಭಾಷೆ, ಲೋಕ ಭಾಷೆಯಾಗಿದ್ದ ಸಂಸ್ಕೃತದಲ್ಲಿಯೇ ಭಾರತದ ಎಲ್ಲ ಮುಖ್ಯ ಶಾಸ್ತ್ರಗಳು ಲಭ್ಯವಿರುವುದು. ಅದನ್ನು ಕಲಿಯದೆ, ನಮ್ಮ ಅಪೂರ್ವವಾದ ಜ್ಞಾನ ಸಂಪತ್ತು ನಮಗೆ ದೊರೆಯಲಾರದು. ನಾವು ಆ ಭಾಷೆಯನ್ನು ಕಲಿತಿಲ್ಲ ಎಂಬ ಕಾರಣಕ್ಕಾಗಿ ಸಂಸ್ಕೃತವನ್ನು ಮೃತಭಾಷೆ ಎಂದು ಅದನ್ನು ಪಕ್ಕಕ್ಕೆ ತಳ್ಳಿದರೆ, ಜ್ಞಾನದಿಂದ ನಾವು ವಂಚಿತರಾಗುತ್ತೇವೆ ಅಷ್ಟೆ. ಅದರಿಂದ ಆಗುವ ಅಪಾರ ನಷ್ಟ ನಮ್ಮಗೇ. ಹೊರದೇಶದವರು ಸಂಸ್ಕೃತದ ಮಹತ್ವವನ್ನು ಅರಿತು, ಅದರಲ್ಲಿ ಲಭ್ಯವಿರುವ ಜ್ಞಾನವನ್ನು, ತಾವು ಪಡೆದುಕೊಳ್ಳುತ್ತಿರುವಾಗ, ಭಾರತೀಯರು (ಅದು ಯಾವುದೋ ಒಂದು ಜಾತಿಗೆ ಸೇರಿದ್ದು ಎಂದು ಭಾವಿಸಿ) ಅದನ್ನು ಮೂಲೆಗುಂಪಾಗಿಸುವ ಯತ್ನದಲ್ಲಿ ಮಗ್ನರಾಗುವುದು ನಿಜಕ್ಕೂ ದುರಂತವೇ ಹೌದು.

ಭಾರತೀಯ ಚಿಂತನೆಗಳನ್ನು, ಅವುಗಳ ಮಹತ್ತನ್ನು ಸಾರುವ ನಿಟ್ಟಿನಲ್ಲಿ ರಾಮಾಯಣ, ಮಹಾಭಾರತ, ಭಗವದ್ಗೀತೆಗಳಲ್ಲದೆ ವೇದ, ಉಪನಿಷತ್ತುಗಳನ್ನು ಅಗತ್ಯವಾಗಿ ಹೆಸರಿಸಲಾಗುತ್ತದೆ. ಮನುಷ್ಯನ ಸಂಪೂರ್ಣ ಮನಃಶಾಂತಿಗಾಗಿ ಆತ ಮಾಡಬೇಕಾದ ಅಗತ್ಯ ಕಾರ್ಯವೆಂದರೆ, ತನ್ನನ್ನು ತಾನು ಅರಿತುಕೊಳ್ಳುವುದು. ಏಕೆಂದರೆ, ತನ್ನನ್ನು ತಾನು ಗೆಲ್ಲುವುದನ್ನೇ ಸಂಪೂರ್ಣ ಶಾಂತಿಯ ಸಾಧನ ಎಂದು ಹಿರಿಯರು ಒತ್ತಿ ಹೇಳಿದ್ದಾರೆ. ಇದನ್ನು ಆತ್ಮಜ್ಞಾನ ಎಂದೂ ಕರೆಯುತ್ತಾರೆ. ಇದನ್ನು ದೊರಕಿಸಿಕೊಳ್ಳುವ ಕಾರ್ಯದಲ್ಲಿ ಸಹಾಯ ಮಾಡುವ ಶ್ರೇಷ್ಠ ಸಾಧನಗಳೆಂದರೆ ಉಪನಿಷತ್ತುಗಳು. ಅದರಿಂದಾಗಿಯೇ ನಮ್ಮ ಪ್ರಾಚೀನರು ಉಪನಿಷತ್ತುಗಳಿಗೆ ಅಗ್ರಸ್ಥಾನವನ್ನು ಕೊಟ್ಟಿದ್ದಾರೆ. ತತ್ವಜ್ಞಾನ, ಸತ್ಯದ ಸಾಕ್ಷಾತ್ ದರ್ಶನ ಮತ್ತು ಸತ್ಯದ ಸರಳ ಪ್ರತಿಪಾದನೆ ಮುಂತಾದವುಗಳೆಲ್ಲವನ್ನೂ ಕೊಡುವ ಏಕೈಕ ಸಾಧನಗಳು ಉಪ ನಿಷತ್ತುಗಳೆಂದು ಪ್ರಶಂಸಿಸಲ್ಪಟ್ಟಿವೆ. ನಮ್ಮ ಋಷಿಮುನಿಗಳ, ಹಿರಿಯರ ಆಧ್ಯಾತ್ಮಿಕ ಅನುಭವಗಳ ಪರಿಪಕ್ವ ಫಲವೇ ಉಪನಿಷತ್ತುಗಳೆಂಬುದು ವಿದ್ವಾಂಸರ ಅಂಬೋಣ. ಮುಂದೆ ಭಾರತದಲ್ಲಿ ಬೆಳೆದ ಹಲವಾರು ದರ್ಶನಗಳ ಬೀಜಗಳೆಲ್ಲವನ್ನೂ ಉಪನಿಷತ್ತಿನಲ್ಲಿ ಕಾಣಬಹುದು.

ಉಪನಿಷತ್ತುಗಳು ಎರಡು ಸಾವಿರ ವರ್ಷಗಳಿಗಿಂತಲೂ ಹಳೆಯದೆಂಬುದನ್ನು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ವೇದಕಾಲದಲ್ಲಿ ಸ್ತುತಿ ಸ್ತೋತ್ರ, ಯಜ್ಞ–ಯಾಗಾದಿಗಳಿಗೆ ಮಹತ್ವ ಇದ್ದಂತೆ ಉಪನಿಷತ್ತಿನ ಕಾಲದಲ್ಲಿ ತಪಸ್ಸು, ಜ್ಞಾನ ಚರ್ಚೆ ಇವುಗಳು ಮಹತ್ವ ಪಡೆದುಕೊಂಡವು. ಸರ್ವಾಂತರ್ಯಾಮಿಯಾದ ಪರಮಾತ್ಮನ ಜ್ಞಾನದಿಂದಲೇ ಮೋಕ್ಷವು ಪ್ರಾಪ್ತಿಯಾಗುತ್ತದೆ ಎಂದು ಇವು ಸಾರುತ್ತವೆ. ಆ ಜ್ಞಾನವು ಶ್ರದ್ಧೆ, ತ್ಯಾಗ, ಏಕಾಂತ, ತಪಸ್ಸು, ಧ್ಯಾನ ಮತ್ತು ಯೋಗಗಳಿಂದ ಪ್ರಾಪ್ತವಾಗಬಲ್ಲದು ಎಂಬುದು ಇವುಗಳ ಸಿದ್ಧಾಂತ. ಇದನ್ನು ಹೇಳಲು ಅವು ಕತೆಯ ರೂಪವನ್ನು, ಸಂವಾದ ರೂಪವನ್ನು, ರೂಪಕಗಳನ್ನು ಬಳಸಿಕೊಂಡಿವೆ. ನಚಿಕೇತ, ಯಾಜ್ಞವಲ್ಕ, ಜನಕ ರಾಜ ಮುಂತಾದವರ ಕತೆಗಳ ಮೂಲಕ ಆತ್ಮಜ್ಞಾನವನ್ನು ಪ್ರತಿಪಾದಿಸುವ ರೀತಿ ಮನೋಜ್ಞವಾದುದು. ಸಹಜ ವಾಗಿಯೇ ಕತೆಗಳು ಮತ್ತು ಅದರ ಮುಖೇನ ಕಂಡುಬರುವ ತತ್ವಜ್ಞಾನವು ಸ್ಮೃತಿಪಟಲದ ಮೇಲೆ ಅಚ್ಚೊತ್ತಿಬಿಡುತ್ತವೆ. ಬ್ರಹ್ಮಸೂತ್ರಗಳಲ್ಲದೆ ಉಪನಿಷತ್ತುಗಳ ಮೇಲೂ ಆಚಾರ್ಯ ತ್ರಯರಲ್ಲಿ ಇಬ್ಬರಾದ ಶಂಕರರು ಮತ್ತು ಮಧ್ವಾಚಾರ್ಯರು ಬರೆದಿರುವ ಭಾಷ್ಯಗಳೇ ಅವುಗಳ ಮಹತ್ತನ್ನು ಸಾರುವ ಮತ್ತೊಂದು ಅಂಶ ಎಂದು ಹೇಳಬಹುದು.

ಉಪನಿಷತ್ತುಗಳಲ್ಲಿ ಪ್ರಮುಖವಾದವುಗಳೆಂದರೆ ಈಶ, ಕೇನ, ಕಠ, ಮಾಂಡೂಕ್ಯ, ಮುಂಡಕ, ಪ್ರಶ್ನ, ಐತರೇಯ, ತೈತ್ತಿರೀಯ, ಛಾಂದೋಗ್ಯ ಮತ್ತು ಬೃಹದಾರಣ್ಯಕಗಳು. ಇವು ಅತಿ ಪ್ರಾಚೀನವಾದುವೂ ಹೌದು. ಪ್ರತಿಯೊಬ್ಬ ಮನುಷ್ಯನೂ ತನ್ನ ತಿಳುವಳಿಕೆಗಾಗಿ, ಜ್ಞಾನಕ್ಕಾಗಿ ಅಗತ್ಯವಾಗಿ ಅಭ್ಯಸಿಸಬೇಕಾದ ಉಪನಿಷತ್ತುಗಳು ಜನಸಾಮಾನ್ಯರಿಂದ ದೂರ ಉಳಿಯಲು ಕಾರಣ ಏನಿರಬಹುದೆಂದು ಚಿಂತಿಸಿದಾಗ, ದೊರೆಯುವ ಉತ್ತರ ಒಂದೇ. ಅವು ಸಂಸ್ಕೃತದಲ್ಲಿ ಇವೆ ಎಂಬುದು. ಈ ಕಾರಣದಿಂದ ಭಾರತೀಯ ಸಂಸ್ಕೃತಿಯನ್ನು, ಆಲೋಚನಾ ರೀತಿಯನ್ನು, ನಾವು ಅನುಸರಿಸಬೇಕಾದ ಮೌಲ್ಯಗಳನ್ನು ತಿಳಿಯುವ ಅವಕಾಶದಿಂದ ನಾವು ವಂಚಿತರಾಗಬಾರದು. (ಈಗ ಅವುಗಳ ಕನ್ನಡ ಅನುವಾದವೂ ದೊರೆಯುತ್ತವೆ.)

ಆರಂಭದಲ್ಲಿಯೇ ಹೇಳಿದಂತೆ ತನ್ನನ್ನು ತಾನು ಅರಿಯುವುದರಿಂದ ಮತ್ತು ತನ್ನೊಳಗಿನ ಶಕ್ತಿ ಸಾಮರ್ಥ್ಯಗಳನ್ನು ಸಂಪೂರ್ಣವಾಗಿ ಸಂಯಮಿಸುವ ಶಕ್ತಿಯು ಮನುಷ್ಯನಿಗೆ ಬಂದಾಗಲೇ ಅವನಿಗೆ ಚಿರಶಾಂತಿ ದೊರೆಯುವುದೆಂಬ ಜ್ಞಾನವನ್ನು ಉಪನಿಷತ್ತುಗಳು ನೀಡುತ್ತವೆ. ಇದನ್ನು ಸಾಕ್ಷಾತ್ಕರಿಸುವ ಸಾಧನ ಮಾರ್ಗವನ್ನೂ ಅದು ತೋರುವುದು. ಪ್ರಾಪಂಚಿಕವಾದ ವ್ಯವಹಾರದಲ್ಲಿಯೂ ಸಹ ತನ್ನ ಶಕ್ತಿ–ಸಾಮರ್ಥ್ಯವನ್ನು, ತನ್ನ ದೋಷಗಳನ್ನು ಅರಿತವನು, ತನ್ನ ನಡೆ–ನುಡಿ, ಆಚಾರ–ವಿಚಾರಗಳನ್ನು ಹತೋಟಿಯಲ್ಲಿ ಇಟ್ಟುಕೊಂಡವನು ಯಶಸ್ವಿ ಮತ್ತು ಸುಖಿ ಆಗುವನು. ಇದನ್ನೇ ಆಧ್ಯಾತ್ಮಿಕ ವಿಷಯಕ್ಕೂ ಅನ್ವಯಿಸಬಹುದು. ಭಗವಂತ ಎನ್ನಿ, ಮೂಲ ಚೈತನ್ಯ ಎನ್ನಿ, ಆದಿಶಕ್ತಿ ಎನ್ನಿ, ಅವನ ನಿಯಮಗಳಿಗೆ ಒಳಪಟ್ಟಿದೆ ಈ ಇಡೀ ವಿಶ್ವ, ಅದನ್ನು ಅರಿತುಕೊಂಡು, ಆ ಸರ್ವಾತ್ಮನಲ್ಲಿ ಸರ್ವವನ್ನೂ ಒಪ್ಪಿಸಿದರೆ, ಮನುಷ್ಯನಿಗೆ ಯಾವ ದ್ವಂದ್ವಗಳೂ ಇರಲಾರದು. ಆಗ ಅವನು ಪರಮಸುಖಿ. ಇದನ್ನೇ ಉಪನಿಷತ್‌ಕಾರರು ತಮ್ಮ ಅನುಭವ ಮುಖೇನ ಹೇಳಿದ್ದಾರೆ. ಇಂತಹ ಆತ್ಮಜ್ಞಾನದ ಹಸಿವು ನಮ್ಮಲ್ಲಿ ಹುಟ್ಟಿದಾಗ, ನಮ್ಮ ದಾರಿ ಸ್ಪಷ್ಟ ಮತ್ತು ಸುಗಮ. ಅಂತಹವನು ಮುಂದೆ ಪ್ರಗತಿಯ ಹಾದಿಯನ್ನೇ ತುಳಿಯುತ್ತಾನೆ. ಈ ಸೂಕ್ಷ್ಮತೆಯ ಅರಿವು ಎಲ್ಲರಿಗೂ ಆಗಲಿ ಎಂದು ಹಾರೈಸೋಣ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 2 ಭಾನುವಾರ 2025

ಸಂಪುಟ: 45 | ಸಂಚಿಕೆ: 285 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ತೆರಿಗೆದಾರರಿಗೆ ಬೊಂಬಾಟ್ ಬಜೆಟ್

12 ಲಕ್ಷದವರೆಗಿನ ಆದಾಯಕ್ಕೆ ಯಾವ ತೆರಿಗೆಯೂ ಇಲ್ಲ

● ಎಸ್‌ಸಿ/ಎಸ್‌ಟಿ ಸಮುದಾಯ, ಮಹಿಳೆಯರಿಗೆ 2 ಕೋಟಿ ಸಾಲ ಸೌಲಭ್ಯ
● ಕ್ಯಾನ್ಸರ್ ಚಿಕಿತ್ಸಾ ಔಷಧಗಳ ದರ ಇಳಿಕೆ; 36 ಔಷಧಗಳ ಸುಂಕ ಸಂಪೂರ್ಣ ರದ್ದು





ಯಾವುದು ಅಗ್ಗ

- ಎಲ್‌ಇಡಿ ಟಿವಿ–ಮೊಬೈಲ್
- ಕ್ಯಾನ್ಸರ್ ಔಷಧಗಳು
- ಮೀನಿನ ಪ್ಲೇಟ್
- ಔಷಧಿ ಮತ್ತು ಎಲೆಕ್ಟ್ರಿಕ್ ಕಾರುಗಳು
- ಎತರ್ನೆಟ್ ಸ್ವಿಚ್ ಮೇಲಿನ ತೆರಿಗೆ
- ಭಾರತದಲ್ಲಿ ತಯಾರಿಸಿದ ಬಟ್ಟೆಗಳು
- ಚರ್ಮದ ವಸ್ತುಗಳು
- ದೋಣಿ, ಹಡಗು ತಯಾರಿಸಲು ಬಳಸುವ ಸಾಮಗ್ರಿಗಳ ಮೇಲಿನ ಕಸ್ಟಮ್ಸ್ ಮುಂದಿನ 10 ವರ್ಷದವರೆಗೆ ವಿನಾಯತಿ
- ಝಿಂಕ್, ಲಿಥಿಯಮ್ ಬ್ಯಾಟರಿಯ ಸ್ಕ್ರ್ಯಾಪ್ ಮೇಲಿನ ತೆರಿಗೆ
- ಮೊಬೈಲ್ ಫೋನ್ ತಯಾರಿಕೆಗೆ ಬಳಸುವ 28 ಸರಕುಗಳು
- ಇವಿ ಬ್ಯಾಟರಿಗಳು
- ಜೀವ ಉಳಿಸುವ ಔಷಧಗಳು
- ಖನಿಜಗಳ ಮೇಲಿನ ತೆರಿಗೆ

2025–26 ಕೇಂದ್ರ ಬಜೆಟ್

ಯಾವುದು ದುಬಾರಿ



- ಫ್ಲ್ಯಾಟ್ ಪ್ಯಾನೆಲ್ ಡಿಸ್ ಪ್ಲೇ
- ಪ್ಲಾಸ್ಟಿಕ್ ಉಪಕರಣಗಳು
- ಟೆಲಿಕಾಂ ಉಪಕರಣಗಳು
- ನೇಯ್ಗೆಯ ಬಟ್ಟೆಗಳು
- ಐಷಾರಾಮಿ ಸರಕುಗಳು
- ಆಲ್ಕೋಹಾಲ್
- ತಂಬಾಕು
- ಅನಗತ್ಯ ಆಮದು ವಸ್ತುಗಳು,
- ಸಿಗರೇಟ್
- ಚಿನ್ನ–ಬೆಳ್ಳಿ
- ಆಮದು ಸುಂಕ ಏರಿಕೆ





ನವದೆಹಲಿ, ಫೆ.1–ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ–3 ಸರ್ಕಾರದ 2025ನೇ ಸಾಲಿನ ಬಜೆಟ್ ಮಂಡನೆಯಾಗಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇಂದು ಬೆಳಗ್ಗೆ 11ರಿಂದ 12.15ರವರೆಗೆ ಬಜೆಟ್ ಓದಿದರು. ಇದಕ್ಕೂ ಮುನ್ನ ನಡೆದ ಸಚಿವ ಸಂಪುಟ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಈ ಬಜೆಟ್ ಸಾಮಾನ್ಯ ಜನರಿಗಾಗಿ ತಯಾರಿಸಲಾಗಿದೆ ಎಂದು ಹೇಳಿದ್ದರು. ಎನ್‌ಡಿಎ ಸರ್ಕಾರದ ಅವಧಿಯಲ್ಲಿ, ನಿರ್ಮಲಾ ಸೀತಾರಾಮನ್ ಇದುವರೆಗೆ ಆರು ಪೂರ್ಣ ಪ್ರಮಾಣದ ಮತ್ತು ಎರಡು ಮಧ್ಯಂತರ ಒಟ್ಟಾರೆ ಎಂಟು ಬಜೆಟ್‌ಗಳನ್ನು ಮಂಡಿಸಿದ್ದಾರೆ.

ಇಂದು ಮಂಡಿಸಿರುವ ಬಜೆಟ್‌ನಲ್ಲಿ ತೆರಿಗೆದಾರರಿಗೆ ಅನುಕೂಲ ಕಲ್ಪಿಸಿದ್ದು, 12 ಲಕ್ಷದವರೆಗಿನ ವಾರ್ಷಿಕ ಆದಾಯ ಉಳ್ಳವರಿಗೆ ಸಂಪೂರ್ಣವಾಗಿ ತೆರಿಗೆಯಿಂದ ಮುಕ್ತಿಗೊಳಿಸಲಾಗಿದೆ. ವೇತನದಾರರು 12.75 ಲಕ್ಷ ರೂ.ವರೆಗಿನ ಆದಾಯಕ್ಕೆ ತೆರಿಗೆ ಪಾವತಿಸುವಂತಿಲ್ಲ.

■ 6ನೇ ಪುಟಕ್ಕೆ

ಆದಾಯ ತೆರಿಗೆ ಸ್ಲ್ಯಾಬ್

ರೂ 4,00,000 ವರೆಗಿನ ಆದಾಯದ ಮೇಲೆ ತೆರಿಗೆ ಇಲ್ಲ	
ರೂ 4,00,001 ರಿಂದ ರೂ 8,00,000ವರೆಗೆ	5%
ರೂ 8,00,001 ರಿಂದ ರೂ 12, 00,000	10%
ರೂ 12,00,001 ರಿಂದ ರೂ 16,00,000	15%
ರೂ 16,00,001 ರಿಂದ ರೂ 20,00,000	20%
ರೂ 20,00,001 ರಿಂದ ರೂ 24,00,000	25%
ರೂ 24,00,001ಕ್ಕಿಂತ ಹೆಚ್ಚಿನ ಆದಾಯದ ಮೇಲೆ	30%

ಇದು ‘ಜನತಾ ಜನಾರ್ಧನ ಬಜೆಟ್’; ಕೊಂಡಾಡಿದ ಮೋದಿ



ನವದೆಹಲಿ, ಫೆ.1– ಪ್ರಸಕ್ತ ಕೇಂದ್ರ ಬಜೆಟ್ 2025ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ, ಇದೊಂದು ‘ಜನತಾ ಜನಾರ್ಧನ ಬಜೆಟ್’ ಎಂದು ಕೊಂಡಾಡಿದ್ದಾರೆ. ಬಜೆಟ್ ಕುರಿತು ಮಾತನಾಡಿರುವ ಅವರು, ಆತ್ಮನಿರ್ಭರ ಭಾರತಕ್ಕೆ ಈ ಬಾರಿಯ ಬಜೆಟ್ ಮತ್ತಷ್ಟು ಚೈತನ್ಯ ತುಂಬಲಿದೆ ಎಂದು ಹೇಳಿದ್ದಾರೆ. ಪ್ರಮುಖವಾಗಿ ಮಧ್ಯಮ ವರ್ಗಕ್ಕೆ ತೆರಿಗೆ ವಿನಾಯಿತಿ ನೀಡಿರುವ ನಿರ್ಮಲಾ ಸೀತಾರಾಮನ್ ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಪ್ರತಿ ಬಾರಿಯ ಬಜೆಟ್‌ನಲ್ಲೂ ತೆರಿಗೆ ವಿನಾಯ್ತಿ ಮಿತಿಯನ್ನು ಏರಿಕೆ ಮಾಡು ತ್ತಲೇ ಇದ್ದು, ಈ ಬಾರಿ ತೆರಿಗೆ ಮಿತಿಯನ್ನು 12.75 ಲಕ್ಷಕ್ಕೆ ಏರಿಕೆ ಮಾಡಿರುವ ನಿರ್ಮಲಾ ಸೀತಾರಾಮನ್ ನಿಜಕ್ಕೂ ಅಭಿನಂದನೆಗೆ ಅರ್ಹರು ಎಂದು ಪ್ರಧಾನಿ ಮೋದಿ ಸಂತಸ ವ್ಯಕ್ತಪಡಿಸಿದರು. ರೈತಾಪಿ ವರ್ಗಕ್ಕೆ ಅನುಕೂಲವಾಗುವಂತೆ ಈ ಬಾರಿಯ ಬಜೆಟ್‌ನಲ್ಲಿ ಹಲವು ಯೋಜನೆಗಳನ್ನು ಘೋಷಣೆ

■ 6ನೇ ಪುಟಕ್ಕೆ

[‘ವಾರದ ಮಿತ್ರ’ ನಾಳೆ ಪ್ರಕಟವಾಗಲಿದೆ’]



ಯಾವ ಕ್ಷೇತ್ರಕ್ಕೆ ಎಷ್ಟು ಅನುದಾನ?; ಗರಿಷ್ಠ ರಕ್ಷಣೆ–ಕನಿಷ್ಠ ವಿಜ್ಞಾನ

- ರಕ್ಷಣಾ ವಲಯ: 4,91,732 ಕೋಟಿ ರೂ.
- ಗೃಹ ವ್ಯವಹಾರಗಳು: 2,33,211 ಕೋಟಿ ರೂ.
- ಶಿಕ್ಷಣ: 1,28,650 ಕೋಟಿ ರೂ.
- ನಗರಾಭಿವೃದ್ಧಿ: 96,777 ಕೋಟಿ ರೂ.
- ಇಂಧನ: 81,174 ಕೋಟಿ ರೂ.
- ಸಮಾಜ ಕಲ್ಯಾಣ ಇಲಾಖೆ: 60,052 ಕೋಟಿ ರೂ.
- ಗ್ರಾಮೀಣಾಭಿವೃದ್ಧಿ: 2,66,817 ಕೋಟಿ ರೂ.
- ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು: 1,71,437 ಕೋಟಿ ರೂ.
- ಆರೋಗ್ಯ: 98,311 ಕೋಟಿ ರೂ.
- ಐಟಿ ಮತ್ತು ದೂರಸಂಪರ್ಕ: 95,298 ಕೋಟಿ ರೂ.
- ವಾಣಿಜ್ಯ ಮತ್ತು ಕೈಗಾರಿಕೆ: 65,553 ಕೋಟಿ ರೂ.
- ವಿಜ್ಞಾನ: 55,679 ಕೋಟಿ ರೂ.

ರೈತರಿಗೆ ಬಂಪರ್, ಕಿಸಾನ್ ಕಾರ್ಡ್ ಸಾಲದ ಮಿತಿ ಹೆಚ್ಚಳ


ನವದೆಹಲಿ, ಫೆ.1–ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ದೇಶದ ರೈತರಿಗೆ ಬಂಪರ್ ಸುದ್ದಿ ನೀಡಿದ್ದು, ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲದ ಮಿತಿಯನ್ನು 3 ಲಕ್ಷ ರೂಪಾಯಿ ನಿಂದ 5 ಲಕ್ಷ ರೂಪಾಯಿಗೆ ಹೆಚ್ಚಿಸಲಾಗುವುದು ಎಂದು ಘೋಷಿಸಿದ್ದಾರೆ.



ಪ್ರಧಾನಮಂತ್ರಿ ಧನ್ ಧಾನ್ಯ ಕೃಷಿ ಯೋಜನೆಯನ್ನು ಸಚಿವರು ಘೋಷಿಸಿದ್ದು, ರೈತರಿಗೆ ಇದು ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಲಿದೆ. 100 ಜಿಲ್ಲೆಗಳನ್ನು ಈ ಯೋಜನೆ ಒಳಗೊಳ್ಳಲಿದ್ದು, 1.7 ಕೋಟಿ ರೈತರಿಗೆ ಇದು ಸಹಾಯವಾಗಲಿದೆ ಅಲ್ಲದೇ ಯುವಕರನ್ನು ಕೃಷಿಯತ್ತ ಸೆಳೆಯಲು ಹೆಚ್ಚು ಉಪ ಯೋಗವಾಗಲಿದೆ ಎಂದು ಹೇಳಿದರು. ದ್ವಿದಳ ಧಾನ್ಯಗಳಲ್ಲಿ ಆತ್ಮನಿರ್ಭರತೆ ಸಾಧಿಸಲು 6 ವರ್ಷಗಳ ಯೋಜನೆಯನ್ನೂ ಆರಂಭಿಸಲಾಗುವುದು. ತೊಗರಿ, ಮಸೂರ್ ಮತ್ತು ಉದ್ದಿನ ಬೇಳೆಗಳ ಮೇಲೆ ಈ ಯೋಜನೆಯು ಕೇಂದ್ರೀಕೃತವಾಗಿರಲಿದೆ. ಹೆಚ್ಚಿನ ಇಳುವರಿಯ ಬೀಜಗಳಿಗಾಗಿ ರಾಷ್ಟ್ರೀಯ ಮಿಷನ್ ಆರಂಭಿಸಲಾಗುವುದು ಎಂದು ಹೇಳಿದ್ದು, ಹತ್ತಿಯ ಉತ್ಪಾದಕತೆಯನ್ನು ಹೆಚ್ಚಿಸಲು ಐದು ವರ್ಷಗಳ ಯೋಜನೆಯನ್ನು ಜಾರಿಗೆ ತರಲಾಗುವುದು.

ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಮತ್ತೆ ಚೊಂಬು...!

● ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ● ರಾಜ್ಯದ ಯಾವುದೇ ಪ್ರಸ್ತಾವನೆಗೆ ಮಾನ್ಯತೆ ಸಿಕ್ಕಿಲ್ಲ



ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿನ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಕೇಂದ್ರ ಬಜೆಟ್ ಕುರಿತು ಪ್ರತಿಕ್ರಿಯಿಸಿದರು.

ಮೈಸೂರು, ಫೆ.1(ಎಸ್‌ಬಿಡಿ)–ಈ ಬಾರಿಯ ಕೇಂದ್ರ ಬಜೆಟ್ ದೂರದೃಷ್ಟಿ ಇಲ್ಲದ ನಿರಾಶಾದಾಯಕ ಬಜೆಟ್. ಕರ್ನಾಟಕಕ್ಕೆ ಚೊಂಬು ನೀಡುವ ಅಭಿಯಾನವನ್ನು ಮೋದಿ ಸರ್ಕಾರ ಮುಂದುವರೆಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಮೈಸೂರಿನ ತಮ್ಮ ನಿವಾಸದಲ್ಲಿ ಕೇಂದ್ರದ ಬಜೆಟ್ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಬಜೆಟ್ ಭಾಷಣವನ್ನು ಸಂಪೂರ್ಣವಾಗಿ ಕೇಳಲಾಗಲಿಲ್ಲ. ಆದರೆ ಬಜೆಟ್‌ನ ಮುಖ್ಯಾಂಶಗಳನ್ನು ನೋಡಿದ್ದೇನೆ. ಈ ಬಾರಿಯ ಬಜೆಟ್ ದೇಶದ ಅದರಲ್ಲೂ ಕರ್ನಾಟಕದ ಹಿತದೃಷ್ಟಿಯಿಂದ ಬಹಳ ನಿರಾಶಾದಾಯಕವಾಗಿದೆ. ಅದರಲ್ಲಿ ದೂರದೃಷ್ಟಿಯೇ ಇಲ್ಲ ಎಂದರು.

ಎರಡು ರಾಜ್ಯಗಳಿಗೆ ಆದ್ಯತೆ: ಬಜೆಟ್ ಪೂರ್ವಭಾವಿ ಸಭೆಗೆ ಆಹ್ವಾನಿಸಿದ್ದರು. ನಾನು ಸಚಿವ ಕೃಷ್ಣಬೈರೇಗೌಡರನ್ನು ಸಭೆಗೆ ಕಳುಹಿಸಿದ್ದೆ. ಆದರೆ ನಮ್ಮ ಯಾವುದೇ ಬೇಡಿಕೆಗಳನ್ನೂ ಪರಿಗಣಿಸಿಲ್ಲ. ಅತೀ ಹೆಚ್ಚು ತೆರಿಗೆ ನೀಡುವ ಎರಡನೇ ರಾಜ್ಯ ಕರ್ನಾಟಕದ ನಿರೀಕ್ಷೆಯನ್ನು ಹುಸಿಗೊಳಿಸಿದ್ದಾರೆ. ಆದರೆ ಬಜೆಟ್‌ನಲ್ಲೂ ನಮ್ಮ ರಾಜ್ಯಕ್ಕೆ ಅನುದಾನ ನೀಡಿಲ್ಲ. ಎನ್‌ಡಿಎ ಸರ್ಕಾರವಿರುವ ಬಿಹಾರ ಹಾಗೂ ಮಿತ್ರಪಕ್ಷ ಅಧಿಕಾರದಲ್ಲಿರುವ ಆಂಧ್ರಕ್ಕೆ

■ 6ನೇ ಪುಟಕ್ಕೆ



ಐದನೇ ಪುಟದಿಂದ

ತೆರಿಗೆದಾರರಿಗೆ ಬೊಂಬಾಟ್ ಬಜೆಟ್

ಅಲ್ಲದೇ ಹೊಸ ತೆರಿಗೆ ವ್ಯವಸ್ಥೆಯಲ್ಲಿ ತೆರಿಗೆ ವಿನಾಯಿತಿ ಜೊತೆಗೆ ಆದಾಯ ತೆರಿಗೆ ಸ್ಲ್ಯಾಬ್‌ಗಳನ್ನು ಬದಲಾವಣೆ ಮಾಡಲಾಗಿದೆ.

2 ಕೋಟಿ ಸಾಲ ಸೌಲಭ್ಯ: ಮೊದಲ ಬಾರಿ ಉದ್ಯಮ ಆರಂಭಿಸುವ ಎಸ್‌ಸಿ, ಎಸ್‌ಟಿ ಸಮುದಾಯದವರು ಹಾಗೂ ಮಹಿಳೆಯರಿಗೆ 2 ಕೋಟಿ ರೂಪಾಯಿ ವರೆಗೂ ಸಾಲ ಸೌಕರ್ಯ ಘೋಷಿಸ ಲಾಗಿದೆ. ಇದರಿಂದ 22 ಲಕ್ಷ ಮಹಿಳಾ ಉದ್ಯಮಿಗಳಿಗೆ ಅನುಕೂಲವಾಗಲಿದೆ.

ಸೇನಾ ಬಲವನ್ನು ಹೆಚ್ಚಿಸಲು ಹೊಸ ಶಸ್ತ್ರಾಸ್ತ್ರಗಳು ಮತ್ತು ಸಲಕರಣೆಗಳ ಖರೀದಿಗೆ 1.8 ಲಕ್ಷ ಕೋಟಿ ರೂಪಾಯಿ ಗಳನ್ನು ನೀಡಲಾಗಿದೆ. ಆದಾಯ ವೆಚ್ಚಕ್ಕಾಗಿ 3.11 ಲಕ್ಷ ಕೋಟಿ ರೂ, ಪಿಂಚಣಿಗಾಗಿ 1.6 ಲಕ್ಷ ಕೋಟಿ ರೂ, ರಕ್ಷಣಾ ಸಚಿ ವಾಲಯ (ನಾಗರಿಕ) 28,682 ಕೋಟಿ ರೂ. ನೀಡಲಾಗಿದೆ. 82 ಸರಕುಗಳ ಮೇಲಿನ ಸೆಸ್ ಅನ್ನು ತೆಗೆದುಹಾಕಲಾ ಗಿದೆ. 36 ಕ್ಯಾನ್ಸರ್ ಔಷಧಿಗಳು, ಮೊಬೈಲ್ ಮತ್ತು ಟಿವಿ, ಎಲೆಕ್ಟ್ರಿಕ್ ಕಾರು, ಬಟ್ಟೆಗಳು, ಚರ್ಮದ ವಸ್ತುಗಳು ಅಗ್ಗವಾಗುತ್ತವೆ.

ಕೇಂದ್ರ ಸರ್ಕಾರ 10,000 ಕೋಟಿ ರೂಪಾಯಿಗಳ ಯೋಜನೆಯೊಂದಿಗೆ ಸ್ಟಾರ್ಟ್‌ಅಪ್‌ಗಳಿಗೆ ಆರ್ಥಿಕ ಬಲವನ್ನು ನೀಡಲು ಉದ್ದೇಶಿಸಿದೆ. ಡಿಜಿಟಲ್ ಕಲಿಕಾ ಸಂಪನ್ಮೂಲಗಳಿಗೆ ಹೆಚ್ಚಿನ ಉತ್ತೇಜನ ವನ್ನು ನೀಡಲು ಎಲ್ಲಾ ಸರ್ಕಾರಿ ಮಾಧ್ಯ ಮಿಕ ಶಾಲೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ಒದಗಿಸಲಾಗುವುದು.

ಆರೋಗ್ಯಕ್ಕೆ ಒತ್ತು: 36 ಔಷಧಿಗಳ ಮೇಲಿನ ಸುಂಕ ತೆರಿಗೆಯನ್ನು ಸಂಪೂರ್ಣ ವಾಗಿ ರದ್ದುಗೊಳಿಸಲಾಗುವುದು. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ಡೇ ಕೇರ್ ಸೆಂಟರ್ ನಿರ್ಮಿಸಲಾಗುವುದು. ಜೊತೆಗೆ ಕ್ಯಾನ್ಸರ್ ಚಿಕಿತ್ಸಾ ಔಷಧ ದರಗಳು ಅಗ್ಗವಾಗಲಿವೆ. 6 ಜೀವ ರಕ್ಷಕ ಔಷಧಿ ಗಳ ಮೇಲಿನ ಕಸ್ಟಮ್ ಸುಂಕವನ್ನು ಶೇಕಡಾ 5ಕ್ಕೆ ಇಳಿಸಲಾಗುವುದು.

ಜಲ್ ಜೀವನ್ ಮಿಷನ್‌ನ ಬಜೆಟ್ ಔಟ್‌ಲೆಟ್ ಅನ್ನು 100% ಕವರೇಜ್ ಸಾಧಿ ಸಲು ಹೆಚ್ಚಿಸಲಾಗಿದೆ. ಹೊಸ ಯೋಜನೆ ಗಳಲ್ಲಿ 10 ಲಕ್ಷ ಕೋಟಿ ಬಂಡವಾಳವನ್ನು ತುಂಬಲು ಆಸ್ತಿ ಹೂಡಿಸುವ ಯೋಜನೆ 2025–2030 ಅನ್ನು ಪ್ರಾರಂಭಿಸಲಾಗುವುದು.

ವಿದ್ಯುತ್ ಜಾಲ ವಿಸ್ತರಣೆ: ಹೆಚ್ಚುವರಿ 40,000 ಯೂನಿಟ್ ಕೈಗೆಟುಕುವ ದರದಲ್ಲಿ 2025ರಲ್ಲಿ ಪೂರ್ಣಗೊಳ್ಳಲಿದೆ. ವಿದ್ಯುತ್ ವಿತರಣೆ ಮತ್ತು ಪ್ರಸರಣ ಕಂಪನಿಗಳನ್ನು ಬಲಪಡಿಸಲಾಗುವುದು. ಪ್ರವಾಸೋದ್ಯಮ ಹೆಚ್ಚಿಸಲು ಬುದ್ಧ ಸರ್ಕ್ಯೂಟ್‌ಗೆ ಒತ್ತು. ಬೋಧಗಯಾವನ್ನು ಅಭಿವೃದ್ಧಿಪಡಿಸ ಲಾಗುವುದು. ಇದರೊಂದಿಗೆ ಬಿಹಾರ ದಲ್ಲಿ ಹೊಸ ಕಾಲುವೆ ಯೋಜನೆಗೆ ಅನು ಮೋದನೆ ನೀಡಲಾಗುವುದೆಂದು ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

ಪ್ರಧಾನಮಂತ್ರಿ ಧನ್ ಧಾನ್ಯ ಕೃಷಿ ಯೋಜನೆ: ಪ್ರಧಾನ ಮಂತ್ರಿ ಧನ್ ಧಾನ್ಯ ಕೃಷಿ ಯೋಜನೆಯನ್ನು ಸಚಿವರು ಘೋಷಿಸಿದ್ದು, ರೈತರಿಗೆ ಇದು ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಲಿದೆ. 100 ಜಿಲ್ಲೆಗಳನ್ನು ಈ ಯೋಜನೆ ಒಳಗೊಳ್ಳಲಿದ್ದು, 1.7 ಕೋಟಿ ರೈತರಿಗೆ ಇದು ಸಹಾಯವಾಗಲಿದೆ ಅಲ್ಲದೇ ಯುವಕರನ್ನು ಕೃಷಿಯತ್ತ ಸೆಳೆಯಲು ಹೆಚ್ಚು ಉಪಯೋಗವಾಗಲಿದೆ. ದ್ವಿದಳ ಧಾನ್ಯಗಳಲ್ಲಿ ಆತ್ಮನಿರ್ಭರತೆ ಸಾಧಿಸಲು 6 ವರ್ಷಗಳ ಯೋಜನೆಯನ್ನೂ ಆರಂಭಿಸಲಾಗುವುದು. ತೊಗರಿ, ಮಸೂರ್ ಮತ್ತು ಉದ್ದಿನ ಬೇಳೆಗಳ ಮೇಲೆ ಈ ಯೋಜನೆಯು ಕೇಂದ್ರೀಕೃತವಾಗಿರಲಿದೆ. ಹೆಚ್ಚಿನ ಇಳುವರಿಯ ಬೀಜಗಳಿಗಾಗಿ ರಾಷ್ಟ್ರೀಯ ಮಿಷನ್ ಆರಂಭಿಸಲಾಗು ವುದು ಎಂದು ಹೇಳಿದ್ದು, ಹತ್ತಿಯ ಉತ್ಪಾದಕತೆಯನ್ನು ಹೆಚ್ಚಿಸಲು ಐದು ವರ್ಷಗಳ ಯೋಜನೆಯನ್ನು ಜಾರಿಗೆ ತರಲಾಗುವುದು ಎಂದು ಸಚಿವರು ಹೇಳಿ ದರು. ಪ್ರವಾಸೋದ್ಯಮ ಅಭಿವೃದ್ಧಿಪಡಿ ಸುವ ಉದ್ದೇಶದಿಂದ ಹೋಮ್ ಸ್ಟೇಗಳಿಗೆ ಮುದ್ರಾ ಲೋನ್ ನೀಡುವ ಯೋಜನೆ ಅನುಷ್ಠಾನಕ್ಕೆ ತರಲಾಗುತ್ತದೆ. ಜೊತೆಗೆ ಖಾಸಗಿ ಸಹಭಾಗಿತ್ವದಲ್ಲಿ ಮೆಡಿಕಲ್ ಟೂರಿಸಂ ಅಭಿವೃದ್ಧಿಪಡಿಸಲಾಗುತ್ತದೆ ಎಂದು ವಿತ್ತ ಸಚಿವರು ಘೋಷಿಸಿದ್ದಾರೆ.

ಶ್ರಮ್ ಪೋರ್ಟಲ್: ಆನ್‌ಲೈನ್ ಪ್ಲಾಟ್ ಫಾರಂ ಕಾರ್ಮಿಕರಿಗೆ ಪ್ರತ್ಯೇಕ ವಾಗಿ 'ಶ್ರಮ್ ಪೋರ್ಟಲ್' ಆರಂಭಿಸ ಲಾಗುವುದು. ಇದರಿಂದ ಇದರಿಂದ 1 ಕೋಟಿ ಗಿಗ್ ವರ್ಕರ್‌ಗಳಿಗೆ ಅನುಕೂಲ ವಾಗಲಿದೆ. ಜೊತೆಗೆ ಪಿಎಂ ಸ್ವಾನಿಧಿ ಯೋಜನೆ ಅಡಿಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ 30,000 ಮೌಲ್ಯದ ಕ್ರೆಡಿಟ್ ಕಾರ್ಡ್ ವಿತರಣೆ ಮಾಡಲಾಗುತ್ತದೆ.

ಕೇಂದ್ರ ಪರಿಸರ ಸಚಿವಾಲಯಕ್ಕೆ 3,412.82 ಕೋಟಿ ರೂ.ಗಳನ್ನು ಹಂಚಿಕೆ ಮಾಡಿದ್ದು, ಇದು 2024–25ರಲ್ಲಿ 3,125.96 ಕೋಟಿ ರೂ.ಗಳಿಗಿಂತ ಅಂದರೆ ಶೇ. 9 ರಷ್ಟು ಹೆಚ್ಚಾಗಿದೆ.

ಅರಣ್ಯ ಸಂರಕ್ಷಣೆಗೆ ಒತ್ತು: ಅರಣ್ಯ ವ್ಯಾಪ್ತಿಯನ್ನು ವಿಸ್ತರಿಸಲು, ಅಸ್ತಿತ್ವದಲ್ಲಿ ರುವ ಕಾಡುಗಳನ್ನು ರಕ್ಷಿಸಲು ಮತ್ತು ಕಾಡ್ಗಿಚ್ಚುಗಳನ್ನು ತಡೆಗಟ್ಟಲು ಕೆಲಸ ಮಾಡುವ ರಾಷ್ಟ್ರೀಯ ಹಸಿರು ಭಾರತ ಮಿಷನ್ 2025–26ರಲ್ಲಿ 220 ಕೋಟಿ ರೂ.ಗಳನ್ನು ಪಡೆಯಲಿದೆ. ನೈಸರ್ಗಿಕ ಸಂಪನ್ಮೂಲ ಮತ್ತು ಪರಿಸರ ವ್ಯವಸ್ಥೆಯ ಸಂರಕ್ಷಣೆಗಾಗಿ ಹಣವನ್ನು ಸಹ 30 ಕೋಟಿ ರೂ.ಗಳಿಂದ 50 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಈ ಘಟಕದ ಅಡಿ ಯಲ್ಲಿ, ಜೀವವೈವಿಧ್ಯ ಸಂರಕ್ಷಣೆಗಾಗಿ ಬಜೆಟ್ ಅನ್ನು ಸುಮಾರು ಮೂರು ಪಟ್ಟು ಹೆಚ್ಚಿಸಲಾಗಿದ್ದು, 3.5 ಕೋಟಿ ರೂ.ಗಳಿಂದ 10 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

120 ಹೊಸ ವಿಮಾನ ನಿಲ್ದಾಣ: ಹೊಸ ಉಡಾನ್ ಯೋಜನೆ ಆರಂಭಿ ಸಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಇದು 120 ಹೊಸ ತಾಣಗಳನ್ನು ಒಳಗೊಂಡಿರುತ್ತದೆ. 4 ಕೋಟಿ ಹೆಚ್ಚುವರಿ ಪ್ರಯಾಣಿಕರಿಗೆ ಸೇವೆ ಒದಗಿಸಲಾಗುವುದು.

ಕೊಂಡಾಡಿದ ಮೋದಿ

ಮಾಡಲಾಗಿದ್ದು, ಪ್ರಮುಖವಾಗಿ ಧನ–ಧಾನ್ಯ ಕೃಷಿ ಯೋಜನೆಯು ರೈತರ ಬಾಳಿನಲ್ಲಿ ಬೆಳಕು ತರಲಿದೆ. ರೈತರ ಹಿತಾಸಕ್ತಿ ಕಾಪಾಡುವ ನಮ್ಮ ಸರ್ಕಾರದ ಬದ್ಧತೆಯನ್ನು ನಿರ್ಮಲಾ ಸೀತಾರಾಮನ್ ತಮ್ಮ ಬಜೆಟ್‌ನಲ್ಲಿ ಪುನರುಚ್ಚರಿಸಿದ್ದಾರೆ ಎಂದು ಪ್ರಧಾನಿ ಮೋದಿ ಹೇಳಿದರು.

ಈ ಬಾರಿಯ ಬಜೆಟ್ ಮೂಲಕ ಜನರ ತೆರಿಗೆ ಹಣವನ್ನು ಜನರಿಗೆ ತಲುಪಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ತೆರಿಗೆ ವಿನಾಯ್ತಿ ಈ ನಿಟ್ಟಿನಲ್ಲಿ ನಾವು ಇಟ್ಟಿರುವ ಅತ್ಯಂತ ಪ್ರಮುಖ ಹೆಜ್ಜೆ. ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಜನಸಾಮಾನ್ಯರಿಗೆ ನ್ಯಾಯಯುತ ಹಕ್ಕನ್ನು ನಾವು ನೀಡಿದ್ದೇವೆ ಎಂಬ ಭರವಸೆ ಇದೆ.

ಈ ಬಾರಿಯ ಬಜೆಟ್ 140 ಕೋಟಿ ಜನರ ಆಶೋತ್ತರಗಳನ್ನು ಈಡೇರಿಸುವ ಬಜೆಟ್ ಆಗಿ ಹೊರಹೊಮ್ಮಿದೆ. ವಿಕಸಿತ ಭಾರತದ ಕನಸನ್ನು ನನಸು ಮಾಡುವ ನಮ್ಮ ಪ್ರಯತ್ನಕ್ಕೆ ಈ ಬಾರಿಯ ಬಜೆಟ್ ಮತ್ತಷ್ಟು ಬಲ ತುಂಬಲಿದೆ ಎಂದು ಪ್ರಧಾನಿ ಮೋದಿ ನುಡಿದರು. ದೇಶದ ಜನರ ಜೇಬು ತುಂಬಿಸುವುದು, ಜನರ ಉಳಿತಾಯ ಮಟ್ಟವನ್ನು ಏರಿಸುವುದು ಮತ್ತು ಜನಸಾಮಾನ್ಯರ ಆಶೋತ್ತರ ಗಳನ್ನು ಈಡೇರಿಸುವುದು ಈ ಬಾರಿಯ ಬಜೆಟ್‌ನ ಮುಖ್ಯ ಹೂರಣವಾಗಿದೆ. ಕೃಷಿ, ಆರೋಗ್ಯ, ಕೈಗಾರಿಕೆ, ಪ್ರವಾಸೋದ್ಯಮ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಬಲ್ಲ ಅನೇಕ ಯೋಜನೆಗಳನ್ನು ಈ ಬಾರಿಯ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ.." ಎಂದು ಪ್ರಧಾನಿ ಮೋದಿ ಅಭಿಪ್ರಾಯಪಟ್ಟರು.

ಇಷ್ಟೇ ಅಲ್ಲದೇ ಭಾರತದ ಪುರಾತನ ಜ್ಞಾನ ಭಂಡಾರದ ಸಂರಕ್ಷಣೆ ಮತ್ತು ಅದನ್ನು ಆಧುನಿಕ ಭಾರತಕ್ಕೆ ಅನ್ವಯಿಸುವ ಉದ್ದೇಶದೊಂದಿಗೆ ಹಲವು ಯೋಜನೆಗಳನ್ನು ಪರಿಚಯಿಸಲಾಗಿದ್ದು, ಪುರಾತನ ಭಾರತದ ಅದ್ಭುತ ಜ್ಞಾನ ಭಂಡಾರವನ್ನು ಯುವಜನತೆಗೆ ತಲುಪಿಸಲಾಗುವುದು ಎಂದು ಪ್ರಧಾನಿ ಮೋದಿ ಇದೇ ವೇಳೆ ಭರವಸೆ ನೀಡಿದರು.

ಈ ಬಜೆಟ್‌ನಲ್ಲಿ ಒಂದು ಕೋಟಿ ಹಸ್ತಪ್ರತಿಗಳ ಸಂರಕ್ಷಣೆಗಾಗಿ 'ಜ್ಞಾನ್ ಭಾರತ್ ಮಿಷನ್' ಪ್ರಾರಂಭಿಸಲಾಗಿದೆ. ಭಾರತೀಯ ಜ್ಞಾನ ಪರಂಪರೆಯಿಂದ ಪ್ರೇರಿತವಾದ ರಾಷ್ಟ್ರೀಯ ಡಿಜಿಟಲ್ ಭಂಡಾರವನ್ನು ರಚಿಸುವ ಪ್ರಸ್ತಾಪ ಮಾಡಲಾಗಿದೆ ಎಂದು ಪ್ರಧಾನಿ ಮೋದಿ ಸಂತಸ ವ್ಯಕ್ತಪಡಿಸಿದರು. ಬಜೆಟ್‌ನಲ್ಲಿ ರೈತರಿಗಾಗಿ ಮಾಡಿದ ಘೋಷಣೆಯು ಕೃಷಿ ಕ್ಷೇತ್ರದಲ್ಲಿ ಮತ್ತು ಇಡೀ ಗ್ರಾಮೀಣ ಆರ್ಥಿಕತೆಯಲ್ಲಿ ಹೊಸ ಕ್ರಾಂತಿಗೆ ಆಧಾರವಾಗಲಿದೆ. 'ಕಿಸಾನ್ ಕ್ರೆಡಿಟ್ ಕಾರ್ಡ್' ಮಿತಿಯನ್ನು 5 ಲಕ್ಷ ರೂ.ಗಳಿಗೆ ಹೆಚ್ಚಿಸುವ ನಿರ್ಧಾರ ಅತ್ಯಂತ ಸಮಂಜಸ ಎಂದು ಪ್ರಧಾನಿ ಮೋದಿ ಹೇಳಿದರು.

ಕರ್ನಾಟಕಕ್ಕೆ ಮತ್ತೆ ಚೊಂಬು...!

ಹೆಚ್ಚು ಅನುದಾನ ನೀಡಿದ್ದಾರೆ. ವರ್ಷದ ಕೊನೆಯಲ್ಲಿ ಚುನಾವಣೆ ನಡೆಯಲಿರು ವುದರಿಂದ ಬಜೆಟ್ ಭಾಷಣದಲ್ಲಿ ನಾಲ್ಕೈದು ಬಾರಿ ಬಿಹಾರವನ್ನು ಹೆಸರಿಸಿದ್ದಾರೆ. ಒಟ್ಟಾರೆ ರಾಜಕೀಯ ಹಿತದೃಷ್ಟಿಯಿಂದ ಈ ಬಾರಿಯ ಬಜೆಟ್ ನೀಡಿದ್ದಾರೆ. ಈ ಎರಡು ರಾಜ್ಯಗಳನ್ನು ಬಿಟ್ಟು ಉಳಿದೆಲ್ಲಾ ರಾಜ್ಯಗಳಿಗೂ ಅನ್ಯಾಯವಾಗಿದೆ ಎಂದು ತಿಳಿಸಿದರು.

ಕರ್ನಾಟಕಕ್ಕೆ ಖಾಲಿ ಚೆಂಬು: ನಮ್ಮ ರಾಜ್ಯದ ಮೇಕೆದಾಟು, ಭದ್ರಾ ಮೇಲ್ದಂಡೆ, ಮಹದಾಯಿ, ಕೃಷ್ಣ ಯೋಜನೆ ಸೇರಿದಂತೆ ಯಾವ ಯೋಜನೆಗಳಿಗೂ ಹಣ ನೀಡಿಲ್ಲ ಕಳೆದ ಬಜೆಟ್‌ನಲ್ಲಿ ನಿರ್ಮಲಾ ಸೀತಾ ರಾಮನ್ ಅವರು ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ಅನುದಾನ ಘೋಷಿಸಿದ್ದರು. ಈವರೆಗೆ ಒಂದು ರೂ. ಬಿಡುಗಡೆ ಮಾಡಿಲ್ಲ. ರಾಜಸ್ತಾನ ಬಿಟ್ಟರೆ ಹೆಚ್ಚು ಒಣಭೂಮಿ ಇರುವುದು ಕರ್ನಾಟಕದಲ್ಲಿ. ಆದರೆ ನೀರಾವರಿ ಯೋಜನೆಗಳಿಗೆ ಅನುದಾನದ ಮಾತಿರಲಿ, ಅದರ ಬಗ್ಗೆ ಪ್ರಸ್ತಾಪವನ್ನೂ ಮಾಡಿಲ್ಲ. ರಾಯಚೂರಿಗೆ ಏಮ್ಸ್ ಘೋಷಣೆ ನಿರೀಕ್ಷೆ ಮಾಡಿದ್ದೆ. ಕೇಂದ್ರ ಸಚಿವ ನಡ್ಡಾ ಭರವಸೆ ನೀಡಿದ್ದರು. ಅದೂ ಸಿಕ್ಕಿಲ್ಲ. ನಗರಗಳಿಗೆ ಕುಡಿಯುವ ನೀರು, ಗ್ರಾಮೀಣ ಪ್ರದೇಶ, ಹೆದ್ದಾರಿಗಳ ಅಭಿವೃದ್ಧಿ, ಬೆಂಗಳೂರಿನಲ್ಲಿ ರಾಜಕಾಲುವೆ ನಿರ್ವಹಣೆ, ಬ್ಯುಸಿನೆಸ್ ಕಾರಿಡಾರ್ ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ಗೌರವ ಧನ ಹೆಚ್ಚಳಕ್ಕೆ ಹಣ ಕೇಳಿದ್ದೆವು. ವಸತಿ ಯೋಜನೆಯಡಿ ಫಲಾನುಭವಿಗಳಿಗೆ ಕೇಂದ್ರದಿಂದ ನೀಡುವ ಸಹಾಯಧನವನ್ನು ನಗರ ಪ್ರದೇಶದಲ್ಲಿ 1.50 ಲಕ್ಷದಿಂದ 5 ಲಕ್ಷ ಹಾಗೂ ಗ್ರಾಮೀಣ ಪ್ರದೇಶದಲ್ಲಿ 75 ಸಾವಿರದಿಂದ 3 ಲಕ್ಷಕ್ಕೆ ಹೆಚ್ಚಿಸಲು ಕೇಳಿದ್ದೆವು. ಆದರೆ ಇವೆಲ್ಲಾ ಬೇಡಿಕೆಗಳಾಗಿಯೇ ಉಳಿದಿವೆ. ಮೋದಿ ಸರ್ಕಾರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಚೆಂಬು ನೀಡುವುದನ್ನು ಮುಂದು ವರೆಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವರ್ಷದ ಬಜೆಟ್ ಗಾತ್ರ 50,65, 345 ಕೋಟಿ. ಇದರಲ್ಲಿ ಸಾಲದ ಮೊತ್ತ 15,68,936 ಕೋಟಿ ಇದೆ. ಅಂದರೆ ಶೇ.30ರಷ್ಟು ಸಾಲ ಮಾಡಲಾಗಿದೆ.

ಬಿಹಾರಕ್ಕೆ ಬಂಪರ್; 2028ರವರೆಗೆ ಜಲ್‌ಜೀವನ್ ವಿಸ್ತರಣೆ



ನವದೆಹಲಿ: ಕೇಂದ್ರ ವಿತ್ತ ಸಚಿವ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಕೇಂದ್ರ ಬಜೆಟ್ 2025ರಲ್ಲಿ ಬಿಹಾರಕ್ಕೆ ಬಂಪರ್ ಘೋಷಣೆ ಮಾಡಲಾಗಿದ್ದು, 2028ರವರೆಗೆ ಜಲ್ ಜೀವನ್ ಮಿಷನ್ ವಿಸ್ತರಣೆ ಮಾಡಲಾಗಿದೆ.

ಕೇಂದ್ರದ ಮೋದಿ ಸರ್ಕಾರಕ್ಕೆ ಬೆಂಬಲ ನೀಡಿರುವ ನಿತೀಶ್ ಕುಮಾರ್ ನೇತೃತ್ವದ ಜೆಡಿಯುಗೆ ಕೇಂದ್ರ ಸರ್ಕಾರ ತನ್ನ ಬಜೆಟ್ ಮೂಲಕ ಭಾರೀ ಉಡುಗೊರೆ ನೀಡಿದೆ. ಕೇಂದ್ರ ಸರ್ಕಾರದ ಬಹುನಿರೀಕ್ಷಿತ ಯೋಜನೆಯಾದ ಜಲ್‌ಜೀವನ್ ಮಿಷನ್ ಯೋಜನೆಯನ್ನು 2028ರವರೆಗೂ ವಿಸ್ತರಣೆ ಮಾಡಲಾಗುವುದು.

ಮಖಾನಾ ಮಂಡಳಿ, ಕೋಸಿ ಕಾಲುವೆ ಯೋಜನೆ

ಇದೇ ವೇಳೆ ಮುಂದಿನ 4 ವರ್ಷಗಳಲ್ಲಿ ಟರ್, ಉರಾದ್, ಮಸೂರ್ ಖರೀದಿಸಲು 6 ಕೇಂದ್ರ ಸಂಸ್ಥೆಗಳು ತಲೆ ಎತ್ತಲಿವೆ. ಅಂತೆಯೇ ಸಂಸ್ಕರಣೆ, ಮೌಲ್ಯವರ್ಧನೆ ಸುಧಾರಿಸಲು ಬಿಹಾರದಲ್ಲಿ ಮಖಾನಾ ಮಂಡಳಿಯನ್ನು ರಚಿಸಲಾಗುವುದು. ಈ ಉಪಕ್ರಮವು ರಾಜ್ಯದಲ್ಲಿ ಮಖಾನಾದ ಉತ್ಪಾದನೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

ಬಿಹಾರದಲ್ಲಿ ಗ್ರೀನ್‌ಫೀಲ್ಡ್ ಏರ್ ಪೋರ್ಟ್ ಯೋಜನೆ ಘೋಷಿಸಲಾಗಿದ್ದು, ಹೆಚ್ಚುವರಿಯಾಗಿ ಪಾಟ್ನಾ ವಿಮಾನ ನಿಲ್ದಾಣದ ವಿಸ್ತರಣೆಯ ಜೊತೆಗೆ ಬಿಹಾರದಲ್ಲಿ ಹಸಿರು ಮೈದಾನ ವಿಮಾನ ನಿಲ್ದಾಣಗಳು, ಬಿಹ್ತಾದಲ್ಲಿ ಬ್ರೌನ್‌ಫೀಲ್ಡ್ ವಿಮಾನ ನಿಲ್ದಾಣವನ್ನು ಸಹ ಘೋಷಿಸಿದರು. ಪಾಟ್ನಾದಲ್ಲಿರುವ ಭಾರತೀಯ ತಂತ್ರಜ್ಞಾನ ಸಂಸ್ಥೆಯ ಸಾಮರ್ಥ್ಯವನ್ನು ವಿಸ್ತರಿಸಲಾಗುವುದು. ಬಿಹಾರದಲ್ಲಿ ರಾಷ್ಟ್ರೀಯ ಆಹಾರ ತಂತ್ರಜ್ಞಾನ, ಉದ್ಯಮಶೀಲತೆ ಮತ್ತು ನಿರ್ವಹಣಾ ಸಂಸ್ಥೆಯನ್ನು ಸ್ಥಾಪಿಸಲಾಗುವುದು. ಬಿಹಾರದ ಮಿಥಿಲಾ ಪ್ರದೇಶದಲ್ಲಿ 50000 ಹೆಕ್ಟೇರ್‌ಗೂ ಹೆಚ್ಚು ಭೂಮಿಯನ್ನು ಕೃಷಿ ಮಾಡಲು ಸಹಾಯ ಮಾಡುವ ಮೂಲಕ ರೈತರಿಗೆ ಪ್ರಯೋಜನವನ್ನು ನೀಡುವ ಪಶ್ಚಿಮ ಕೋಸಿ ಕಾಲುವೆ ERM ಯೋಜನೆಯನ್ನು ಹಣಕಾಸು ಸಚಿವರು ಘೋಷಿಸಿದರು.

ಸಾರ್ವಜನಿಕ ಲಾಜಿಸ್ಟಿಕ್ಸ್ ಸಂಸ್ಥೆಯಾಗಿ ಅಂಚೆ ಸೇವೆ

ನವದೆಹಲಿ, ಫೆ.1– 1.5 ಲಕ್ಷ ಗ್ರಾಮೀಣ ಅಂಚೆ ಕಚೇರಿಗಳನ್ನು ಹೊಂದಿರುವ ಭಾರತೀಯ ಅಂಚೆಯನ್ನು ಇಂಡಿಯಾ ಪೋಸ್ಟ್ ಪಾವತಿ ಬ್ಯಾಂಕ್ ಮತ್ತು 2.4 ಲಕ್ಷ ಅಂಚೆ ಸೇವಕರ ವಿಶಾಲ ಪೂರಕ ಸಂಪರ್ಕ ಜಾಲವನ್ನು ಗ್ರಾಮೀಣ ಆರ್ಥಿಕತೆಗೆ ವೇಗವರ್ಧಕವಾಗಿ ಕಾರ್ಯನಿರ್ವಹಿಸಲು ಮರುಸ್ಥಾಪಿಸಲಾಗುವುದು. ಭಾರತ ಅಂಚೆಯನ್ನು ದೊಡ್ಡ ಸಾರ್ವಜನಿಕ ಸಾಗಣೆ (ಲಾಜಿಸ್ಟಿಕ್ಸ್) ಸಂಸ್ಥೆಯಾಗಿ ಪರಿವರ್ತಿಸಲಾಗುವುದು. ಇದು ವಿಶ್ವಕರ್ಮರು, ನವೋದ್ಯಮಿಗಳು, ಮಹಿಳೆಯರು, ಸ್ವಸಹಾಯ ಗುಂಪುಗಳು, ಎಂಎಸ್‌ಎಂಇಗಳು ಮತ್ತು ದೊಡ್ಡ ವ್ಯಾಪಾರ ಸಂಸ್ಥೆಗಳು ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚುತ್ತಿರುವ ಅಗತ್ಯಗಳನ್ನು ಪೂರೈಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಭಾರತ ಅಂಚೆ ಪಾವತಿ ಬ್ಯಾಂಕ್‌ನ ಸೇವೆಗಳನ್ನು ಇನ್ನೂ ಉತ್ತಮಗೊಳಿಸುವುದರ ಜೊತೆಗೆ ವಿಸ್ತರಿಸಲಾಗುವುದು ಎಂದು ವಿತ್ತ ಸಚಿವರು ಹೇಳಿದರು.

ಡೆಲಿವರಿ ಬಾಯ್ಸ್‌ಗಳಿಗೆ ಪೋರ್ಟಲ್

ಆನ್‌ಲೈನ್ ಪ್ಲಾಟ್‌ಫಾರಂ ಕಾರ್ಮಿಕರಿಗೆ ಪ್ರತ್ಯೇಕವಾಗಿ 'ಶ್ರಮ್ ಪೋರ್ಟಲ್' ಆರಂಭಿಸಲಾಗುವುದು. ಇದರಿಂದ 1 ಕೋಟಿ ಗಿಗ್ ವರ್ಕರ್‌ಗಳಿಗೆ ಅನುಕೂಲವಾಗಲಿದೆ ಜೊತೆಗೆ ಪಿಎಂ ಸ್ವಾನಿಧಿ ಯೋಜನೆ ಅಡಿಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ 30,000 ಮೌಲ್ಯದ ಕ್ರೆಡಿಟ್ ಕಾರ್ಡ್ ವಿತರಣೆ ಮಾಡಲಾಗುತ್ತದೆ.

ಕರ್ನಾಟಕದ ರೈಲ್ವೆ ಯೋಜನೆಗಳಿಗೆ 7,564 ಕೋಟಿ ಅನುದಾನ

ನವದೆಹಲಿ, ಫೆ.1– ಕಳೆದ ಬಾರಿ ಕರ್ನಾಟಕಕ್ಕೆ ರೈಲ್ವೆ ಬಜೆಟ್ ರೂ.7,559 ಕೋಟಿ ಇತ್ತು, ಈ ಬಾರಿ ರೂ.7564 ಕೋಟಿ ನೀಡಲಾಗಿದೆ. ಸಬ್ ಅರ್ಬನ್ ರೈಲ್ವೆಗೆ ಕಳೆದ ಬಾರಿ 350 ಕೋಟಿ ನೀಡಲಾಗಿತ್ತು. ಈ ಬಜೆಟ್‌ನಲ್ಲಿಯೂ 350 ಕೋಟಿ ನೀಡಲಾಗಿದೆ.




- **ಗದಗ–ವಾಡಿ ರೈಲ್ವೇ ಮಾರ್ಗ : 549 ಕೋಟಿ ರೂ.**
- **ತುಮಕೂರು–ಚಿತ್ರದುರ್ಗ ರೈಲ್ವೇ ಮಾರ್ಗ; ದಾವಣಗೆರೆ ಮಾರ್ಗ: 549 ಕೋಟಿ ರೂ.**
- **ರಾಯದುರ್ಗ– ಕಲ್ಯಾಣದುರ್ಗ– ತುಮಕೂರು ರೈಲ್ವೇ ಮಾರ್ಗ: 434 ಕೋಟಿ ರೂ.**
- **ಬಾಗಲಕೋಟೆ–ಕುಡಚಿ ರೈಲ್ವೇ ಮಾರ್ಗ: 428 ಕೋಟಿ ರೂ.**
- **ಬೆಂಗಳೂರು–ವೈಟ್ ಫೀಲ್ಡ್–ಕೆಆರ್ ಪುರಂ ರೈಲ್ವೇ ಮಾರ್ಗ: 357 ಕೋಟಿ ರೂ.**
- **ದೌಂಡ್–ಕಲಬುರಗಿ ರೈಲ್ವೇ ಮಾರ್ಗದ ವಿದ್ಯುದ್ದೀಕರಣ : 84 ಕೋಟಿ ರೂ.**
- **ರಾಮನಗರ–ಮೈಸೂರು ರೈಲ್ವೇ ಮಾರ್ಗದ ವಿದ್ಯುದ್ದೀಕರಣ: 10 ಕೋಟಿ ರೂ.**
- **ಬೆಂಗಳೂರಿನ ಐಐಎಸ್ಸಿ ಅಭಿವೃದ್ಧಿಗೆ ಆದ್ಯತೆ.**

120 ನಗರಗಳಲ್ಲಿ ನೂತನ ವಿಮಾನ ನಿಲ್ದಾಣ



ನವದೆಹಲಿ, ಫೆ.1– ಉಡಾನ್ ಯೋಜನೆ ಅಡಿಯಲ್ಲಿ 120 ನಗರಗಳಲ್ಲಿ ನೂತನ ವಿಮಾನ ನಿಲ್ದಾಣಗಳನ್ನು ನಿರ್ಮಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಣೆ ಮಾಡಿದ್ದಾರೆ. ಸಾಮಾನ್ಯ ಜನರು ಕೂಡ ವಿಮಾನದಲ್ಲಿ ಪ್ರಯಾಣ ಮಾಡಲು ನೆರವಾಗಲೆಂದು, ಕೇಂದ್ರ ಸರ್ಕಾರ 2017 ರಲ್ಲಿ ಉಡಾನ್ ಯೋಜನೆಯನ್ನು ಪರಿಚಯಿಸಿತ್ತು ಈ ಯೋಜನೆ ಅಡಿಯಲ್ಲಿ 120 ನಗರಗಳಲ್ಲಿ ಹೊಸ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲಾಗುತ್ತದೆ. ಇದು ಮುಂದಿನ 10 ವರ್ಷಗಳಲ್ಲಿ 4 ಕೋಟಿ ಜನರಿಗೆ ಅನುಕೂಲ ಕಲ್ಪಿಸಲಿದೆ. ಗುಡ್ಡಗಾಡು ಪ್ರದೇಶಗಳಲ್ಲಿ ಸಣ್ಣ ವಿಮಾನ ನಿಲ್ದಾಣ ನಿರ್ಮಾಣ ಮಾಡಲಾಗುತ್ತದೆ. ಅಲ್ಲದೇ ಬಿಹಾರದಲ್ಲಿ ಗ್ರೀನ್ ಫಿಲ್ಡ್ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಜೊತೆಗೆ ಪಾಟ್ನಾ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಪರಮಾಣು ಶಕ್ತಿ ಮಿಷನ್ ಘೋಷಣೆ: ವಿದ್ಯುತ್ ವಲಯದ ಷೇರು ಮೌಲ್ಯ ಹೆಚ್ಚಳ



ನವದೆಹಲಿ, ಫೆ.1– ವಿಕಸಿತ ಭಾರತಕ್ಕಾಗಿ ಪರಮಾಣು ಶಕ್ತಿ ಮಿಷನ್ ಆರಂಭಕ್ಕೆ ಕೇಂದ್ರ ಸರ್ಕಾರ ಸಿದ್ಧಗೊಂಡಿದೆ ಎಂದು ಹೇಳಿರುವ ನಿರ್ಮಲಾ ಸೀತಾರಾಮನ್, 2047ರ ವೇಳೆಗೆ ಕನಿಷ್ಠ 100 ಗಿಗಾ ವ್ಯಾಟ್ ಪರಮಾಣು ಶಕ್ತಿಯ ಅಭಿವೃದ್ಧಿ ನಮ್ಮ ಶಕ್ತಿ ಪರಿವರ್ತನೆಗೆ ಅತ್ಯಗತ್ಯವಾಗಿದೆ ಎಂದು ಹೇಳಿದ್ದಾರೆ.

ಈ ಗುರಿ ಸಾಧನೆಗೆ ಖಾಸಗಿ ವಲಯಗಳೊಂದಿಗೆ ಸಕ್ರಿಯ ಪಾಲುದಾರಿಕೆಗಾಗಿ, ಪರಮಾಣು ಶಕ್ತಿ ಕಾಯ್ದೆ ಮತ್ತು ಪರಮಾಣು ಹಾನಿಗೆ ನಾಗರಿಕ ಹೊಣೆಗಾರಿಕೆಗೆ ತಿದ್ದುಪಡಿ ಕಾಯ್ದೆಯನ್ನು ಜಾರಿಗೆ ತರಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ನಮ್ಮ ಶಕ್ತಿ ಪರಿವರ್ತನೆಯನ್ನು ಬೆಂಬಲಿಸಲು 2047ರ ವೇಳೆಗೆ ಕನಿಷ್ಠ 100 ಗಿಗಾವ್ಯಾಟ್ ಪರಮಾಣು ಶಕ್ತಿಯ ಗುರಿಯೊಂದಿಗೆ ಭಾರತದ ಅಭಿವೃದ್ಧಿಗೆ ಪರಮಾಣು ಶಕ್ತಿ ಮಿಷನ್ ಅತ್ಯಗತ್ಯ. ಇದು ಖಾಸಗಿ ವಲಯದೊಂದಿಗೆ ಸಕ್ರಿಯ ಸಹಯೋಗವನ್ನು ಒಳಗೊಂಡಿರುತ್ತದೆ. ಪರಮಾಣು ಶಕ್ತಿ ಕಾಯ್ದೆ ಮತ್ತು ಪರಮಾಣು ಹಾನಿಯ ನಾಗರಿಕ ಹೊಣೆಗಾರಿಕೆ ಕಾಯಿದೆಗೆ ತಿದ್ದುಪಡಿಗಳನ್ನು ಪರಮಾಣು ಶಕ್ತಿ ಕಾರ್ಯಾಚರಣೆಯನ್ನು ಸುಲಭಗೊಳಿಸಲು ಯೋಜಿಸಲಾಗಿದೆ ಎಂದು ಹೇಳಿದ್ದಾರೆ.

ಪರಮಾಣು ಶಕ್ತಿ ಮಿಷನ್ ಯೋಜನೆಯಡಿ ಕನಿಷ್ಠ ಐದು ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಸಣ್ಣ ಮಾಡ್ಯುಲರ್ ರಿಯಾಕ್ಟರ್‌ಗಳು ಕಾರ್ಯನಿರ್ವಹಿಸಲಿವೆ. ವೆಚ್ಚದ ಅನಾನುಕೂಲಗಳನ್ನು ಪರಿಹರಿಸಲು ಹಡಗು ನಿರ್ಮಾಣ ಹಣಕಾಸು ನೆರವು ನೀತಿಯನ್ನು ಪರಿಷ್ಕರಿಸಲಾಗುವುದು. ಇದು ಭಾರತೀಯ ಹಡಗು ನಿರ್ಮಾಣ ಉದ್ಯಮವನ್ನು ಉತ್ತೇಜಿಸುವುದಲ್ಲದೇ, ಮೂಲಸೌಕರ್ಯ ಮತ್ತು ಸಾಮರಸ್ಯದ ಕ್ಲಸ್ಟರ್ ಕಟ್ಟಡವನ್ನು ಒಳಗೊಂಡಿರುತ್ತದೆ.

ಉದ್ಯಮ ಆರಂಭಿಸುವ ಎಸ್‌ಸಿ, ಎಸ್‌ಟಿ ಉದ್ಯಮಿ; ಮಹಿಳೆಯರಿಗೆ 2 ಕೋಟಿ ರೂ. ಸಾಲ


ನವದೆಹಲಿ, ಫೆ.1– ಕೇಂದ್ರ ಸರ್ಕಾರವು ಈ ಬಾರಿಯ ಬಜೆಟ್‌ನಲ್ಲಿ ಮೊದಲ ಬಾರಿ ಉದ್ಯಮ ಆರಂಭಿಸುವ ಎಸ್‌ಸಿ, ಎಸ್‌ಟಿ ಸಮುದಾಯದವರು ಹಾಗೂ ಮಹಿಳೆಯರಿಗೆ 2 ಕೋಟಿ ರೂಪಾಯಿವರೆಗೂ ಸಾಲ ನೀಡುವುದಾಗಿ ಘೋಷಣೆ ಮಾಡಿದೆ.

ಮೊದಲ ಬಾರಿಗೆ ಉದ್ಯಮ ಆರಂಭಿಸುವ ಎಸ್‌ಸಿ, ಎಸ್‌ಟಿ ಉದ್ಯಮಿಗಳು ಹಾಗೂ ಮೊದಲ ಬಾರಿ ಉದ್ಯಮ ಆರಂಭಿಸುವ ಮಹಿಳೆಯರಿಗೆ 2 ಕೋಟಿ ರೂ.ಗಳವರೆಗೆ ಸಾಲವನ್ನು ಒದಗಿಸಲಾಗುತ್ತದೆ ಎಂದು ಘೋಷಣೆ ಮಾಡಿದರು. ಇದು ಮಧ್ಯಮ, ಸಣ್ಣ ಹಾಗೂ ಅತೀ ಸಣ್ಣ ಕೈಗಾರಿಕಾ ವಲಯ ಹೆಚ್ಚಿನ ಬೆಂಬಲ ನೀಡುತ್ತವೆ ಮತ್ತು ಉದ್ಯೋಗ ಸೃಷ್ಟಿಗೆ ಸಹಾಯ ಮಾಡುತ್ತದೆ ಎಂದು ನಿರ್ಮಲಾ ಸೀತಾರಾಮನ್ ಉಲ್ಲೇಖಿಸಿದರು.

ಒಂದು ರೂ. ಆಯ–ವ್ಯಯ (ಜಮೆ ಪೈಸೆಗಳಲ್ಲಿ)

ಆದಾಯ ತೆರಿಗೆ	22
ಸಾಲ ಮತ್ತು ಇತರೆ ಹೊಣೆಗಾರಿಕೆ	24
ತೆರಿಗೆಯೇತರ ರಾಜಸ್ವ	9
ಸಾಲ–ರಹಿತ ಬಂಡವಾಳ	1
ಕಸ್ಟಮ್	4
ಕಾರ್ಪೊರೇಷನ್ ತೆರಿಗೆ	17
ಜಿಎಸ್‌ಟಿ ಮತ್ತು ಇತರ ತೆರಿಗೆಗಳು	18
ಕೇಂದ್ರ ಅಬಕಾರಿ ಸುಂಕಗಳು	5
(ವ್ಯಯ–ಪೈಸೆಗಳಲ್ಲಿ)	
ಬಡ್ಡಿ ಪಾವತಿಗಳು	20
ಕೇಂದ್ರ ವಲಯ ಯೋಜನೆ	16
ಪ್ರಮುಖ ಸಬ್ಸಿಡಿಗಳು	6
ರಕ್ಷಣಾ	8
ತೆರಿಗೆಗಳು ಮತ್ತು ರಾಜ್ಯಗಳ ಸುಂಕಗಳಲ್ಲಿ	22
ಹಣಕಾಸು ಆಯೋಗ –ಇತರ ವರ್ಗಾವಣೆಗಳು	8
ಕೇಂದ್ರ ಪ್ರಾಯೋಜಿತ ಯೋಜನೆ	8
ಇತರ ವೆಚ್ಚಗಳು	8
ಪಿಂಚಣಿ	4

ಬಾಡಿಗೆ ಮೇಲಿನ ಟಿಡಿಎಸ್ ಕಡಿತ ಮಿತಿ 6 ಲಕ್ಷಕ್ಕೆ ಏರಿಕೆ




ನವದೆಹಲಿ, ಫೆ.1– ಬಾಡಿಗೆ ಪಾವತಿಗೆ ಟಿಡಿಎಸ್ ಮಿತಿಯನ್ನು 6 ಲಕ್ಷ ರೂ. ಹೆಚ್ಚಿಸಲಾಗಿದೆ. ಬಾಡಿಗೆ ಪಾವತಿಗಳು, ಹಣ ರವಾನೆ, ಉನ್ನತ ಶಿಕ್ಷಣ, ಸರಕುಗಳ ಮಾರಾಟ ಮತ್ತು ಅಪರಾಧಿಗಳ ಅಪರಾಧ ಮುಕ್ತೀಕರಣಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಮುಖ ಸುಧಾರಣೆಗಳನ್ನು ಬಜೆಟ್‌ನಲ್ಲಿ ಪರಿಚಯಿಸಲಾಗಿದೆ.

ಬಾಡಿಗೆ ಮೇಲಿನ ಟಿಡಿಎಸ್‌ನ ವಾರ್ಷಿಕ ಮಿತಿ 2.40 ಲಕ್ಷದಿಂದ 6 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಇದರರ್ಥ ಬಾಡಿಗೆದಾರರು ತಿಂಗಳಿಗೆ 20,000 ರೂ. ದರದಲ್ಲಿ ನೀಡಲಾಗುವ ಬಾಡಿಗೆಗೆ ಟಿಡಿಎಸ್ ಕಡಿತಗೊಳಿಸಬೇಕಾಗಿತ್ತು. ಆದರೆ, ಈಗ ಮಿತಿಯನ್ನು 50,000 ರೂ.ಗೆ ಹೆಚ್ಚಿಸಲಾಗಿದೆ. ಆದಾಯ ಮೂಲದಿಂದ ತೆರಿಗೆ ಸಂಗ್ರಹ 7 ಲಕ್ಷದಿಂದ 10 ಲಕ್ಷಕ್ಕೆ ಹೆಚ್ಚಿಸಲಾಗಿದೆ. ವಿದೇಶದಿಂದ ರವಾನಿಸುವ ಹಣದ ಮೇಲಿನ ಟಿಡಿಎಸ್ ಕಡಿತಗೊಳಿಸಲಾಗಿದೆ.

ಶೈಕ್ಷಣಿಕ ಉದ್ದೇಶಗಳಿಗಾಗಿ ಯಾರಾದರೂ ಬ್ಯಾಂಕಿನಿಂದ ಸಾಲ ಪಡೆದರೆ ಟಿಸಿಎಸ್ ಇರುವುದಿಲ್ಲ. ಹೆಚ್ಚಿನ ಟಿಡಿಎಸ್ ಕಡಿತದ ನಿಬಂಧನೆಗಳು ಪ್ಯಾನ್ ಅಲ್ಲದ ಪ್ರಕರಣಗಳಲ್ಲಿ ಮಾತ್ರ ಅನ್ವಯಿಸುತ್ತವೆ.

ಪ್ರಸ್ತುತ ಸರಕುಗಳ ಮಾರಾಟಕ್ಕೆ ಸಂಬಂಧಿಸಿದ ವಹಿವಾಟುಗಳಿಗೆ ಟಿಡಿಎಸ್ ಮತ್ತು ಟಿಸಿಎಸ್ ಎರಡೂ ಅನ್ವಯಿಸುತ್ತವೆ. ಟಿಸಿಎಸ್ ಅನ್ನು ಕೈಬಿಡುವ ಬಗ್ಗೆ ವಿತ್ತ ಸಚಿವರು ಪ್ರಸ್ತಾಪ ಮಾಡಿದ್ದಾರೆ.

ಕ್ಯಾನ್ಸರ್ ಸೇರಿದಂತೆ 36 ಜೀವ ರಕ್ಷಕ ಔಷಧಗಳಿಗೆ ಸುಂಕ ವಿನಾಯಿತಿ



ನವದೆಹಲಿ, ಫೆ.1– 36 ಜೀವ ರಕ್ಷಕ ಔಷಧಿಗಳನ್ನು ಮೂಲಭೂತ ಕಸ್ಟಮ್ ಸುಂಕಗಳಿಂದ ಸಂಪೂರ್ಣವಾಗಿ ವಿನಾಯಿತಿ ನೀಡುವುದಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಣೆ ಮಾಡಿದ್ದಾರೆ. ಪ್ರಮುಖವಾಗಿ ಕ್ಯಾನ್ಸರ್ ಮತ್ತು ಅಪರೂಪದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ದೊಡ್ಡಮಟ್ಟದ ಅನುಕೂಲವಾಗಲಿದೆ.

ಕ್ಯಾನ್ಸರ್ ಚಿಕಿತ್ಸೆಯನ್ನು ಜನರಿಗೆ ಹೆಚ್ಚು ಸುಲಭವಾಗಿ ಲಭ್ಯವಾಗುವಂತೆ ಮಾಡಲು ಸರ್ಕಾರ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಡೇಕೇರ್ ಕ್ಯಾನ್ಸರ್ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಘೋಷಣೆ ಮಾಡಿದೆ. 2025–26ರಲ್ಲಿ 200 ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಮುಂದಿನ ಮೂರು ವರ್ಷಗಳಲ್ಲಿ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಈ ಕೇಂದ್ರಗಳನ್ನು ತೆರೆಯುವ ಗುರಿ ಹೊಂದಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ಘೋಷಣೆ ಮಾಡಿದ್ದಾರೆ. ಡೇ ಕೇರ್ ಕೇಂದ್ರಗಳ ಮೂಲಕ ಕ್ಯಾನ್ಸರ್ ರೋಗಿಗಳಿಗೆ ಕಿಮೊಥೆರಪಿ ಮತ್ತು ಇತರ ಚಿಕಿತ್ಸೆಗಳನ್ನು ದಿನವೂ ಪಡೆಯಬಹುದು. ಆಸ್ಪತ್ರೆಯಲ್ಲಿ ದಾಖಲಾಗುವ ಅವಶ್ಯಕತೆ ಇರುವುದಿಲ್ಲ.

ವನ್ಯಜೀವಿ ರಕ್ಷಣೆಗೆ ಆದ್ಯತೆ



ನವದೆಹಲಿ, ಫೆ.1– ಕೇಂದ್ರ ಪರಿಸರ ಸಚಿವಾಲಯಕ್ಕೆ 3,412.82 ಕೋಟಿ ರೂ.ಗಳನ್ನು ಹಂಚಿಕೆ ಮಾಡಿದ್ದು, ಇದು 2024–25ರಲ್ಲಿ 3,125.96 ಕೋಟಿ ರೂ.ಗಳಿಗಿಂತ ಅಂದರೆ ಶೇ. 9 ರಷ್ಟು ಹೆಚ್ಚಾಗಿದೆ.

ಅರಣ್ಯ ವ್ಯಾಪ್ತಿಯನ್ನು ವಿಸ್ತರಿಸಲು, ಅಸ್ತಿತ್ವದಲ್ಲಿರುವ ಕಾಡುಗಳನ್ನು ರಕ್ಷಿಸಲು ಮತ್ತು ಕಾಡ್ಗಿಚ್ಚುಗಳನ್ನು ತಡೆಗಟ್ಟಲು ಕೆಲಸ ಮಾಡುವ ರಾಷ್ಟ್ರೀಯ ಹಸಿರು ಭಾರತ ಮಿಷನ್ 2025–26ರಲ್ಲಿ 220 ಕೋಟಿ ರೂ.ಗಳನ್ನು ಪಡೆಯಲಿದೆ,

ನೈಸರ್ಗಿಕ ಸಂಪನ್ಮೂಲ ಮತ್ತು ಪರಿಸರ ವ್ಯವಸ್ಥೆಯ ಸಂರಕ್ಷಣೆಗಾಗಿ ಹಣವನ್ನು ಸಹ 30 ಕೋಟಿ ರೂ.ಗಳಿಂದ 50 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಈ ಘಟಕದ ಅಡಿಯಲ್ಲಿ, ಜೀವವೈವಿಧ್ಯ ಸಂರಕ್ಷಣೆಗಾಗಿ ಬಜೆಟ್ ಅನ್ನು ಸುಮಾರು ಮೂರು ಪಟ್ಟು ಹೆಚ್ಚಿಸಲಾಗಿದ್ದು, 3.5 ಕೋಟಿ ರೂ.ಗಳಿಂದ 10 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

ಜಲಚರ ಪರಿಸರ ವ್ಯವಸ್ಥೆಗಳನ್ನು ಸಂರಕ್ಷಿಸಲು ಸರ್ಕಾರವು 35 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದ್ದು, 2024–25ರಲ್ಲಿ ಈ ಪ್ರಮಾಣ 23.5 ಕೋಟಿ ರೂ.ಗಳಷ್ಟಿತ್ತು. ಅಲ್ಲದೆ ಪ್ರಾಜೆಕ್ಟ್ ಟೈಗರ್ ಮತ್ತು ಪ್ರಾಜೆಕ್ಟ್ ಎಲಿಫೆಂಟ್ ಪ್ರಾಣಿಗಳು ಮತ್ತು ಅವುಗಳ ಆವಾಸಸ್ಥಾನಗಳನ್ನು ರಕ್ಷಿಸುವತ್ತ ಗಮನಹರಿಸುವ ನಿಧಿಯನ್ನು 245 ಕೋಟಿ ರೂ.ಗಳಿಂದ 290 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ

ವೈದ್ಯಕೀಯ ಕಾಲೇಜಿನಲ್ಲಿ 10 ಸಾವಿರ ಸೀಟು ಹೆಚ್ಚಳ

ನವದೆಹಲಿ, ಫೆ.1– ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕೇಂದ್ರಬಜೆಟ್‌ನಲ್ಲಿ ಮಹತ್ವದ ಘೋಷಣೆ ಮಾಡಿದ್ದಾರೆ. ಮುಂದಿನ ವರ್ಷದಿಂದ ವೈದ್ಯಕೀಯ ಕಾಲೇಜಿನಲ್ಲಿ 10 ಸಾವಿರ ಸೀಟುಗಳನ್ನು ಹೆಚ್ಚಳ ಮಾಡಲಾಗುವುದು ಎಂದು ಹೇಳಿದ್ದಾರೆ.

ವೈದ್ಯಕೀಯ ಕ್ಷೇತ್ರ ಸುಧಾರಣೆಗೆ ಪಿಎಂ ಮೋದಿ ವಿಶೇಷ ಕಾಳಜಿ ವಹಿಸಿದ್ದಾರೆ. ಹೆಚ್ಚಿನ ಅನುದಾನವನ್ನು ಅದಕ್ಕಾಗಿ ಮೀಸಲಿಟ್ಟಿದ್ದಾರೆ. ಆರೋಗ್ಯ ವೈದ್ಯಕೀಯ ಕ್ಷೇತ್ರ ಸುಧಾರಣೆಯದರೆ ದೇಶದ ಭವಿಷ್ಯ ಉಜ್ವಲವಾಗುತ್ತದೆ. ಮುಂದಿನ ವರ್ಷ ವೈದ್ಯಕೀಯ ಕಾಲೇಜುಗಳಲ್ಲಿ ಹತ್ತು ಸಾವಿರ ಹೆಚ್ಚುವರಿ ಸೀಟುಗಳನ್ನು ಸೇರಿಸಲಾಗುವುದು ಮತ್ತು ಐದು ವರ್ಷಗಳಲ್ಲಿ ಒಟ್ಟು 75,000 ಸೀಟುಗಳನ್ನು ಸೇರಿಸಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ. ಪಿಎಂ ರಿಸರ್ಚ್ ಫೆಲೋಶಿಪ್ ಯೋಜನೆಯಡಿಯಲ್ಲಿ 10,000 ಫೆಲೋಶಿಪ್‌ಗಳನ್ನು ಒದಗಿಸಲಾಗುವುದು ಹಾಗೆಯೇ ಐಐಟಿ ಮತ್ತು ಐಐಎಸ್‌ಸಿಯಲ್ಲಿ ತಾಂತ್ರಿಕ ಸಂಶೋಧನೆಗಾಗಿ ಮುಂದಿನ ಐದು ವರ್ಷಗಳಲ್ಲಿ PM ರಿಸರ್ಚ್ ಫೆಲೋಶಿಪ್ ಯೋಜನೆಯಡಿ 10,000 ಫೆಲೋಶಿಪ್‌ಗಳನ್ನು ಒದಗಿಸಲಾಗುವುದು ಎಂದು ಬಜೆಟ್‌ನಲ್ಲಿ ನಿರ್ಮಾಲಾ ಘೋಷಿಸಿದ್ದಾರೆ.

ಬಜೆಟ್ 8, ಸೀರೆ ಎಂಟು



ನವದೆಹಲಿ, ಫೆ.1– ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪ್ರತಿ ವರ್ಷ ಬಜೆಟ್ ಜೊತೆಗೆ ಸೀರೆ ವಿಚಾರಕ್ಕೂ ಹೆಚ್ಚು ಗಮನ ಸೆಳೆದಿದ್ದಾರೆ. ಪ್ರತಿ ಬಾರಿ ಬಜೆಟ್ ಮಂಡಿಸುವಾಗ ಭಾರತದ ವಿವಿಧ ಪ್ರದೇಶಗಳ ಸಂಸ್ಕೃತಿಯನ್ನು ಬಿಂಬಿಸುವ ಸೀರೆಯನ್ನುಟ್ಟು ಮಿಂಚಿದ್ದಾರೆ.

ಸೀತಾರಾಮನ್ ಅವರಿಗೆ ಸೀರೆಗಳೆಂದರೆ ಅಚ್ಚುಮೆಚ್ಚು. ಇದುವರೆಗೂ ತಾವು ಮಂಡಿಸಿದ ಬಜೆಟ್‌ಗಳಲ್ಲಿ ಒಂದೊಂದು ಬಗೆಯ, ಕಲಾ ಕುಸುರಿಯ ವಿಶೇಷತೆ ಇರುವ ಸೀರೆಗಳನ್ನುಟ್ಟು ಗಮನ ಸೆಳೆದಿದ್ದಾರೆ. ಅವರು ಧರಿಸುವ ಸೀರೆಗಳು ಕೈಮಗ್ಗ (ಕೈಯಿಂದ ನೇಯ್ದ) ಭಾರತೀಯ ಜವಳಿ ಮತ್ತು ಕರಕುಶಲ ವಸ್ತುಗಳ ಮೇಲಿನ ಅವರ ಪ್ರೀತಿಯನ್ನು ಪ್ರತಿಬಿಂಬಿಸುತ್ತವೆ. ಸೀರೆಗಳು ಭಾರತೀಯ ಸಂಸ್ಕೃತಿ, ಪರಂಪರೆ ಮೇಲೆ ಬೆಳಕು ಚೆಲ್ಲಿವೆ.

ಮದುಬನಿ ಕಲಾ ಸೀರೆ: ನಿರ್ಮಲಾ ಸೀತಾರಾಮನ್ ಅವರು ಮಧುಬನಿ ಕಲೆ ಮತ್ತು ಪದ್ಮ ಪ್ರಶಸ್ತಿ ಪುರಸ್ಕೃತ ದುಲಾರಿ ದೇವಿಯ ಕೌಶಲ ಗೌರವಾರ್ಥ ಈ ಸೀರೆ ಉಟ್ಟಿದ್ದಾರೆ. ಈ ಸೀರೆಯನ್ನು ದುಲಾರಿ ದೇವಿ ಅವರೇ ತಯಾರಿಸಿದ್ದಾರೆ. ಗೋಲ್ಡ್ ಕಲರ್ ಬಾರ್ಡರ್ ಹೊಂದಿರುವ ಸುಂದರವಾದ ಕ್ರೀಮ್ ಸೀರೆಯನ್ನು ಈ ಬಾರಿ ಬಜೆಟ್ ಮಂಡನೆಗೆ ಧರಿಸಿದ್ದರು. ಇದಕ್ಕೆ ಮ್ಯಾಚಿಂಗ್ ಎಂಬಂತೆ ಕೆಂಪು ಬಣ್ಣದ ಕುಪ್ಪಸವನ್ನು ಧರಿಸಿದ್ದರು.

ದುಲಾರಿ ದೇವಿ 2021 ರ ಪದ್ಮಶ್ರೀ ಪ್ರಶಸ್ತಿ

ಪದ್ಮ ಪ್ರಶಸ್ತಿ ಪುರಸ್ಕೃತೆ ತಯಾರಿಸಿದ ಸೀರೆಯನ್ನುಟ್ಟ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್

ಪುರಸ್ಕೃತರು. ಮಿಥಿಲಾ ಕಲಾ ಸಂಸ್ಥೆಯಲ್ಲಿ ಕ್ರೆಡಿಟ್ ಔಟ್ರೀಚ್ ಚಟುವಟಿಕೆಗಾಗಿ ಹಣಕಾಸು ಸಚಿವರು ಮಧುಬನಿಗೆ ಹೋಗಿದ್ದರು. ಆಗ ದುಲಾರಿ ದೇವಿ ಅವರು ಬಿಹಾರದ ಮಧುಬನಿ ಕಲೆಯ ಬಗ್ಗೆ ಸಚಿವರಿಗೆ ತಿಳಿಸಿದ್ದಲ್ಲದೇ, ಸಚಿವರಿಗೆ ಸೀರೆಯನ್ನು ಉಡುಗೊರೆಯಾಗಿ ನೀಡಿದ್ದರು. ಬಜೆಟ್ ಮಂಡನೆ ದಿನಕ್ಕೆ ಅದನ್ನು ಧರಿಸಲು ಸಚಿವರಿಗೆ ದೇವಿ ಅವರು ಕೋರಿದ್ದರು.

ಮಂಗಳಗಿರಿ ಸೀರೆ: 2024ರಲ್ಲಿ ತಮ್ಮ ಏಳನೇ ಬಜೆಟ್ ಮಂಡಿಸುವಾಗ ಮಜೆಂಟಾ (ಕೆನ್ನೇರಳೆ) ಬಾರ್ಡರ್ ಹೊಂದಿದ್ದ ಆಫ್ ವೈಟ್ ಬಣ್ಣದ ಮಂಗಳಗಿರಿ ಸೀರೆ ಧರಿಸಿದ್ದರು. ಗುಂಟೂರು ಜಿಲ್ಲೆಯಲ್ಲಿ ತಯಾರಾದ ಆ ಸೀರೆ ಆಂಧ್ರಪ್ರದೇಶದ ಸಂಸ್ಕೃತಿಯನ್ನು ಬಿಂಬಿಸಿತ್ತು. ಇದೇ ಸಂದರ್ಭದಲ್ಲಿ ಆಂಧ್ರಕ್ಕೆ ವಿಶೇಷ ಆರ್ಥಿಕ ನೆರವು ಘೋಷಿಸಿದ್ದು ವಿಶೇಷ.

ಟಸ್ಸರ್ ರೇಷ್ಮೆ ಸೀರೆ: 2024ರಲ್ಲೇ ಮಧ್ಯಂತರ ಬಜೆಟ್‌ಗಾಗಿ ಸೀತಾರಾಮನ್ ನೀಲಿ ಬಣ್ಣದ ಟಸ್ಸರ್ ರೇಷ್ಮೆ ಸೀರೆ ಉಟ್ಟಿದ್ದರು. ಅದರಲ್ಲಿ ಕಾಂತ ಕೈಯಿಂದ ಮಾಡಲಾಗಿತ್ತು. ಸೀರೆ ಜೊತೆಗೆ ಚಿನ್ನದ ಬಣ್ಣದ ಬ್ಲೌಸ್ ಧರಿಸಿದ್ದರು. ಪಶ್ಚಿಮ ಬಂಗಾಳವು ಕಾಂತ ಹೊಲಿಗೆಗೆ ಹೆಸರುವಾಸಿಯಾಗಿದೆ. ನೀಲಿ ಆರ್ಥಿಕ ಅಭಿವೃದ್ಧಿಗೆ ಒತ್ತು ನೀಡುವ, ಮೀನುಗಾರಿಕೆ ಅಭಿವೃದ್ಧಿ ಮೂಲಕ ಮತ್ಸ್ಯ ಕ್ರಾಂತಿಯ ಸಂದೇಶ ನೀಡಿದ್ದರು.

ಕರ್ನಾಟಕದ ಇಳಕಲ್ ಸೀರೆ: 2023ರ ಬಜೆಟ್ ಮಂಡನೆ ಸಂದರ್ಭದಲ್ಲಿ ಸಚಿವೆ ನಿರ್ಮಲಾ ಅವರು, ದೇವಾಲಯ ಬಾರ್ಡರ್ ಸೀರೆ ಆರಿಸಿಕೊಂಡಿದ್ದರು. ಕೆಂಪು ಬಣ್ಣದ ಟೆಂಪಲ್ ಬಾರ್ಡರ್ ಸೀರೆ ವಿಶೇಷವಾಗಿತ್ತು. ಕರ್ನಾಟಕ ಧಾರವಾಡದ ಇಳಕಲ್ ರೇಷ್ಮೆ ಸೀರೆ ಇದಾಗಿತ್ತು. ಕೈಯಿಂದ ನೇಯ್ದ ಕಸೂತಿ ಸೀರೆಯಿದು. ಸೀರೆಯಲ್ಲಿ ರಥ, ನವಿಲು, ಕಮಲಗಳ ಚಿತ್ರಗಳಿದ್ದವು. ಬಜೆಟ್‌ನಲ್ಲಿ ಕಸೂತಿ ಕಲೆಗೆ ಪ್ರೋತ್ಸಾಹ ನೀಡುವ ಸುಳಿವು ಕೊಟ್ಟಿದ್ದರು.

ಬೊಮ್ಕೈ ಸೀರೆ: 2022ರಲ್ಲಿ ಬಜೆಟ್ ಮಂಡಿಸುವಾಗ ಸೀತಾರಾಮನ್ ಅವರು, ಬೊಮ್ಕೈ ಸೀರೆಯನ್ನು ಧರಿಸಿದ್ದರು. ಸೀರೆ ಕಂದು ಬಣ್ಣದ್ದಾಗಿತ್ತು. ಒಡಿಶಾದ ಗಂಜಾಂ ಜಿಲ್ಲೆಯಲ್ಲಿ ಕೈಮಗ್ಗದಲ್ಲಿ ನೇಯ್ದ ವಿಶೇಷ ಸೀರೆಯಿದು.

ಪೋಚಂಪಲ್ಲಿ ಸೀರೆ: 2021ರಲ್ಲಿ ತಮ್ಮ ಮೂರನೇ ಬಜೆಟ್ ಮಂಡನೆಗಾಗಿ ನಿರ್ಮಲಾ ಸೀತಾರಾಮನ್ ಅವರು ಹೈದರಾಬಾದ್‌ನ ಪೋಚಂಪಲ್ಲಿ ಗ್ರಾಮದ ಕೆಂಪು ಮತ್ತು ಮಾಸಲು ಬಿಳಿ ಬಣ್ಣದ ಪೋಚಂಪಲ್ಲಿ ಸೀರೆಯನ್ನು ಧರಿಸಿದ್ದರು.

ರೇಷ್ಮೆ ಸೀರೆ: 2020ರಲ್ಲಿ ಸೀತಾರಾಮನ್ ಅವರು ಬಜೆಟ್ ಮಂಡನೆಗೆ ಹಳದಿ ರೇಷ್ಮೆ ಸೀರೆ ಉಟ್ಟು ಬಂದಿದ್ದರು. ಸೀರೆಗೆ ಮ್ಯಾಚ್ ಆಗುವ ಅದೇ ಬಣ್ಣದ ಕುಪ್ಪಸ ಧರಿಸಿದ್ದರು. ಸೀರೆಯ ಬಾರ್ಡರ್ ನೀಲಿ ಬಣ್ಣದ್ದಾಗಿತ್ತು. ಹಳದಿ ಸಮೃದ್ಧಿಯ ಸಂಕೇತವಾಗಿದೆ.

ಮಂಗಳಗಿರಿ ಸೀರೆ: 2019ರಲ್ಲಿ ಕೇಂದ್ರ ಹಣಕಾಸು ಸಚಿವೆಯಾಗಿ ನಿರ್ಮಲಾ ಸೀತಾರಾಮನ್ ಅವರ ಮೊದಲ ಬಜೆಟ್ ಮಂಡಿಸಿದ್ದರು. ಆಗ ಅವರು ಗೋಲ್ಡ್ ಕಲರ್ ಬಾರ್ಡರ್ ಹೊಂದಿರುವ ಗುಲಾಬಿ ಬಣ್ಣದ ಮಂಗಳಗಿರಿ ಸೀರೆಯನ್ನು ಧರಿಸಿದ್ದರು.ಸಾಂಪ್ರದಾಯಿಕ 'ಬಹಿ ಖಾತಾ'ದೊಂದಿಗೆ ಬಜೆಟ್ ಬ್ರೀಫ್‌ಕೇಸ್ ಅನ್ನು ತೆಗೆದುಕೊಂಡು ಬಂದಿದ್ದರು. ಅದರ ಮೇಲ್ಭಾಗದಲ್ಲಿ ರಾಷ್ಟ್ರೀಯ ಲಾಂಛನದೊಂದಿಗೆ ಚಿನ್ನದ ಎಳೆಗಳು ಇದ್ದವು.

ಮೈಸೂರು ಮಿತ್ರ ಭಾನುವಾರ 2 ಫೆಬ್ರವರಿ 2025

ಸೋಮವಾರಪೇಟೆ ತಾಲೂಕಿನಾದ್ಯಂತ

ಸಾರ್ವಜನಿಕರಿಗೆ ಉಪಟಳ ನೀಡುತ್ತಿದ್ದ 'ಕಾಜೂರು ಕರ್ಣ' ಒಂಟಿಸಲಗ ಸೆರೆ

ಅರಣ್ಯ ಇಲಾಖೆ ಜೀಪಿನ ಮೇಲೆ ದಾಳಿಗೆ ಯತ್ನ, ಅರವಳಿಕೆ ಚುಚ್ಚುಮದ್ದು ನೀಡಿ ಸೆರೆ



ಅರಣ್ಯ ಇಲಾಖೆಗೆ ಸೆರೆ ಸಿಕ್ಕಿರುವ ಕಾಜೂರು ಕರ್ಣ ಒಂಟಿಸಲಗ.

ಮಡಿಕೇರಿ,ಫೆ.1– ಸೋಮವಾರಪೇಟೆ ತಾಲೂಕು ವ್ಯಾಪ್ತಿಯಲ್ಲಿ ಕೃಷಿಕರು, ಬೆಳೆಗಾರರು, ಸಾರ್ವಜನಿಕರಿಗೆ ಉಪಟಳ ನೀಡುತ್ತಿದ್ದ 'ಕಾಜೂರು ಕರ್ಣ' ಎಂಬ ಹೆಸರಿನ 40 ವರ್ಷ ಪ್ರಾಯದ ಒಂಟಿ ಸಲಗವನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ತನ್ನ ಪುಂಡಾಟಗಳಿಂದ ಸಾರ್ವಜನಿಕರಿಗೆ, ಸ್ಥಳೀಯ ನಿವಾಸಿಗಳಿಗೆ, ವಾಹನ ಸವಾರರಿಗೆ ಭೀತಿ ಹುಟ್ಟಿಸಿದ್ದ ಕಾಡಾ ನೆಯನ್ನು ಸೆರೆ ಹಿಡಿಯುವಂತೆ ತೀವ್ರ ಒತ್ತಾಯ ಬಂದ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಕಾಡಾನೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದೆ.

ಎಲಿಫ್ಯಾಂಟ್ ಟಾಸ್ಕ್ ಫೋರ್ಸ್ ಮತ್ತು ರ್‍ಯಾಪಿಡ್ ರೆಸ್ಪಾನ್ಸ್ ಟೀಮ್ ಸಿಬ್ಬಂದಿಗಳು ಯಡವನಾಡು, ಜೇನುಕಲ್ಲುಬೆಟ್ಟ, ಮಾಲಂಬಿ, ನಿಡ್ತ, ಹರದೂರು ಮೀಸಲು ಅರಣ್ಯದಲ್ಲಿ ಪುಂಡಾನೆ ಕಾಜೂರು ಕರ್ಣನಿಗಾಗಿ ನಿರಂತರ ಹುಡುಕಾಟ ನಡೆಸು ತ್ತಿದ್ದರು. ಶುಕ್ರವಾರ ಕಾಜೂರು ಅರಣ್ಯದಲ್ಲಿ ವಾಸ್ತವ್ಯ ಹೂಡಿದ್ದ ಕಾಜೂರು ಕರ್ಣನನ್ನು ಗುರುತಿಸಿದ ಅರಣ್ಯ ಸಿಬ್ಬಂದಿಗಳು ಶನಿವಾರ ಬೆಳಿಗ್ಗೆ ಕಾರ್ಯಾಚರಣೆ ನಡೆಸಿ ಸೆರೆ ಹಿಡಿದಿದ್ದಾರೆ.

ಅರವಳಿಕೆ ತಜ್ಞರಾದ ಡಾ. ರಮೇಶ್, ಡಾ.ಚಿಟ್ಟಿಯಪ್ಪ ಶಾರ್ಪ್ ಶೂಟರ್ ರಂಜನ್ ಹಾಗೂ ಅರಣ್ಯಾಧಿಕಾರಿಗಳ ತಂಡ ಶನಿವಾರ ಬೆಳಗ್ಗಿನ ಜಾವ ಸುಮಾರು 4 ಗಂಟೆಗೆ ಕಾರ್ಯಾಚರಣೆ ಪ್ರಾರಂಬಿಸಿದ್ದಾರೆ. ಬೆಳಗ್ಗೆ 7.45ಕ್ಕೆ ಕಾಜೂರು ಜಂಕ್ಷನ್ ಬಳಿಯೇ ಬಂದ ಕಾಡಾನೆ ಅರಣ್ಯ ಇಲಾಖೆಯ ಜೀಪನ್ನು ಕಂಡ ತಕ್ಷಣ ದಾಳಿಗೆ ಮುಂದಾಗಿದೆ. ಕೂಡಲೆ ಶಾರ್ಪ್ ಶೂಟರ್ ರಂಜನ್ ಅರವಳಿಕೆ ಚುಚ್ಚು ಮದ್ದನ್ನು ಕಾಡಾನೆಗೆ ಶೂಟ್ ಮಾಡಿದ್ದಾರೆ.

ಈ ವೇಳೆ ನಿಯಂತ್ರಣ ಕಳೆದುಕೊಂಡ ಕಾಡಾನೆ ಕಾಜೂರು ಕರ್ಣನನ್ನು ದುಬಾರೆಯ ಸಾಕಾನೆ ಶಿಬಿರದ ಹರ್ಷ, ಪ್ರಶಾಂತ, ಸುಗ್ರೀವಾ, ಧನುಂಜಯ ಮತ್ತು ಜಯ ಮಾರ್ತಂಡ ಸಾಕಾನೆಗಳು ತಮ್ಮ ವಶಕ್ಕೆ ತೆಗೆದುಕೊಂಡು ಕಾಡಿನೊಳಗೆ ನಡೆಸಿಕೊಂಡು ಬಂದವು. ಬಳಿಕ ಜೆಸಿಬಿ ಸಹಾಯದಿಂದ ಕಾಡಾನೆಯನ್ನು ಲಾರಿಗೆ ಹತ್ತಿಸಲಾಯಿತು.

ಕಾಡಾನೆ ಸೆರೆ ಕಾರ್ಯಾಚರಣೆಯ ಮಾಹಿತಿ ಅರಿತು ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಡಾ.ಮಂತರ್‌ಗೌಡ, ಡಿಎಫ್‌ಓ ಭಾಸ್ಕರ್ ಅವರಿಂದ ಮಾಹಿತಿ ಪಡೆದುಕೊಂಡರು. ಎಸಿಎಫ್ ಗೋಪಾಲ್, ಆರ್‌ಎಫ್‌ಓ ಶೈಲೇಂದ್ರ ಕುಮಾರ್ ಸೇರಿದಂತೆ ಅರಣ್ಯ ಇಲಾಖೆ ಸಿಬ್ಬಂದಿಗಳು ಹಾಜರಿದ್ದರು.

ಎಂ.ಎಂ.ರಾಜ ನಿಧನ



ವಿರಾಜಪೇಟೆ, ಫೆ.1– ಪಟ್ಟಣದ ಅರಸು ನಗರದ ನಿವಾಸಿ ದಿವಂಗತ ಮಾದವನ್ ಅವರ ಪುತ್ರ ಆಚಾರಿ ಎಂ.ಎಂ.ರಾಜ(53) ನಿಧನರಾಗಿದ್ದು, ವಿರಾಜಪೇಟೆ ಮೀನುಪೇಟೆಯಲ್ಲಿರುವ ಹಿಂದೂ ರುದ್ರ ಭೂಮಿಯಲ್ಲಿ ಶನಿವಾರ ಅಂತ್ಯಕ್ರಿಯೆ ನೆರವೇರಿತು. ರಾಜ ಅವರು ಕುಟುಂಬ ಹಾಗೂ ಅಪಾರ ಬಂದುಗಳನ್ನು ಅಗಲಿದ್ದಾರೆ

ಕಟ್ಟೆಮಾಡು ಶ್ರೀ ಮಹಾ ಮೃತ್ಯುಂಜಯ ದೇವಸ್ಥಾನದ ಅರ್ಚಕರ ಮೇಲೆ ಹಲ್ಲೆ

ಕೊಡಗು ಜಿಲ್ಲಾ ವಿಶ್ವ ಹಿಂದೂ ಪರಿಷತ್ ಖಂಡನೆ



ಮಡಿಕೇರಿ,ಫೆ.1– ಕಟ್ಟೆಮಾಡು ಶ್ರೀ ಮಹಾ ಮೃತ್ಯುಂಜಯ ದೇವಾಲಯದ ಪ್ರಧಾನ ಅರ್ಚಕ ವಿಘ್ನೇಶ್ ಭಟ್ ಹಾಗೂ ಅವರ ತಾಯಿಯ ಮೇಲೆ ಮೂರ್ನಾಡಿನಲ್ಲಿ ಕಿಡಿಗೇಡಿಗಳು ನಡೆಸಿದ ಹಲ್ಲೆ ಪ್ರಕರಣವನ್ನು ತೀವ್ರವಾಗಿ ಖಂಡಿಸುವುದಾಗಿ ಕೊಡಗು ಜಿಲ್ಲಾ ವಿಶ್ವ ಹಿಂದು ಪರಿಷತ್ ಮಠ–ಮಂದಿರ್ ಪ್ರಮುಖ್ ಡಾ.ಮಹಾಬಲೇಶ್ವರ್ ತಿಳಿಸಿದ್ದಾರೆ.

ದೇವಾಲಯ, ದೇವಾಲಯದ ಅರ್ಚಕರು ಹಾಗೂ ಧಾರ್ಮಿಕ ಪೂಜೆ, ಪುನಸ್ಕಾರ ಇವೆಲ್ಲವು ಹಿಂದೂ ಧರ್ಮದ ಮುಖ್ಯ ಆಧಾರ ಸ್ತಂಭವಾಗಿದೆ. ಹಿಂದೂ ಧರ್ಮವನ್ನು ಉಳಿಸಲು ಅರ್ಚಕರು ನೀಡುತ್ತಿರುವ ಕೊಡುಗೆ ಅಪಾರವಾಗಿದೆ. ಈ ರೀತಿಯ ಹಲ್ಲೆ, ಜೀವ ಬೆದರಿಕೆ ಪ್ರಕರಣಗಳು ಕುತಂತ್ರದ ಒಂದು ಭಾಗವಾಗಿದೆ. ಅರ್ಚಕರ ಮೇಲೆ ಹಲ್ಲೆ ನಡೆದು 5 ದಿನ ಕಳೆದರೂ ತಪ್ಪಿತಸ್ಥರನ್ನು ಬಂಧಿಸುವಲ್ಲಿ ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ವಿಫಲವಾಗಿದೆ. ಪ್ರಕರಣವನ್ನು ಲಘುವಾಗಿ ಪರಿಗಣಿಸಿದಂತೆ ಕಂಡು ಬರುತ್ತಿದೆ ಎಂದು ಆರೋಪಿಸಿದ್ದಾರೆ.

ದುಷ್ಕರ್ಮಿಯನ್ನು ತಕ್ಷಣ ಬಂಧಿಸಿ, ಅರ್ಚಕರಿಗೆ ಹಾಗೂ ಅರ್ಚಕರ ಕುಟುಂಬಕ್ಕೆ ನ್ಯಾಯ ಒದಗಿಸಬೇಕು. ತಪ್ಪಿದಲ್ಲಿ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ ಎಂದು ಡಾ.ಮಹಾಬಲೇಶ್ವರ್ ಭಟ್ ಎಚ್ಚರಿಕೆ ನೀಡಿದ್ದಾರೆ.

ಹಾಲೇರಿ ಕಾಂಡನಕೊಲ್ಲಿ ಗ್ರಾಮದಲ್ಲಿ ಹುಲಿ ಪ್ರತ್ಯಕ್ಷ



ಹಾಲೇರಿ ಕಾಂಡನ ಕೊಲ್ಲಿ ಗ್ರಾಮದಲ್ಲಿ ಹುಲಿ ಸಂಚಾರದ ಹೆಜ್ಜೆ ಗುರುತುಗಳು ಕಂಡು ಬಂದಿರುವುದು.

ಸುಂಟಿಕೊಪ್ಪ, ಫೆ.1– ಹಾಲೇರಿ ಕಾಂಡನ ಕೊಲ್ಲಿ ಗ್ರಾಮದಲ್ಲಿ ಹುಲಿ ಓಡಾಟ ಕಂಡು ಬಂದಿದ್ದು, ಗ್ರಾಮಸ್ಥರು ಭಯ ಭೀತರಾಗಿದ್ದಾರೆ. ಹಾಲೇರಿಯ ಬಿಜ್ಜಂಡ ಸುಬ್ರಮಣಿ ಅವರ ತೋಟದಿಂದ ಇಳಿದಿರುವ ಹುಲಿ ಮುದ್ದರ ಬೋಪಯ್ಯ ಎಂಬವರ ಗದ್ದೆಯ ಮೂಲಕ ಬಾರಿಕೆ ತೋಟಕ್ಕೆ ಹೋಗಿರುವ ಸುಳಿವು ಸಿಕ್ಕಿದೆ.


ಯಶೋಧರ ತೋಟದ ಮಾಲೀಕರು

ಹೆಜ್ಜೆ, ರಕ್ತದ ಗುರುತು ಪತ್ತೆ

ವಾಕಿಂಗ್‌ಗೆ ತೆರಳಿದ್ದಾಗ ಹುಲಿಯ ಹೆಜ್ಜೆ ಗುರುತು ಹಾಗೂ ರಕ್ತದ ಕಲೆಗಳು ಕಂಡು ಬಂದಿದೆ. ಹುಲಿ ಬೇರೆ ಪ್ರಾಣಿಯನ್ನು ಭೇಟೆ ಆಡಿರುವ ಕುರಿತು ಸಂಶಯ ವ್ಯಕ್ತವಾಗಿದೆ. ಈ ಕುರಿತು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಗ್ರಾಮಸ್ಥರು ಲಿಖಿತ ಮಾಹಿತಿ ನೀಡಿದ್ದಾರೆ.

ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ರಕ್ತದ ಮಾದರಿ ಸಂಗ್ರಹಿಸಿದ್ದಾರೆ. ರಕ್ತದ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸುವುದಾಗಿ ತಿಳಿಸಿರುವ ಅರಣ್ಯ ಇಲಾಖೆ ಅಧಿಕಾರಿಗಳು ಹುಲಿ ಸಂಚಾರ ಕಂಡು ಬಂದಿರುವುದರಿಂದ ಗ್ರಾಮಸ್ಥರು ಎಚ್ಚರಿಕೆಯಿಂದ ಇರಬೇಕೆಂದು ಸೂಚಿಸಿದ್ದಾರೆ.

ಒಣಗಿ ನಿಂತಿದ್ದ ಭಾರೀ ಗಾತ್ರದ ಮರ ತೆರವು



ಸುಂಟಿಕೊಪ್ಪ: ಕೊಡಗರಹಳ್ಳಿ ಕಂಬಿಬಾಣೆ ಮಾರ್ಗವಾಗಿ ಪ್ರವಾಸಿ ತಾಣ ಚಿಕ್ಲಿಹೊಳೆಗೆ ಸಂಪರ್ಕ ಕಲ್ಪಿಸುವ ರಸ್ತೆ ಬದಿಯ ಖಾಸಗಿ ತೋಟವೊಂದರಲ್ಲಿ ಒಣಗಿ ನಿಂತು ಅಪಾಯಕ್ಕೆ ಆಹ್ವಾನಿಸುತ್ತಿದ್ದ ಭಾರೀ ಗಾತ್ರದ ಹೊನ್ನೆ ಮರವನ್ನು ಅರಣ್ಯ ಇಲಾಖೆ ತೆರವುಗೊಳಿಸಿದೆ. ಈ ಕಾರ್ಯಾಚರಣೆಯಿಂದ ಶಾಲಾ ಮಕ್ಕಳು, ಮತ್ತವರ ಪೋಷಕರು ಹಾಗೂ ವಾಹನ ಸವಾರರು ನಿಟ್ಟುಸಿರು ಬಿಟ್ಟಿದ್ದಾರೆ. ಅರಣ್ಯ ಇಲಾಖೆಯ ಕುಶಾಲನಗರ ವಲಯಕ್ಕೆ ಸೇರಿದ ಸಹಾಯಕ ವಲಯ ಅರಣ್ಯಾಧಿಕಾರಿ ಕೆ.ಎಂ.ದೇವಯ್ಯ ಮತ್ತು ಸಿಬ್ಬಂದಿ ಈ ಕಾರ್ಯಾಚರಣೆ ನಡೆಸಿ ಹೊನ್ನೆ ಮರ ತೆರವು ಮಾಡಿ ಆನೆಕಾಡು ಅರಣ್ಯ ಮರ ಸಂಗ್ರಹಾಲಯಕ್ಕೆ ಸಾಗಿಸಿದರು.

ಕೊಡಗರಹಳ್ಳಿ ಕಂಬಿಬಾಣೆ ಸಂಪರ್ಕ ರಸ್ತೆಯಲ್ಲಿ ಖಾಸಗಿ, ಸರಕಾರಿ ಪ್ರಾಥಮಿಕ ಹಾಗೂ ಅನುದಾನಿತ ಪ್ರೌಢ ಶಾಲೆಯು ಕಾರ್ಯಚರಿಸುತ್ತಿದೆ. ಈ ರಸ್ತೆಯಲ್ಲಿರುವ ಶಾಲೆಗಳಿಗೆ ಪ್ರತಿ ದಿನ ನೂರಾರು ವಿದ್ಯಾರ್ಥಿಗಳು ನಡೆದುಕೊಂಡು ತೆರಳುತ್ತಾರೆ. ಅಲ್ಲದೆ ಪ್ರವಾಸಿ ತಾಣ ಚಿಕ್ಲಿಹೊಳೆ ಸಂಪರ್ಕ ರಸ್ತೆಯೂ ಇದಾಗಿದ್ದು ಈ ಭಾಗದ ನಿವಾಸಿಗಳು ಹಾಗೂ ಪ್ರವಾಸಿಗರು ವಾಹನಗಳಲ್ಲಿ ಸಂಚರಿಸುವ ಸಂದರ್ಭ ಒಣಗಿ ನಿಂತಿರುವ ಮರ ಬಿದ್ದು ಅಪಾಯ ಎದುರಾಗುವ ಸಾಧ್ಯತೆ ಅಧಿಕವಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಮೈಕ್ರೋ ಫೈನಾನ್ಸ್ ಕಿರುಕುಳ ತಾಳಲಾರದೆ ತಾಯಿ ಆತ್ಮಹತ್ಯೆ

ಮನನೊಂದ ಮಗನೂ ಕೆರೆಗೆ ಹಾರಿ ಆತ್ಮಹತ್ಯೆ

ಕೆರೆಯಲ್ಲಿ ಮೃತದೇಹ ಪತ್ತೆ, ಕುಟುಂಬಸ್ಥರ ಆಕ್ರಂದನ



ಹಲಗೂರು, ಫೆ.1– ಮೈಕ್ರೋ ಫೈನಾನ್ಸ್ ಕಿರುಕುಳ ತಾಳಲಾರದೆ ತಾಯಿ ವಿಷ ಸೇವಿಸಿ ಮೃತಪಟ್ಟ ಸುದ್ದಿ ತಿಳಿದು ತೀವ್ರ ಮನನೊಂದ ಆಕೆಯ ಪುತ್ರ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಧಾರುಣ ಘಟನೆ ನಡೆದಿದೆ

ಹಲಗೂರು ಸಮೀಪದ ಕೊನ್ನಾಪುರ ಗ್ರಾಮದ ಪ್ರೇಮಾ ಮತ್ತು ಅಂದಾನಯ್ಯರವರ ಪುತ್ರ ಕೆ.ಎ.ರಂಜಿತ್ (30) ಮೃತ ದುರ್ದೈವಿ.

ಸಾಲದ ಕಂತುಗಳನ್ನು ಪಾವತಿಸಿಲ್ಲ ಎಂದು ಚನ್ನಪಟ್ಟಣ ತಾಲೂಕಿನ ಖಾಸಗಿ ಮೈಕ್ರೋ ಫೈನಾನ್ಸ್ ಕಂಪನಿಯವರು ಇತ್ತೀಚೆಗೆ ರಂಜಿತ್ ಅವರ ಮನೆಯನ್ನು ಜಪ್ತಿ ಮಾಡಿದ್ದರು. ಇದರಿಂದಾಗಿ ಮನನೊಂದಿದ್ದ ಆತನ ತಾಯಿ ಪ್ರೇಮಾ ಜ.27ರಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು. ವಿಚಾರ ತಿಳಿದ ಪುತ್ರ ರಂಜಿತ್ ಅಂದಿನಿಂದಲೂ ನಾಪತ್ತೆಯಾಗಿದ್ದ.

ಸಂಬಂಧಿಕರ ಮನೆಗಳಲ್ಲೂ ಹುಡುಕಾಟ ಮಾಡಿದ ಕುಟುಂಬದ ಸದಸ್ಯರು ಪುತ್ರ ರಂಜಿತ್ ಇಲ್ಲದೇ ತಾಯಿ ಪ್ರೇಮಾ ಅವರ ಅಂತ್ಯಕ್ರಿಯೆ ನಡೆಸಿದ್ದರು. ಶನಿವಾರ ಬೆಳಿಗ್ಗೆ ಹಲಗೂರು ಕೆರೆಯಲ್ಲಿ ರಂಜಿತ್ ಮೃತದೇಹ ಪತ್ತೆಯಾಗಿದೆ. ಪ್ರೇಮಾ ಜೊತೆಗೆ ರಂಜಿತ್ ಕಳೆದುಕೊಂಡ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು.

ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆ.10, ಶ್ರೀರಂಗಪಟ್ಟಣ ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ

ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ

ಶ್ರೀರಂಗಪಟ್ಟಣ, ಫೆ.1– ಪಟ್ಟಣದ ಪುರಸ ಭೆಯ 10ನೇ ಅವಧಿಗೆ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಚುನಾವಣೆ ಫೆ.10 ರಂದು ನಡೆಯಲಿದೆ.

ಈ ಕುರಿತು ತಹಸೀಲ್ದಾರ್ ಪ್ರಕಟಣೆ ಹೊರಡಿಸಿದ್ದು, ಸರ್ಕಾರದ ಅಧಿಸೂಚನೆಯಂತೆ ಅಧ್ಯಕ್ಷ ಸ್ಥಾನವನ್ನು ಸಾಮಾನ್ಯ ಮಹಿಳೆ ಹಾಗೂ ಉಪಾಧ್ಯಕ್ಷರ ಸ್ಥಾನವನ್ನು ಸಾಮಾನ್ಯ ವರ್ಗಕ್ಕೆ ಮೀಸಲಾತಿ ನಿಗಧಿ ಮಾಡಲಾಗಿದೆ. ಜಿಲ್ಲಾಧಿಕಾರಿಗಳ ಸೂಚನೆಯಂತೆ ಅಂದು ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಚುನಾವಣೆ ನಡೆಸಲು ದಿನಾಂಕ ಹಾಗೂ ಸಮಯವನ್ನು ನಿಗಧಿಪಡಿಸಿದೆ.

ಅಂದು ಬೆಳಿಗ್ಗೆ 9 ಗಂಟೆಯಿಂದ 11 ಗಂಟೆವರೆಗೆ ನಾಮಪತ್ರ ಸಲ್ಲಿಸುವುದು, ಮಧ್ಯಾಹ್ನ 1 ಗಂಟೆ ಸಭೆ ನಡೆಸಲಾಗುವುದು. ನಂತರ 1 ಗಂಟೆಯಿಂದ 1.20 ರವರೆಗೆ ಚುನಾವಣಾ ಸಭೆಯ ಪ್ರಾರಂಭದ ಹಾಗೂ ನಾಮಪತ್ರಗಳ ಪರಿಶೀಲನೆ. ಬಳಿಕ ಮಧ್ಯಾಹ್ನ 1.20 ರಿಂದ 1.30ರ ವರೆಗೆ ನಾಮಪತ್ರ ವಾಪಸ್ಸು ಪಡೆಯಲು ಸಮಯ ನಿಗಧಿ ಪಡಿಸಲಾಗಿದೆ. ಮತದಾನ ಅವಶ್ಯವಿದ್ದಲ್ಲಿ ಮಧ್ಯಾಹ್ನ 1.30ಕ್ಕೆ ಮತದಾನ ನಡೆಸುವುದಾಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರೊ.ಎಂ.ಕರಿಮುದ್ದೀನ್ ಅನರ್ಘ್ಯ ರತ್ನ



ದಿವಂಗತ ಪ್ರೊ.ಎಂ.ಕರಿಮುದ್ದೀನ್ ಅವರ ಸಂಸ್ಮರಣ ಗ್ರಂಥ 'ಗಂಜಾಂ ಪ್ರೊ.ಎಂ.ಕರಿಮುದ್ದೀನ್' ಕೃತಿ ಬಿಡುಗಡೆ ಮಾಡಲಾಯಿತು.

ಶ್ರೀರಂಗಪಟ್ಟಣ, ಫೆ.1– ಬಹುಭಾಷಾ ಪಂಡಿತ, ಸಾಹಿತಿ, ದಿವಂಗತ ಪ್ರೊ.ಎಂ. ಕರಿಮುದ್ದೀನ್ ಅನರ್ಘ್ಯ ರತ್ನದಂತಿದ್ದರು ಎಂದು ಜಾನಪದ ತಜ್ಞ ಡಾ.ಪಿ.ಕೆ.ರಾಜಶೇಖರ್ ಬಣ್ಣಿಸಿದರು.

ಪಟ್ಟಣದಲ್ಲಿ ಆಯೋಜಿಸಲಾಗಿದ್ದ ಸಾಹಿತಿ, ಬಹುಭಾಷಾ ಪಂಡಿತ ದಿವಂಗತ ಪ್ರೊ.ಎಂ.ಕರಿಮುದ್ದೀನ್ ಅವರ ಸಂಸ್ಮರಣ ಗ್ರಂಥ 'ಗಂಜಾಂ ಪ್ರೊ.ಎಂ.ಕರಿಮುದ್ದೀನ್' ಕೃತಿ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೈಸೂರು ಮಹಾರಾಜ ಕಾಲೇಜಿನಲ್ಲಿ ಅವರು ಪಾಠ ಮಾಡುವಾಗ ಆಸುಪಾಸಿನ ತರಗತಿಗಳ ವಿದ್ಯಾರ್ಥಿಗಳು ಬಂದು ಕೇಳುತ್ತಿದ್ದರು. ಅವರ ಕಂಚಿನ ಕಂಠ, ಹಳೆಗನ್ನಡ ಮತ್ತು ಸಂಸ್ಕೃತ ಕಾವ್ಯಗಳ ವಾಚನ ಶೈಲಿ ಅದ್ಭುತವಾಗಿತ್ತು. ನಾನು ಕೂಡ ಅವರ ಶಿಷ್ಯ ಎಂಬುದು ಹೆಮ್ಮೆಯ ವಿಚಾರ ಪ್ರೊ.ಕರಿಮುದ್ದೀನ್ ಮುಸ್ಲಿಂ ಜನಾಂಗಕ್ಕೆ ಸೇರಿದ್ದ ಕಾರಣ ಮೈಸೂರು ವಿವಿಯಲ್ಲಿ ಅವರಿಗೆ ಸಿಗಬೇಕಾದ ಸ್ಥಾನಮಾನಗಳು ಸಿಗಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ರಾಜ್ಯ ಸಂಪನ್ಮೂಲ ಕೇಂದ್ರ ನಿವೃತ್ತ ನಿರ್ದೇಶಕ ಡಾ.ಎಸ್.ತುಕಾರಾಂ ಪುಸ್ತಕ ಕುರಿತು ಮಾತನಾಡಿ, ಪ್ರೊ.ಎಂ.ಕರಿಮುದ್ದೀನ್ ವಿವಿಧ ಧರ್ಮಗಳ ಭಾವೈಕತೆಯ ಕೊಂಡಿಯಂತೆ ಇದ್ದರು. ಕನ್ನಡ, ಇಂಗ್ಲಿಷ್, ಸಂಸ್ಕೃತ, ಉರ್ದು, ಪರ್ಶಿಯನ್, ಅರೇಬಿಕ್ ಭಾಷೆಗಳನ್ನು ತಿಳಿದಿದ್ದರು ಎಂದರು.

ಶಾಸಕ ರಮೇಶ ಬಂಡಿಸಿದ್ದೇಗೌಡ 'ಗಂಜಾಂ ಪ್ರೊ.ಎಂ.ಕರಿಮುದ್ದೀನ್' ಕೃತಿಯನ್ನು ಬಿಡುಗಡೆ ಮಾಡಿದರು.

ಕೃತಿಯ ಸಂಪಾದಕ ಡಾ.ಬಿ.ಸುಜಯಕುಮಾರ್ ಮಾತನಾಡಿ, ಪ್ರೊ.ಎಂ. ಕರಿಮುದ್ದೀನ್ ಅವರಲ್ಲಿ ಗಾಂಧೀಜಿಯ ಬದುಕಿನ ಅಂಶಗಳಿದ್ದವು. ಅವರು ಅಕ್ಷರಶಃ ಸಂತನಂತೆ ಬದುಕಿದರು ಎಂದರು. ಇತಿಹಾಸ ಸಂಶೋಧಕ ಪ್ರೊ.ನಂಜರಾಜ ಅರಸ್ ಅವರು, ಕರಿಮುದ್ದೀನ್ ಅವರ ಜತೆಗಿನ ತಮ್ಮ ಒಡನಾಟವನ್ನು ಸ್ಮರಿಸಿದರು. 'ಕರಿಮುದ್ದೀನ್ ಅವರ ಹೆಸರಿನಲ್ಲಿ ಪ್ರತಿ ವರ್ಷ ಸಾಧಕರಿಗೆ ಪ್ರಶಸ್ತಿ, ಪುರಸ್ಕಾರ ನೀಡಲಾಗುವುದು ಎಂದು ಓಂ ಶ್ರೀನಿಕೇತನ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಎಂ.ಪುಟ್ಟೇಗೌಡ ತಿಳಿಸಿದರು.

ಕೃತಿಯ ಮತ್ತೊಬ್ಬ ಸಂಪಾದಕ ಪ್ರೊ.ಇಲ್ಯಾಸ್ ಅಹಮದ್‌ಖಾನ್, ಕ್ಯಾತನಹಳ್ಳಿ ಚಂದ್ರಣ್ಣ, ಎಸ್.ಎಂ.ಶಿವಕುಮಾರ್, ಕೆಶೆಟ್ಟಿಹಳ್ಳಿ ಅಪ್ಪಾಜಿ, ಶೀಲಾ ನಂಜುಂಡಯ್ಯ, ಕೆ.ಎಸ್.ಜಯಶಂಕರ್, ಅಬ್ದುಲ್ಲಾ ಬೇಗ್ ಇತರರು ಪಾಲ್ಗೊಂಡಿದ್ದರು.

ಫೆ.5, ಮೇಲುಕೋಟೆಯಲ್ಲಿ ಜಾನಪದ ಜಾತ್ರೆ, ರಥಸಪ್ತಮಿ ಮಹೋತ್ಸವ



ಮೇಲುಕೋಟೆ: ಭಾರತೀಯ ಸಂಸ್ಕೃತಿಯ ಜೀವನಾಡಿಯಾದ ಜಾನಪದ ಕಲೆಗಳಿಗೆ ಮೂರು ದಶಕಗಳಿಂದ ವೇದಿಕೆಯಾದ ಚೆಲುವನಾರಾಯಣ ಸ್ವಾಮಿ ಸನ್ನಿದಿ ಜಾನಪದ ಜಾತ್ರೆ, ರಥಸಪ್ತಮಿ ಮಹೋತ್ಸವ ಫೆ.5ರಂದು ನಡೆಯಲಿದೆ.

ರಥ ಸಪ್ತಮಿಯ ಬುಧವಾರ ಮುಂಜಾನೆ 6 ಗಂಟೆಗೆ ಮೇಲುಕೋಟೆ ಶ್ರೀಚೆಲುವ ನಾರಾಯಣಸ್ವಾಮಿಗೆ ಸ್ವರ್ಣಲೇಪಿತ ಸೂರ್ಯಮಂಡಲ ವಾಹನೋತ್ಸವ, ಸ್ಥಾನೀಕಂ ನಾಗರಾಜ ಅಯ್ಯಂ ಗಾರ್ ಸಾಂಸ್ಕೃತಿಕ ವೇದಿಕೆ ಹಮ್ಮಿಕೊಂಡಿರುವ 26ನೇ ವರ್ಷದ ರಾಜ್ಯ ಮಟ್ಟದ ಜಾನಪದ ಕಲಾಮೇಳದಲ್ಲಿ 60ಕ್ಕೂ ಹೆಚ್ಚು ತಂಡಗಳ 800 ಕ್ಕೂ ಹೆಚ್ಚು ಕಲಾವಿದರು ಪಾಲ್ಗೊಂಡು ಅಭೂತಪೂರ್ವ ಕಲಾರಾಧನೆಯ ಸೇವೆ ಮಾಡಲಿದ್ದಾರೆ.

ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ದಂಪತಿ ಕಲಾಮೇಳ ಉದ್ಘಾಟಿಸಲಿದ್ದು, ಮೇಲು ಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ರಾಜ್ಯಮಟ್ಟದ ಜಾನಪದ ಕಲಾಮೇಳದಲ್ಲಿ ಕರ್ನಾಟಕದ ಎಲ್ಲಾ ಪ್ರಮುಖ ಜಾನಪದ ಕಲಾ ಪ್ರಕಾರಗಳ ಜೊತೆಗೆ ಕೇರಳದ ತಂಡಗಳು ಭಾಗವಹಿಸಲಿದೆ.

ಸುವರ್ಣಲೇಪಿತ ಸೂರ್ಯಮಂಡಲ ವಾಹನೋತ್ಸವ ಸಂಭ್ರಮದ ಕ್ಷಣದ ಜೊತೆಗೆ ನೂರಾರು ಕಲಾವಿದರ ಜಾನಪದ ಕಲಾವೈಭವ ಕಣ್ತುಂಬಿಕೊಳ್ಳಲು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಯತಿರಾಜದಾಸರ್ ಗುರುಪೀಠದ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ ಕೋರಿದ್ದಾರೆ.

ಕೆ.ಆರ್.ಪೇಟೆ ಪಿಎಲ್‌ಡಿ ಬ್ಯಾಂಕ್ ಚುನಾವಣೆ

14 ಕ್ಷೇತ್ರಗಳಿಗೆ 63 ಮಂದಿ ನಾಮಪತ್ರ ಸಲ್ಲಿಕೆ

ಕೆ.ಆರ್.ಪೇಟೆ, ಫೆ.1– ಇದೇ ಫೆ.8ರಂದು ತಾಲೂಕು ಪ್ರಾಥಮಿಕ ಕೃಷಿ ಭೂ ಅಭಿವೃದ್ಧಿ ಸಹಕಾರ ಬ್ಯಾಂಕ್(ಪಿಎಲ್‌ಡಿ ಬ್ಯಾಂಕ್) ನೂತನ ಆಡಳಿತ ಮಂಡಳಿಯ 14 ನಿರ್ದೇಶಕರ ಸ್ಥಾನಗಳಿಗೆ ನಡೆಯುವ ಚುನಾವಣೆ ನಾಮಪತ್ರ ಸಲ್ಲಿಸಲು ಇಂದು ಕಡೆಯ ದಿನವಾಗಿದ್ದು, ಕಾಂಗ್ರೆಸ್ ಹಾಗೂ ಜೆಡಿಎಸ್–ಬಿಜೆಪಿ ಮೈತ್ರಿ ಪಕ್ಷಗಳ ಅಭ್ಯರ್ಥಿಗಳು ಸೇರಿ 14 ಕ್ಷೇತ್ರಗಳಿಗೆ ಬರೋಬ್ಬರಿ 63 ಮಂದಿ ನಾಮಪತ್ರ ಸಲ್ಲಿಸಿದ್ದು, ಚುನಾವಣೆ ಭಾರೀ ರಂಗೇರಿದೆ.

ನಾಮಪತ್ರ ವಾಪಸ್ ಪಡೆಯಲು ಫೆ2 ಕಡೆಯ ದಿನಾಂಕವಾಗಿದೆ. ಮತದಾನವು ಫೆ.8ರಂದು ಪಟ್ಟಣದ ಶತಮಾನದ ಶಾಲೆಯಲ್ಲಿ (ಕೆಪಿಎಸ್) ಬೆಳಿಗ್ಗೆ 8ರಿಂದ ಮಧ್ಯಾಹ್ನ 3ಗಂಟೆಯವರೆಗೆ ನಡೆಯಲಿದೆ.

ಕಾಂಗ್ರೆಸ್ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್, ಹರಳಹಳ್ಳಿ ವಿಶ್ವನಾಥ್, ಜಿ.ಪಂ.ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಎ.ಬಿ.ಕುಮಾರ್, ಬಿ.ಟಿ.ವೆಂಕಟೇಶ್, ಅಡಕೆ ಬಿ.ಎಸ್. ಮಹೇಶ್ ಬೂಕನಕೆರೆ, ಟಿ.ಎಂ.ದೇವರಾಜು, ಸಣ್ಣನಿಂಗೇಗೌಡ, ಯೋಗೇಶ್, ಪುರಸಭಾ ಮಾಜಿ ಅಧ್ಯಕ್ಷ ಕೆ.ಟಿ.ಚಕ್ರಪಾಣಿ, ತಾಲೂಕು ಕೆಡಿಪಿ ಸದಸ್ಯ ಆಕಾಶ್, ಬೂಕನಕೆರೆ ಗ್ರಾ.ಪಂ.ಮಾಜಿ ಸದಸ್ಯ ಕುಮಾರ್, ಬಿ.ಎಸ್.ಕುಮಾರ್, ಐಚನಹಳ್ಳಿ ದಿನೇಶ್, ಗ್ರಾ.ಪಂ.ಮಾಜಿ ಅಧ್ಯಕ್ಷ ಮೋಹನ್ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ಮುತ್ತತ್ತಿಯಲ್ಲಿ ಹಾಸನದ ಯುವಕ ಜಲಸಮಾಧಿ



ಹಲಗೂರು, ಫೆ.1– ಸಮೀಪದ ಮುತ್ತತ್ತಿಯ ಕಾವೇರಿಯ ನದಿಯಲ್ಲಿ ನೀರಿನ ರಭಸಕ್ಕೆ ಸಿಲುಕಿ ಯುವಕನೊಬ್ಬ ಸಾವನ್ನಪ್ಪಿರುವ ಘಟನೆ ಕಳೆದ ಶುಕ್ರವಾರ ಸಂಜೆ ಸಂಭವಿಸಿದೆ. ಘಟನೆಯಲ್ಲಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಕಸಬಾ ಹೋಬಳಿಯ ಡೈರಿ ಶೆಟ್ಟಿಹಳ್ಳಿ ಗ್ರಾಮದ ಹರೀಶ್ (28) ಮೃತ ದುರ್ದೈವಿ.

ವೃತ್ತಿಯಲ್ಲಿ ಕಾರು ಚಾಲಕರಾಗಿದ್ದು, ಇವರು ಶುಕ್ರವಾರದಂದು ಬೆಂಗಳೂರಿನ ಐವರು ಸ್ನೇಹಿತರೊಂದಿಗೆ ಮುತ್ತತ್ತಿಗೆ ದೇವರ ದರ್ಶನಕ್ಕೆ ಬಂದು ದೇವರ ದರ್ಶನ ಪಡೆದು ಮಧ್ಯಾಹ್ನ ಮುತ್ತತ್ತಿಯ ಕಾವೇರಿ ನದಿಯಲ್ಲಿ ಈಜಲು ಹೋಗಿ ನದಿಯ ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ.

ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾಚಿದೇವರು ಶಿವಶರಣರಲ್ಲಿ ಶ್ರೇಷ್ಠ ವಚನಕಾರರು



ಮಡಿವಾಳ ಮಾಚಿದೇವ ಜಯಂತಿಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಚಾಮರಾಜನಗರ, ಫೆ.1– ಬಸವಣ್ಣನವರ ಅನುಭವ ಮಂಟಪದಲ್ಲಿದ್ದ ಶಿವ ಶರಣರಲ್ಲಿ ಮಡಿವಾಳ ಮಾಚಯ್ಯ ಅವರು ಅತ್ಯಂತ ಶ್ರೇಷ್ಠ ವಚನಕಾರರಾಗಿದ್ದಾರೆ ಎಂದು ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಸರಳವಾಗಿ ಆಯೋಜಿಸಲಾಗಿದ್ದ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಡಿವಾಳ ಮಾಚಿದೇವ ಅವರು ಕಾಯಕದಲ್ಲಿ ನಿಷ್ಠೆಯುಳ್ಳ ಶಿವಶರಣರ ಮೈಲಿಗೆ ಬಟ್ಟೆಗಳನ್ನು ಮಡಿ ಮಾಡಿ ಅವರಿಗೆ ತಲುಪಿಸುವ ಕಾಯಕ ಮಾಡುತ್ತಿದ್ದರು. ಮಡಿ ಬಟ್ಟೆ ಹೊತ್ತುಕೊಂಡು ವೀರಗಂಟೆ ಬಾರಿಸುತ್ತಾ ಭಕ್ತರಲ್ಲದವರು ತಮ್ಮನ್ನು ಮುಟ್ಟಬಾರದೆಂಬ ನಿಯಮವನ್ನು ವಿಧಿಸಿಕೊಂಡಿದ್ದ ನೇರ ಹಾಗೂ ನಿಷ್ಠೂರವಾದಿ ಮಾಚಿದೇವರು. ಅವರ ಆದರ್ಶ ಮೌಲ್ಯಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದು ಶಾಸಕರು ತಿಳಿಸಿದರು.

ಅನುಭವ ಮಂಟಪ ಕಟ್ಟುವಲ್ಲಿ ಮಾಚಿದೇವರ ಕಾಯಕ ಅತಿ ಮಹತ್ವದ್ದಾಗಿದೆ. ದೇಶದ ವಿವಿಧ ಭಾಗಗಳಿಂದ ಕಲ್ಯಾಣಕ್ಕೆ ಬರುವವರನ್ನು ಪರಿಕ್ಷೀಸಿ ಮಡಿ ಹಾಸಿ ಸ್ವಾಗತಿಸುವ ಜವಾಬ್ದಾರಿಯುತ ಕೆಲಸ ನಿರ್ವಹಿಸುತ್ತಿದ್ದರು. ಮಾಚಿದೇವರ ಪರೀಕ್ಷೆಗೆ ಒಳಪಡದ ಹೊರತು ಕಲ್ಯಾಣಪುರ ಪ್ರವೇಶದ ಪ್ರಮಾಣ ಪತ್ರ ಹೊರಗಿನಿಂದ ಬರುವವರಿಗೆ ಸಿಗುತ್ತಿರಲಿಲ್ಲ ಇದು ಮಡಿವಾಳ ಮಾಚಿದೇವರ ಮಹಾ ಘನತೆಗೆ ಸಾಕ್ಷಿಯಾಗಿದೆ ಎಂದರು.

ಮಾಚಿದೇವರ ಅವರು ಸ್ವಾಮಿ ನಿಷ್ಠೆಗೆ ತನ್ನ ಮಗನ ಪ್ರಾಣವನ್ನೆ ತ್ಯಾಗ ಮಾಡಿದಂತಹ ಒಬ್ಬ ಶ್ರೇಷ್ಠ ವ್ಯಕ್ತಿಯಾಗಿದ್ದಾರೆ. 12ನೇ ಶತಮಾನದಲ್ಲಿ ಬಸವಣ್ಣನವರ ಜೊತೆ ಸೇರಿ ಅಸ್ಪೃಶ್ಯತೆ, ಸಾಮಾಜಿಕ ಅಸಮಾನತೆ ಹೋಗಲಾಡಿಸುವ ಸಲುವಾಗಿ ಸರಳ ವಚನಗಳನ್ನು ರಚಿಸಿ ಜನರನ್ನು ಎಚ್ಚರಿಸಿದರು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಚೂಡಾ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯಕುಮಾರ್, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್.ಶಶಿಧರ್, ಸಮಾಜದ ಮುಖಂಡರಾದ ದುಂಡುಮಹದೇವ, ಸಿದ್ದಶೆಟ್ಟಿ, ರಮೇಶ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಡಿವಾಳ ಜನಾಂಗದ ಮುಖಂಡರ ಆಕ್ರೋಶ



ಮಡಿವಾಳ ಸಮುದಾಯದ ಕೆಲವು ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಚಾಮರಾಜನಗರ: ನಗರದ ಜಿಲ್ಲಾಡಳಿತ ಭವನದಲ್ಲಿ ಸರಳವಾಗಿ ನಡೆದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮ ಮುಕ್ತಾಯವಾದ ಬಳಿಕ ಮಡಿವಾಳ ಸಮುದಾಯದ ಕೆಲವು ಮುಖಂಡರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿ ಉದಯಕುಮಾರ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯಕ್ರಮ ಮುಕ್ತಾಯವಾದ ಬಳಿಕ ಹೊರ ಬಂದ ಮುಖಂಡ ದುಂಡು ಮಾದಯ್ಯ ಮಾತನಾಡಿ, ಇಂದಿನ ಜಯಂತಿ ಕಾರ್ಯಕ್ರಮಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಬರುತ್ತಾರೆ ಎಂಬುದರ ಬಗ್ಗೆ ಸಮುದಾಯದವರಿಗೆ ಮುಂಚಿತವಾಗಿ ಯಾವುದೇ ಮಾಹಿತಿಯನ್ನು ಅಧಿಕಾರಿಗಳು ನೀಡಿಲ್ಲ. ಅವರು ಬರುತ್ತಾರೆ ಅಂತ ನಮಗೆ ಮೊದಲೇ ಗೊತ್ತಿದ್ದರೆ ನಾನು ಬರುತ್ತಿರಲಿಲ್ಲ. ಜೊತೆಗೆ ಜನಾಂಗದ ಯಾರೊಬ್ಬರನ್ನು ಕರೆತರುತ್ತಿರಲಿಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಾರ್ಯಕ್ರಮ ನಡೆಸುವ ಸಂಬಂಧ ಯಾವುದೇ ಪೂರ್ವಭಾವಿ ಸಭೆಯನ್ನು ನಡೆಸಿಲ್ಲ. ಅಲ್ಲದೇ ಜನಾಂಗದ ಜಿಲ್ಲೆ ಹಾಗೂ ತಾಲೂಕಿನ ಯಾವುದೇ ಮುಖಂಡರಿಗೂ ಆಹ್ವಾನ ಮಾಡಿಲ್ಲ. ಅಲ್ಲದೇ ನಮ್ಮ ವಿರುದ್ಧ ಶಾಸಕರಿಗೆ ಚಾಡಿ ಹೇಳಿದ್ದೀರ ಎಂದು ಆಕ್ರೋಶ ಹೊರ ಹಾಕಿದರು.

ರೈಲಿಗೆ ಸಿಲುಕಿ ವ್ಯಕ್ತಿ ಆತ್ಮಹತ್ಯೆ

ಚಾಮರಾಜನಗರ: ಚಲಿಸುವ ರೈಲಿಗೆ ಸಿಲುಕಿ ವ್ಯಕ್ತಿಯೋರ್ವ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶುಕ್ರವಾರ ರಾತ್ರಿ ನಗರದಲ್ಲಿ ನಡೆದಿದೆ. ನಗರದ ರೈಲ್ವೆ ನಿಲ್ದಾಣದ ಸಮೀಪದಲ್ಲಿಯೇ ಘಟನೆ ನಡೆದಿದ್ದು ಸುಮಾರು 60–65 ವಯಸ್ಸಿನ ಅಪರಿಚಿತ ವ್ಯಕ್ತಿಯೋರ್ವ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈತ ಶುಕ್ರವಾರ ರಾತ್ರಿ ಚಾ.ನಗರದಿಂದ ಮೈಸೂರಿಗೆ ತೆರಳುತ್ತಿದ್ದ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ವ್ಯಕ್ತಿಯ ವಿಳಾಸ ಪತ್ತೆಯಾಗಿಲ್ಲ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ರೈಲ್ವೆ ಪೊಲೀಸರು ಮೃತದೇಹವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಸಂಬಂಧ ರೈಲ್ವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗುಂಡ್ಲುಪೇಟೆ ಪುರಸಭೆಯ ಐವರು ಬಿಜೆಪಿ ಸದಸ್ಯರು ಅನರ್ಹ


ಪಕ್ಷಾಂತರ ನಿಷೇಧ ಕಾಯ್ದೆಯನ್ವಯ ಜಿಲ್ಲಾಧಿಕಾರಿ ಆದೇಶ



ಬಿ.ಎಸ್.ಕಿರಣ್‌ಗೌಡ



ಹೀನಾ ಕೌಸರ್



ರಮೇಶ್



ರಾಣಿ ಲಕ್ಷ್ಮೀದೇವಿ



ವೀಣಾ ಮಂಜುನಾಥ್

ಗುಂಡ್ಲುಪೇಟೆ, ಫೆ1– ಪಕ್ಷಾಂತರ ಮಾಡಿದ್ದ ಐವರು ಪುರಸಭಾ ಬಿಜೆಪಿ ಸದಸ್ಯರನ್ನು ಪಕ್ಷಾಂತರ ನಿಷೇಧ ಕಾಯ್ದೆಯನ್ವಯ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅನರ್ಹಗೊಳಿಸಿದ್ದಾರೆ. ಇಲ್ಲಿನ ಪುರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಚುನಾವಣೆಯಲ್ಲಿ ಬಿಜೆಪಿ ಸದಸ್ಯರಾದ ಬಿ.ಎಸ್.ಕಿರಣ್‌ಗೌಡ, ಹೀನಾ ಕೌಸರ್, ರಮೇಶ್, ರಾಣಿ ಲಕ್ಷ್ಮೀದೇವಿ, ವೀಣಾ ಮಂಜುನಾಥ್ ಬಿಜೆಪಿ ತೊರೆದು ಕಾಂಗ್ರೆಸ್ ಬಣದಲ್ಲಿ ಗುರುತಿಸಿಕೊಂಡಿದ್ದರು.

ಸೆ.4ರಂದು ನಡೆದ ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಬಿಜೆಪಿ ನೀಡಿದ್ದ ವಿಪ್ ಉಲ್ಲಂಘಿಸಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡು, ಕಿರಣ್ ಅಧ್ಯಕ್ಷರಾಗಿ ಹಾಗೂ ಹೀನಾ ಕೌಸರ್ ಉಪಾಧ್ಯಕ್ಷರಾಗಿ ಆಯ್ಕೆಯಾದರು. ಬಿಜೆಪಿಯ ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿಯಿಂದ ಸ್ಪರ್ಧಿಸಿದ್ದ ಕುಮಾರ್ ಅವರಿಗೆ ಮತ ನೀಡದೆ ಅವರ ಸೋಲಿಗೆ ಕಾರಣರಾಗಿದ್ದರು.

ಈ ಬಗ್ಗೆ ಪುರಸಭೆ ಸದಸ್ಯ ಹಾಗೂ ಮಾಜಿ ಅಧ್ಯಕ್ಷ ಪಿ.ಗಿರೀಶ್ ಜಿಲ್ಲಾಧಿಕಾರಿಗಳಿಗೆ ದೂರು ನೀಡಿ ಕಾನೂನುಕ್ರಮಕ್ಕೆ ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಿದ ಜಿಲ್ಲಾಧಿಕಾರಿಗಳು ಪಕ್ಷಾಂತರ ನಿಷೇಧ ಕಾಯ್ದೆಯಡಿಯಲ್ಲಿ ಐವರು ಸದಸ್ಯರನ್ನು ಅನರ್ಹಗೊಳಿಸಿ ಆದೇಶಿಸಿದ್ದಾರೆ. ಈ ಕುರಿತು 'ಮೈಸೂರುಮಿತ್ರ'ನೊಂದಿಗೆ ಮಾತನಾಡಿದ ದೂರುದಾರ ಪಿ.ಗಿರೀಶ್, ಇದು ಸತ್ಯಕ್ಕೆ ಸಂದ ಜಯ, ಜಿಲ್ಲಾಧಿಕಾರಿಗಳು ಈ ವಿಚಾರದಲ್ಲಿ ಮತದಾರರಿಗೆ ನ್ಯಾಯ ದೊರಕಿಸಿಕೊಟ್ಟಿದ್ದಾರೆ. ನಮ್ಮದೇ ಸರ್ಕಾರ, ನಮ್ಮದೇ ಕಾನೂನು ಎಂದು ಬೀಗುತ್ತಿದ್ದವರಿಗೆ ಸರಿಯಾದ ಪಾಠವನ್ನು ನ್ಯಾಯ ಕಲಿಸಿದೆ ಎಂದು ವಿವರಿಸಿದ್ದಾರೆ.

ಸಂಪುಟ ಸಭೆಯಂದು ಕರಾಳ ದಿನಾಚರಣೆಗೆ ನಿರ್ಧಾರ

ಚಾಮರಾಜನಗರ: ಸಚಿವ ಸಂಪುಟ ಸಭೆಯನ್ನು ಜಿಲ್ಲಾ ಕೇಂದ್ರದಲ್ಲಿ ನಡೆಸುವ ಬದಲು ಮಹದೇಶ್ವರಸ್ವಾಮಿಬೆಟ್ಟದಲ್ಲಿ ನಡೆಸುತ್ತಿರುವುದು ಖಂಡನೀಯವಾಗಿದೆ. ಹೀಗಾಗಿ ಸಚಿವ ಸಂಪುಟ ಸಭೆ ನಡೆಯುವ ದಿನ ರೈತ ಸಂಘದಿಂದ ಜಿಲ್ಲಾ ಕೇಂದ್ರದಲ್ಲಿ ಕಪ್ಪು ಪಟ್ಟಿಧರಿಸಿ ಕರಾಳ ದಿನ ಆಚರಣೆ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಉಪಾಧ್ಯಕ್ಷ ಡಾ.ಗುರುಪ್ರಸಾದ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಂಪುಟ ಸಭೆಯನ್ನು ನಡೆಸುವ ಸಂಬಂಧ ಜಿಲ್ಲಾಡಳಿತವಾಗಲಿ, ಕಾರ್ಯದರ್ಶಿಗಳಾಲಿ ರೈತರ ಸಭೆಯನ್ನು ಕರೆದು ಸಮಸ್ಯೆಗಳ ಪಟ್ಟಿ ಮಾಡಿ ಸರ್ಕಾರಕ್ಕೆ ಸಲ್ಲಿಸಬೇಕಿತ್ತು. ಆದರೆ, ಇದಾವುದನ್ನು ಮಾಡದೆ ಕಾಟಾಚಾರಕ್ಕೆ ಸಭೆ ನಡೆಸಲು ಮುಂದಾಗಿರುವುದು ಸರಿಯಲ್ಲ ಎಂದರು.

ಕಾಡುಪ್ರಾಣಿಗಳ ಹಾವಳಿಯಿಂದ ತತ್ತರಿಸಿರುವ ರೈತರಿಗೆ ಸೂಕ್ತ ನಷ್ಟ ಬರಿಸಿಕೊಡಲು ವಿಶೇಷ ಅನುದಾನ ನೀಡಬೇಕು. ಕಬಿನಿ ಎರಡನೇ ಹಂತವನ್ನು ಪೂರೈಸಬೇಕು. ರೈತರು ಬೆಳೆದ ತೇಗದ ಮರಗಳನ್ನು ಕಟಾವು ಮಾಡಿಸಿ ಮಾರಾಟ ಮಾಡಲು ಇರುವ ನಿರ್ಬಂಧ ತೆಗೆಯಬೇಕು. ತಾಲೂಕಿಗೊಂದು ಕೋಲ್ಡ್ ಸ್ಟೋರೇಜ್ ಸ್ಥಾಪಿಸಲು ಕ್ರಮವಹಿಸಬೇಕು ಎಂದು ಆಗ್ರಹಿಸಿದರು.

ಬದನಗುಪ್ಪೆ, ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪನೆಯಾಗಾಗಿ ರೈತರಿಂದ ವಶಪಡಿಸಿಕೊಂಡಿರುವ ಭೂಮಿಗೆ ಶೀಘ್ರ ಪರಿಹಾರ ನೀಡಬೇಕು. ರೈತರು ಬೆಳೆದ ಬೆಳೆಗಳ ಮಾರಾಟಕ್ಕೆ ಶಾಶ್ವತ ಖರೀದಿ ಕೇಂದ್ರ ಸ್ಥಾಪಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮಾಡ್ರಹಳ್ಳಿ ಮಹದೇವಪ್ಪ, ಚಿಕ್ಕಣ್ಣ ಹಿರೀಕಾಟಿ, ಲಿಂಗಸ್ವಾಮಿ, ಹೊಸೂರು ಮಹೇಶ್ ಇದ್ದರು.

ಕೇಂದ್ರ ಬಜೆಟ್; ಕೆಲವರ ಪಾಲಿಗೆ ಸಿಹಿ; ಮತ್ತೆ ಕೆಲವರಿಗೆ ಕಹಿ...



ಮೈಸೂರು, ಫೆ.1(ಬಿಎಲ್‌ಯು/ಪಿಎಂ)– ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶನಿವಾರ ಮಂಡಿಸಿದ ಬಜೆಟ್ ಬಗ್ಗೆ ಬಿಜೆಪಿ–ಜೆಡಿಎಸ್‌ನವರು ಮೆಚ್ಚುಗೆ ವ್ಯಕ್ತಪಡಿಸಿದ್ದರೆ, ಕಾಂಗ್ರೆಸಿಗರು ಅಸಮಾಧಾನ ಹೊರ ಹಾಕಿದ್ದಾರೆ. ಇನ್ನು ಸಾರ್ವಜನಿಕ ವಲಯದ ವಿವಿಧ ಕ್ಷೇತ್ರಗಳ ಜನರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

“ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇಂದು ಮಂಡಿಸಿ ರುವ ಬಜೆಟ್ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿ ಹಾಗೂ ರೈತರ ಆಲೋಚನೆಗಳಿಗೆ ಕೈಗನ್ನಡಿಯಾಗಿದೆ. ಸಾವಯವ ಕೃಷಿಗೆ ಉತ್ತೇಜನ, ಕೃಷಿಯಲ್ಲಿ ಸುಸ್ಥಿರತೆಗೆ ಒತ್ತು, ಕೃಷಿ ವೆಚ್ಚ ತಗ್ಗಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಅಗತ್ಯ ಉಪಕ್ರಮ ಸ್ವಾಗತಾರ್ಹವಾಗಿದೆ. ರೈತರು ಸಶಕ್ತಗೊಂಡು ಉತ್ತಮ ಆದಾಯ ಗಳಿಸುವ, ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವ ಮತ್ತು ಭವಿಷ್ಯದ ಸವಾಲುಗಳಿಗೆ ಭಾರತೀಯ ಕೃಷಿಯನ್ನು ಸಜ್ಜುಗೊಳಿಸುವ ಆಯ ವ್ಯಯವನ್ನು ನಿರ್ಮಲಾ ಸೀತಾರಾಮನ್ ಮಂಡಿಸಿದ್ದಾರೆ. ಕಿಸಾನ್ ಕ್ರೆಡಿಟ್ ಕಾರ್ಡ್ ಮಿತಿ ಹೆಚ್ಚಳ, ಹೈನುಗಾರರು, ಮೀನುಗಾರರಿಗೆ ಸುಲಭ ಸಾಲ, ಕೃಷಿ ತಂತ್ರಜ್ಞಾನ ಹಾಗೂ ಕೃಷಿ ಆಧಾರಿತ ಸ್ಟಾರ್ಟ್ ಅಪ್‌ಗಳಿಗೆ ಉತ್ತೇಜನಕ್ಕೆ ಒಂದು ಲಕ್ಷ ಮೀಸಲು, ಕೃತಕ ಬುದ್ಧಿಮತ್ತೆ ಬಳಕೆ ಹಾಗೂ ಅತ್ಯಾಧುನಿಕ ನೀರಾವರಿ ಸೌಲಭ್ಯಕ್ಕೆ ಆದ್ಯತೆ ನೀಡಲಾಗಿದೆ.



– ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರು

“ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಇಂದು ಮಂಡಿಸಿರುವ 2025–26 ನೇ ಬಜೆಟ್ ಕೃಷಿಕರ ಪಾಲಿಗೆ ನಿರಾಶಾದಾಯಕವಾಗಿದೆ. ವೈಜ್ಞಾನಿಕ ಕೃಷಿ ಸಂಶೋಧನೆಗೆ ಸಾಕಷ್ಟು ಹಣಕಾಸು ಒದಗಿಸಿಲ್ಲ. ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಹಣಕಾಸು ನೆರವು ನೀಡಿಲ್ಲ. ಆಹಾರ, ತರಕಾರಿ ಮತ್ತು ಹಣ್ಣಿನ ಬೆಳೆಗಳಿಗೆ ಮಂಡಳಿ ರಚನೆ ಮಾಡಬೇಕೆಂಬ ಬೇಡಿಕೆ ಈಡೇರಿಕೆ ನಿರೀಕ್ಷೆಯಾಗಿಯೇ ಉಳಿದಿದೆ. ರಸಗೊಬ್ಬರಗಳ ಬೆಲೆ ಇಳಿಕೆಯಾಗಿಲ್ಲ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅನುದಾನ ಕಡಿತ ಮಾಡಲಾಗಿದ್ದು, ಇದರಿಂದ ರಾಜ್ಯಗಳಿಗೆ ಅನ್ಯಾಯವಾಗಿದೆ. ಅಲ್ಲದೆ ಕೃಷಿ ವಲಯಕ್ಕೆ ನಬಾರ್ಡ್‌ನಿಂದ ನೀಡುವ ಅನುದಾನ ಕೂಡ ಕಡಿಮೆಯಾಗಿದೆ. ಇದರಲ್ಲಿ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಸಿರಿ ಧಾನ್ಯಕ್ಕೆ ಪ್ರೋತ್ಸಾಹ ನೀಡಬೇಕೆಂಬ ರಾಜ್ಯ ಸರ್ಕಾರದ ಮನವಿ ಪುರಸ್ಕರಿಸಿಲ್ಲ.ಆಹಾರ ಸಂಸ್ಕರಣೆ ಹಾಗೂ ರಫ್ತು ಉತ್ತೇಜನಕ್ಕೆ ಹೊಸ ಯೋಜನೆ ಇಲ್ಲ. ಒಟ್ಟಾರೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ಕೃಷಿ ಕ್ಷೇತ್ರದ ಪಾಲಿಗೆ ನಿರಾಶದಾಯಕವಾಗಿದೆ.



– ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

“ಕೇಂದ್ರ ಬಜೆಟ್ ಸರ್ವಸ್ಪರ್ಶಿಯಾಗಿದೆ. ರೈತರು, ಮಧ್ಯಮ ವರ್ಗ, ಮಹಿಳೆಯರು, ಯುವ ಸಮೂಹ, ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಪೂರಕವಾಗಿದೆ. ಕೇಂದ್ರ ಸರ್ಕಾರ ವಿಕಸಿತ ಭಾರತದ ಪರಿಕಲ್ಪನೆಯಡಿ ಸಾಗಿದ್ದು, ಸಮತೋಲಿತ ಬಜೆಟ್ ಇದಾಗಿದೆ. ವೇತನದಾರರಿಗೆ ಅನುಕೂಲ ಕಲ್ಪಿಸಲು ಆದಾಯ ತೆರಿಗೆ ಮಿತಿ ವಿಸ್ತರಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ಭಾರತವನ್ನು ಪ್ರಮುಖ ಆರ್ಥಿಕ ರಾಷ್ಟ್ರವಾಗಿಸಲು ಬಜೆಟ್ ಪೂರಕವಾಗಿದೆ.



ಕಿಸಾನ್ ಕ್ರೆಡಿಟ್ ಕಾರ್ಡ್ ಮಿತಿಯನ್ನು 3ರಿಂದ 5 ಲಕ್ಷ ರೂ.ಗೆ ಹೆಚ್ಚಿಸಿರುವುದು ರೈತರಿಗೆ ಅನುಕೂಲವಾಗಲಿದೆ.

–ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದರು, ಮೈಸೂರು–ಕೊಡಗು.

“ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಬಜೆಟ್ ಅತ್ಯುತ್ತಮವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ದೂರದೃಷ್ಟಿತ್ವ ಹಾಗೂ ಬಡ ಹಾಗೂ ಮಧ್ಯಮ ವರ್ಗದ ಮೇಲಿನ ಕಾಳಜಿ ಈ ಬಜೆಟ್‌ನಲ್ಲಿ ವ್ಯಕ್ತವಾಗಿದೆ. ತೆರಿಗೆ ವಿನಾಯ್ತಿಯಿಂದ ಬಹುತೇಕ ಜನರಿಗೆ ಅನುಕೂಲವಾಗಲಿದೆ. ಉತ್ಪಾದನಾ ವಲಯ, ಮೂಲ ಸೌಕರ್ಯ ಮತ್ತು ಉದ್ಯೋಗ ಸೃಷ್ಟಿ ನಿಟ್ಟಿನಲ್ಲೂ ಗಮನ ಹರಿಸಲಾಗಿದೆ. ಕೃಷಿ ಕ್ಷೇತ್ರಕ್ಕೂ ಆದ್ಯತೆ ನೀಡಲಾಗಿದೆ. ಒಟ್ಟಾರೆ ಈ ಬಾರಿಯ ಕೇಂದ್ರದ ಬಜೆಟ್ ದೇಶದ ಸರ್ವಾಂಗೀಣ ಪ್ರಗತಿಗೆ ಪೂರಕವಾಗಿದೆ.



–ಜಿ.ಡಿ.ಹರೀಶ್‌ಗೌಡ, ಶಾಸಕರು, ಹುಣಸೂರು.

“ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿಲ್ಲ. ಮುಂಗಡ ಪತ್ರದಲ್ಲಿ ಘೋಷಣೆ ಮಾಡಿರುವ 50 ಪ್ರವಾಸಿ ತಾಣಗಳ ಅಭಿವೃದ್ಧಿ ಸಂಬಂಧ ಕರ್ನಾಟಕದ 10 ಸ್ಥಳಗಳನ್ನು ಆಯ್ಕೆ ಮಾಡಿದರೆ ಅನುಕೂಲವಾಗಲಿದೆ. ಪ್ರವಾಸಿ ತಾಣಗಳಲ್ಲಿ ಹೋಂ ಸ್ಟೇ, ಹೋಟಲು ಉದ್ಯಮ ಸ್ಥಾಪಿಸುವವರಿಗೆ ಸಾಲ ಸೌಲಭ್ಯ ಮತ್ತು ಸಾಲ ಮರುಪಾವತಿಯಲ್ಲಿ ರಿಯಾಯಿತಿ ನೀಡಿರುವುದು ಸ್ವಾಗತಾರ್ಹ. ಆದಾಯ ತೆರಿಗೆ ಮಿತಿ 12 ಲಕ್ಷ ರೂ.ವರೆಗೆ ವಿನಾಯಿತಿ ನೀಡಿರುವುದು ಮಧ್ಯಮ ವರ್ಗಕ್ಕೆ ಅನುಕೂಲವಾಗಲಿದೆ. ಜಿಎಸ್‌ಟಿ ಪಾವತಿಯಲ್ಲಿ ನಮ್ಮ ರಾಜ್ಯ 2ನೇ ಸ್ಥಾನದಲ್ಲಿದೆ. ಆದರೆ ಅನುದಾನ ಹಂಚಿಕೆಯಲ್ಲಿ ನಮ್ಮ ರಾಜ್ಯಕ್ಕೆ ಹೆಚ್ಚು ಅನ್ಯಾಯವಾಗುತ್ತಿದೆ.



–ಸಿ.ನಾರಾಯಣಗೌಡ, ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ.

“ದೇಶದ ಭದ್ರತೆ ದೃಷ್ಟಿಯಿಂದ ರಕ್ಷಣಾ ವಲಯಕ್ಕೆ 4,01,732 ಲಕ್ಷ ನೀಡಿದ್ದು, ಒಟ್ಟಾರೆ ಬಜೆಟ್ ಗಾತ್ರದ ಶೇಕಡ 8 ರಷ್ಟು ಹಣ ನೀಡಲಾಗಿದೆ. ಹಾಗೆಯೇ ಕೃಷಿ ಕ್ಷೇತ್ರ ಅಭಿವೃದ್ಧಿಗೆ ಶೇಕಡ 6 ರಷ್ಟು ಪಾಲು ನೀಡಲಾಗಿದೆ. ಇದಲ್ಲದೆ ಎಂಎಸ್‌ಎಂಇ ಹಾಗೂ ಸಣ್ಣ ಉದ್ದಿಮೆದಾರರಿಗೆ, ವಿದ್ಯಾರ್ಥಿಗಳಿಗೆ, ವಿಜ್ಞಾನಿಗಳಿಗೆ, ತಾಂತ್ರಿಕ ಶಿಕ್ಷಣಕ್ಕೆ, ಗೃಹ ಇಲಾಖೆಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಅಭಿವೃದ್ಧಿಗೆ ಪೂರಕವಾದ ಬಜೆಟ್ ಅನ್ನು ನಿರ್ಮಲಾ ಸೀತಾರಾಮನ್ ಮಂಡಿಸಿದ್ದಾರೆ.



– ಎನ್.ಆರ್.ರವಿಚಂದ್ರೇಗೌಡ, ರಾಜ್ಯ ವಕ್ತಾರ, ಜೆಡಿಎಸ್

“ಕರ್ನಾಟಕ ರಾಜ್ಯವನ್ನು ಕಡೆಗಣಿಸಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಭಾರತ ಸಂವಿಧಾನದ ಮೂಲ ಸೌರ್ವಭೌಮತ್ವಕ್ಕೆ ಬಜೆಟ್ ಮುಖೇನ ಬೆಂಕಿ ಹಚ್ಚಿ ಹಂತ ಹಂತವಾಗಿ ಒಕ್ಕೂಟ ವ್ಯವಸ್ಥೆಯನ್ನು ಬಲಿ ತೆಗೆದುಕೊಳ್ಳುವ ಭವಿಷ್ಯದ ನೀಲಿ ನಕ್ಷೆ ರೂಪಿಸಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿರುವ ಕಾರಣ ಬಜೆಟ್‌ನಲ್ಲಿ ನಮ್ಮ ರಾಜ್ಯವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. **– ಡಾ.ಬಿ.ಜೆ.ವಿಜಯ ಕುಮಾರ್, ಜಿಲ್ಲಾಧ್ಯಕ್ಷ, ಕಾಂಗ್ರೆಸ್**



“ಕೇಂದ್ರ ಬಜೆಟ್ ನಿರಾಶದಾಯಕ. ಕೃಷಿ ಕ್ಷೇತ್ರಕ್ಕೆ ಮೊದಲನೇ ಆದ್ಯತೆ ಎಂದು ಹೇಳುತ್ತಲೇ ಕೃಷಿಯನ್ನು ಮುಗಿಸಲು ಹೊರಟಿದೆ. 384 ದಿನಗಳ ಕಾಲ ನಡೆದ ಐತಿಹಾಸಿಕ ರೈತ ಚಳುವಳಿ ವೇಳೆ ಕೇಂದ್ರ ಸರ್ಕಾರ ಲಿಖಿತವಾಗಿ ನೀಡಿದ್ದ ಭರವಸೆ ಬಗ್ಗೆ ತುಟಿ ಬಿಚ್ಚಿಲ್ಲ. ರೈತರ ಸಾಲ ಮನ್ನಾ ಬಗ್ಗೆ ಏನೂ ಹೇಳಿಲ್ಲ. ಮೈಕ್ರೋ ಫೈನಾನ್ಸ್ ಹಾವಳಿ–ಕಿರುಕುಳ ತಡೆಗೆ ಯಾವುದೇ ಕಾನೂನು ಪ್ರಸ್ತಾವನೆ ಇಲ್ಲ. ಕಳೆದ ಬಜೆಟ್‌ನಲ್ಲಿ ಭದ್ರ ಮೇಲ್ದಂಡೆ ಯೋಜನೆಗೆ 5300 ಕೋಟಿ ಘೋಷಿಸಿ ಈವರೆಗೆ ನಯಾ ಪೈಸೆ ನೀಡಿಲ್ಲ.



–ಬಡಗಲಪುರ ನಾಗೇಂದ್ರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ.

“ನಮ್ಮ ಮಣ್ಣಿನ ದೇಸಿ ಬೀಜಗಳನ್ನು ಕೊಂದು ಪಾಶ್ಚಿಮಾತ್ಯ ದೇಶದ ಕುಲಾಂತರಿ ಬೀಜಗಳನ್ನು ಸರ್ಕಾರಿ ಪೊಟ್ಟಣದಲ್ಲಿ ಹಾಕಿ ರೈತರಿಗೆ ಹಂಚುವ ಸ್ಕೀಮ್‌ನ ಹೆಸರೇ ಧನ್ ಧಾನ್ಯ ಕೃಷಿ ಯೋಜನೆ. ದೇಶದ ಬಹುಸಂಖ್ಯಾತರಾದ ಕೃಷಿಕರು ಮತ್ತು ಕೃಷಿ ಅವಲಂಬಿತ ಜನರಿಗೆ ಸತತವಾಗಿ 12 ವರ್ಷಗಳಿಂದ ಈ ಸರ್ಕಾರದಿಂದ ಮೋಸವೇ ಆಗಿದೆ. ಕರ್ನಾಟಕದ ನೀರಾವರಿ ವಿಚಾರದಲ್ಲಿ ಮತ್ತೆ ಮಲತಾಯಿ ಧೋರಣೆ ತೋರಲಾಗಿದೆ.

–ಮಂಜು ಕಿರಣ್, ರಾಜ್ಯ ಕಾರ್ಯದರ್ಶಿ, ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ.

“ಬಜೆಟ್ ಉತ್ತಮ. ಆರ್ಥಿಕ ಬೆಳವಣಿಗೆಯ ದರ ಹೆಚ್ಚಿಸುವ ಉದ್ದೇಶ ಹೊಂದಲಾಗಿದೆ. ಅಲ್ಲದೆ, ಮಧ್ಯಮ ವರ್ಗದ ಅನುಕೂಲಕ್ಕಾಗಿ ಖಾಸಗಿ ಹೂಡಿಕೆ ಹೆಚ್ಚಿಸುವ ಅಂಶವಿದೆ. ರೈತರು, ಬಡವರು, ಮಹಿಳೆಯರು, ಯುವ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಬಜೆಟ್ ಇದೆ. ಎಂಎಸ್‌ಎಂಇಗಳಿಗೆ ನೀಡಿರುವ ಒಟ್ಟು ಹಣದಲ್ಲಿ 7.4 ಕೋಟಿ ರೂ. ಅನ್ನು ಮಹಿಳೆಯರನ್ನು ಉದ್ಯಮ ಶೀಲರನ್ನಾಗಿ ಪ್ರೋತ್ಸಾಹಿಸಲು ಮೀಸಲಿಡಲಾಗಿದೆ.



–ಡಾ.ಆರ್.ಹೆಚ್.ಪವಿತ್ರಾ, ಅರ್ಥಶಾಸ್ತ್ರ ಪ್ರಾಧ್ಯಾಪಕರು, ಮುಕ್ತ ವಿವಿ.

“ಕೇಂದ್ರ ಬಜೆಟ್ ಎಂದಿನಂತೆ ಕರ್ನಾಟಕಕ್ಕೆ ಚೊಂಬು ಕೊಟ್ಟು, ಮಧ್ಯಮ ವರ್ಗದ ಮೂಗಿಗೆ ತುಪ್ಪ ಸವರಿ, ರೈತರು, ಕೃಷಿ ಕ್ಷೇತ್ರಕ್ಕೆ ಬರೆ ಹಾಕಿದ್ದು, ದಲಿತ–ಅಲ್ಪ ಸಂಖ್ಯಾತರಿಗೆ ಬಹಿರಂಗ ದ್ರೋಹ ಮಾಡಿದೆ. ಕಳೆದ 10 ವರ್ಷಗಳ ಪ್ರತಿ ಬಜೆಟ್‌ನಂತೆ ಇದೂ ಜನ ದ್ರೋಹಿಯಾಗಿದೆ. ತಮ್ಮ ರಾಜಕೀಯ ಲಾಭಕ್ಕೆ ಹೆಚ್.ಡಿ.ಕುಮಾರಸ್ವಾಮಿಯವರು ಪ್ರತಿನಿಧಿಸುವ ಮಂಡ್ಯ ಕ್ಷೇತ್ರಕ್ಕೆ ಒಂದಷ್ಟು ಹಣ ನೀಡಿರುವುದು ಬಿಟ್ಟರೆ ಕರ್ನಾಟಕದ ಯಾವುದೇ ನೀರಾವರಿ, ರೈಲ್ವೆ, ಕೈಗಾರಿಕೆಗಳಿಗೆ ವಿಶೇಷ ಅನುದಾನ ಒದಗಿಸಿಲ್ಲ. ನರೇಗಾ ಯೋಜನೆಗೆ ಕಳೆದ ಬಜೆಟ್‌ಗಿಂತ 3,154 ಕೋಟಿ ರೂ. ಕಡಿಮೆ ಹಣ ನೀಡಲಾಗಿದೆ. ಎಸ್‌ಟಿ ಸಮುದಾಯಕ್ಕೆ ನೀಡುವ ನ್ಯಾಷನಲ್ ಫೆಲೋಷಿಪ್ ಅನ್ನು 165 ಕೋಟಿಯಿಂದ ಕೇವಲ 2 ಲಕ್ಷಕ್ಕೆ ಇಳಿಸಲಾಗಿದೆ. ಅಲ್ಪಸಂಖ್ಯಾತರ ವಿದ್ಯಾರ್ಥಿವೇತನವನ್ನು ಸುಮಾರು ಸಾವಿರ ಕೋಟಿಯಿಂದ ಕೇವಲ 197.50 ಕೋಟಿ ರೂ.ಗೆ ಇಳಿಸಲಾಗಿದೆ. ಇದು ದೊಡ್ಡ ದ್ರೋಹ. **–ಅಬ್ದುಲ್ ಮಜೀದ್, ರಾಜ್ಯಾಧ್ಯಕ್ಷರು, ಎಸ್‌ಡಿಪಿಐ.**



IN THE COURT OF THE I ADDITIONAL SENIOR CIVIL JUDGE
(Sr. Dn.) AT MYSURU
O.S. No.1336/2022

PLAINTIFFS: Balakrishna and others
Vs
DEFENDANTS: 8. Vagdevi Aged about 64 years W/o M R Vijayashekar Residing at Door No. 59, 1st Floor, 1st Main, Jayalakshmipuram, V. V. Mohalla, Mysuru
9. M.C. Ambujakshi Aged about 60 years W/o Veerabhadrappa Residing at Door No. 314, Dewans Road, Chamaraja Mohalla, Mysuru

NOTICE

Take notice of the fact that the plaintiffs have filed the above case against the defendants seeking the relief of partition and separate possession and other consequential reliefs of plaint schedule properties. The above referred defendant No. 8 and 9 are hereby called upon to appear before the Hon'ble Court on 19-03-2025 at 11 A.M either in person or through an Advocate duly instructed failing which, the matter would be adjudicated by placing the defendant No. 8 and 9 exparte.
Given under my hand and seal of the Court on this day 1/2/2025

BY ORDER OF THE COURT
Sd/- SHERASTEDAR
SENIOR CIVIL JUDGE AND
CJM AT MYSURU

Advocate for the Plaintiffs V. **SHARADA,** Advocate, No.1432/A, II Floor, Sheshadri Iyer Road, Devaraja Mohalla, Mysore - 1.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು–06

ಸಂ:ಕರಾಮುವಿ/ಯುಇಡಿ/58/ಟೆಂಡರ್/2024–25 ದಿನಾಂಕ: 30.01.2025

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಕೆ.ಪಿ.ಪಿ.ಪಿ)

ಕಾರ್ಯಪಾಲಕ ಅಭಿಯಂತರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು ಇವರು ಈ ಕೆಳಗೆ ನಮೂದಿಸಿರುವ ಕೆಲಸಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಕ್ರಂ.ಸಂ: 01ರ ಕೆಲಸಕ್ಕೆ ನೋಂದಾಯಿತ ಏಜೆನ್ಸಿಯವರಿಂದ ಮತ್ತು ಕ್ರಂ.ಸಂ: 02ರ ಕೆಲಸಕ್ಕೆ ನೋಂದಾಯಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಟೆಂಡರ್‌ದಾರರು https://kppp.karnataka.gov.in ಈ ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಕ್ರ. ಸಂ.	ಕೆಲಸದ ಹೆಸರು	ಅಂದಾಜು ವೆಚ್ಚ (ಲಕ್ಷಗಳಲ್ಲಿ)	ಇ.ಎಂ.ಡಿ. (ರೂ.ಗಳಲ್ಲಿ)	ಗುತ್ತಿಗೆದಾರರ ದರ್ಜೆ
01	Providing and Installation of 15KLD sewage treatment plant (STP) at KSOU Mangalore Regional center	19.30 ಲಕ್ಷಗಳು	ರೂ. 48,250.00	Registered Firm
02	Supplying And Installation of Fire Hydrant System and Fire Extinguishers to the Secience Block at Ksou Campus, Mysuru	23.95 ಲಕ್ಷಗಳು	ರೂ. 59,875.00	Class-1 Electrical & PWD License

ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿ: 10.02.2025ರ 17.00 ಗಂಟೆ ತನಕ. ಆರ್ಥಿಕ ಟೆಂಡರ್‌ಗಳನ್ನು ತೆರೆಯುವ ದಿ: 12.02.2025 ರಂದು 11.00 ಗಂಟೆಗೆ. ಮೇಲ್ಕಂಡ ಟೆಂಡರ್‌ಗಳಿಗೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು, ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರ

DIPR/DDMYS/1216/KSMCA/838/2024-25

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ನಮ್ಮ ಕಕ್ಷಿದಾರರಾದ ಬೆಂಗಳೂರು ಸಿಟಿ, ಬೆಂಗಳೂರು ದಕ್ಷಿಣ, ಕೋಣನಕುಂಟೆ ಐ ಟಿ ಸಿ ಸುಪ್ರಜ ನಗರ, 3ನೇಕ್ರಾಸ್, ನಂ.1 ಮಂಜುನಾಥ ನಿಲಯದಲ್ಲಿ ವಾಸವಾಗಿರುವ ಲೇಟ್ ಗೋಪಾಲೇ ಗೌಡರವರ ಮಗಳು ಹಾಗೂ ಎಂ ಇ ರಮೇಶ್ ಹೆಂಡತಿ ಹೆಚ್ ಜಿ ರಾಧರವರ ಇರಾದೆಯ ಮೇರೆಗೆ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ ಮೇಲ್ಕಂಡ ನಮ್ಮ ಕಕ್ಷಿದಾರರು ಶಿವಕುಮಾರ್, ರಾಮೇಗೌಡ ಹಾಗೂ ಇತರರ ವಿರುದ್ಧ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೋಕು, ಬೆಳಗೊಳ ಹೋಬಳಿ, ಅಪ್ಪೇರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 14 ರ ಒಟ್ಟು ಖುಷ್ಕಿ ವಿಸ್ತೀರ್ಣ 02 ಎಕರೆ 10 ಗುಂಟೆ, ಬೀಚನಕುಪ್ಪೆ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 71 ರ ಒಟ್ಟು ಖುಷ್ಕಿ ವಿಸ್ತೀರ್ಣ 08 ಎಕರೆ 05 ಗುಂಟೆ, ಹೊಂಗಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 107/1 ರ ಒಟ್ಟು ತರಿ ವಿಸ್ತೀರ್ಣ 24 ಗುಂಟೆ, ಹೊಂಗಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 56/3 ರ ಒಟ್ಟು ತರಿ ವಿಸ್ತೀರ್ಣ 11 ಗುಂಟೆ, ಹಾಗೂ ಹುಲಿಕೆರೆ ಗ್ರಾಮ ಪಂಚಾಯಿತಿಗೆ ಒಳಪಟ್ಟ ಹೊಸ ಉಂಡವಾಡಿ ಗ್ರಾಮಕ್ಕೆ ಸೇರಿದ ಮನೆಗೆ ಸಂಬಂಧಿಸಿದಂತೆ ಶ್ರೀರಂಗಪಟ್ಟಣದ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 27/2025 ರಂತೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಡಿಕ್ರಿ ಕೋರಿ ದಾವೆ ಹೂಡಿದ್ದು ಸದರಿ ದಾವೆಯಲ್ಲಿ ಮೇಲ್ಕಂಡ ಸ್ವತ್ತುಗಳನ್ನ ಬೇರೆಯವರಿಗೆ ಪರಭಾರೆ ಮಾಡದಂತೆ ತಾತ್ಕಾಲಿಕ ಪ್ರತಿಬಂಧಕಾಜ್ಞೆಯನ್ನ ದಿನಾಂಕ:–25/01/2025 ರಂದು ಮಾನ್ಯ ನ್ಯಾಯಾಲಯವು ಮಂಜೂರು ಮಾಡಿರುತ್ತದೆ. ಆದ್ದರಿಂದ ಈ ಮೂಲಕ ಈ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾರೂ ಕ್ರಯ ಹಾಗೂ ಇತ್ಯಾದಿ ವ್ಯವಹಾರಣೆ ನಡೆಸಬಾರದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ, ಒಂದು ವೇಳೆ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕ್ರಯ ಹಾಗೂ ಇತರೆ ವ್ಯವಹಾರಣೆ ನಡೆಸಿದರೆ ಆಗ ಸಂಭವಿಸುವ ಅನಾಹುತಗಳಿಗೆ ನೀವೇ ಜವಾಬ್ದಾರರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ವಾದಿ ಪರ ವಕೀಲರು
ಬಿ ಪರಶಿವಮೂರ್ತಿ BL/LLB
ವಕೀಲರು ಮತ್ತು ನೋಟರಿ
ನಂ101, 2ನೇ ಕ್ರಾಸ್, ಸಿದ್ಧಾರ್ಥನಗರ, ಮಳವಳ್ಳಿ ಟೌನ್, ಮಂಡ್ಯ ಜಿಲ್ಲೆ
ಮೊ: 9986150166

ದಿನಾಂಕ: 01/01/2025
ಸ್ಥಳ: ಶ್ರೀರಂಗಪಟ್ಟಣ

(ಕರ್ನಾಟಕ ಸರ್ಕಾರ)
ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ,
(ವಿಭಾಗೀಯ ಮಟ್ಟದ 150 ಹಾಸಿಗೆಗಳ ಆಸ್ಪತ್ರೆ)
email:crawfordhospital@gmail.com phone:08173-243098
ಸಂ.ಕ್ರಾ.ಸಾ.ಆ.ಸ/Ab-Ark/Drugs/06/2024–25
ದಿನಾಂಕ: 30/01/2025

ಇ–ಪ್ರಕ್ಯೂರ್‌ಮೆಂಟ್ ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಔಷಧಿಗಳ ಸರಬರಾಜಿಗಾಗಿ ಅರ್ಹ ಟೆಂಡರ್‌ದಾರರಿಂದ/ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999–2000 ಮೇರೆಗೆ ದ್ವಿಲಕೋಟೆ ಪದ್ಧತಿಯನ್ವಯ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರಿನ ವಾರ್ಷಿಕ ಅಂದಾಜು ಮೊತ್ತ 15,00,000/– ಆಸಕ್ತ ಸರಬರಾಜುದಾರರು ವೆಬ್‌ಸೈಟ್ www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವ ಮೂಲಕ ಇ– ಪ್ರಕ್ಯೂರ್‌ಮೆಂಟ್ ನಲ್ಲಿ ಭಾಗವಹಿಸಬಹುದು. ರೂ. 37500/–ಗಳ ಇ.ಎಂ.ಡಿ ಯನ್ನು ಇ– ಪಾವತಿ ಮೂಲಕ ಸಕಾಲದಲ್ಲಿ ಭರ್ತಿಮಾಡಿದ ಟೆಂಡರ್‌ಗಳನ್ನು ದಿ॥ 8/02/2025 ರ ಸಂಜೆ 4.30 ಗಂಟೆಯೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಅಥವಾ ವೆಬ್‌ಸೈಟ್‌ನಲ್ಲಿ ನೋಡಬಹುದು.

ಸಹಿ/–ಆಡಳಿತ ವೈದ್ಯಾಧಿಕಾರಿಗಳು, ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ,

ವಾಸಾಸಂಇ/ಹಿಸನಿ/ಹಾಸನ/900/ಕೆಎಸ್‌ಎಂಸಿಎ/2024–25

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹುಣಸೂರು ತಾಲ್ಲೂಕು

ಚುನಾವಣಾ ವೇಳಾಪಟ್ಟಿ ಪ್ರಕಟಣೆ

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹುಣಸೂರು ತಾಲ್ಲೂಕು. ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ಆದೇಶ ಸಂಖ್ಯೆ : ಡಿಆರ್‌ಎಂ / ಸಿ-9 /ಇಎಲ್‌ಎನ್/ ಸಿಆರ್-253/2024-25 ದಿ : 30-12-2024 ರನ್ವಯ ರಿಟರ್ನಿಂಗ್ ಆಫೀಸರ್ ಆಗಿ ನನ್ನನ್ನು ಆಡಳಿತ ಮಂಡಳಿ ಚುನಾವಣೆ ಜರುಗಿಸಲು ನೇಮಕಾತಿಗೊಳಿಸಿ ಆದೇಶಿಸಿದ್ದು, ಸದರಿ ಆದೇಶದನ್ವಯ ಈ ಸಂಘದ ಉಪನಿಯಮ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 1960ರ ಅಂಶಗಳನ್ವಯ ದಿನಾಂಕ 25-1-2025 ರಂದು ಆಡಳಿತ ಮಂಡಳಿಯ ನಿರ್ದೇಶಕರುಗಳ ಚುನಾವಣೆ ನಡೆಸಲು ವೇಳಾಪಟ್ಟಿ ಈಗಾಗಲೇ ಪ್ರಕಟಿಸಲಾಗಿತ್ತು ಹಾಗೂ ಅರ್ಹ ಸದಸ್ಯರುಗಳಿಗೆ ಈ ವೇಳಾಪಟ್ಟಿಯನ್ನು ರವಾನಿಸಲಾಗಿತ್ತು. ಸಂಘದ ಚುನಾವಣಾ ಪ್ರಕ್ರಿಯೆಯನ್ನು ನಡೆಸಲು ಸೂಕ್ತ ಪೊಲೀಸ್ ಬಂದೋಬಸ್ತ್ ಇಲ್ಲದ ಕಾರಣ ಆಯುಕ್ತರು, ಚುನಾವಣಾ ಪ್ರಾಧಿಕಾರ ಬೆಂಗಳೂರು ರವರ ಅನುಮತಿಯೊಂದಿಗೆ ಚುನಾವಣಾ ಪ್ರಕ್ರಿಯೆಯನ್ನು ಮುಂದೂಡಲಾಗಿತ್ತು. ಮಾನ್ಯ ಗೌರವ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ : 1575/2025 ಇದರ ಆದೇಶದ ರೀತ್ಯಾ ದಿನಾಂಕ 18-2-2025 ರಂದು ಮತದಾನ ನಡೆಸಲು ದಿನಾಂಕ ನಿಗದಿಪಡಿಸಿ ಹಾಗೂ ಚುನಾವಣೆ ಪ್ರಕ್ರಿಯೆಯು ಎಲ್ಲಿಂದ ಮುಂದೂಡಲ್ಪಟ್ಟಿರುತ್ತದೆಯೋ ಅಲ್ಲಿಂದ ಪುನಃ ಚುನಾವಣಾ ಪ್ರಕ್ರಿಯನ್ನು ಪ್ರಾರಂಭಿಸುವಂತೆ ಆದೇಶಿಸಿರುವ ಹಿನ್ನೆಲೆಯಲ್ಲಿ ದಿನಾಂಕ 18-2-2025 ರಂದು ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ ಶ್ರೀಮಾನ್ ಪರಸಯ್ಯನವರ ಕಲ್ಯಾಣ ಮಂಟಪ ಟ್ರಸ್ಟ್ ರಿ., ಜೆ.ಎಲ್.ಬಿ. ರಸ್ತೆ, ಹುಣಸೂರು ಇಲ್ಲಿ ಸಾಮಾನ್ಯ, ಮಹಿಳಾ, ಹಿಂದುಳಿದ ವರ್ಗ ಪ್ರವರ್ಗ-ಎ, ಹಿಂದುಳಿದ ವರ್ಗ ಪ್ರವರ್ಗ-ಬಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಒಳಗೊಂಡಂತೆ ಆಡಳಿತ ಮಂಡಳಿಯ ನಿರ್ದೇಶಕರುಗಳ ಮುಂದುವರೆದ ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಿರುತ್ತೇನೆ.

ಕ್ರ.ಸಂ. ವಿವರಗಳು	ದಿನಾಂಕ ವಾರ ಸ್ಥಳ ವೇಳೆ ಮತ್ತು ವಿವರ
1. ನಿಯಮ 14ಎರಂತೆ ನಾಮಿನೇಷನ್ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ ಮತ್ತು ಕೊನೆಯ ದಿನಾಂಕ	ದಿ :09-2-2025ನೇ ಭಾನುವಾರ ದಿಂದ ದಿ:10-2-2025ನೇ ಸೋಮವಾರ ಬೆಳಿಗ್ಗೆ11-00 ಗಂಟೆಯಿಂದ ಮಧ್ಯಾಹ್ನ 3-00 ಗಂಟೆ ಒಳಗೆ ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್‌ರವರಿಗೆ
2. ನಿಯಮ 14ಬಿ (1)ರಂತೆ ನಾಮಿನೇಷನ್ ಅರ್ಜಿ ಗಳನ್ನು ಪರಿಶೀಲಿಸುವುದು.	ದಿ:11-2-2025ನೇ ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್‌ರವರಿಂದ
3. ನಿಯಮ14 ಸಿ(1)ರಂತೆ ನಾಮಿನೇಷನ್ ಅರ್ಜಿಯನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ	ದಿ:11-2-2025ನೇ ಮಂಗಳವಾರ ನಾಮ ಪತ್ರಗಳ ಪರಿಶೀಲನೆಯ ನಂತರ ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ ರವರಿಂದ
4. ಚುನಾವಣೆ ನಡೆಯುವ ದಿನಾಂಕ, ವೇಳೆ ಮತ್ತು ಸ್ಥಳ	ದಿ:18-2-2025ನೇ ಮಂಗಳವಾರ ಬೆಳಿಗ್ಗೆ 9-00 ಗಂಟೆಯಿಂದ ಮಧ್ಯಾಹ್ನ 4-00 ಗಂಟೆಯವರೆಗೆ ಶ್ರೀಮಾನ್ ಪರಸಯ್ಯನವರ ಕಲ್ಯಾಣ ಮಂಟಪ ಟ್ರಸ್ಟ್ ರಿ., ಜೆ.ಎಲ್.ಬಿ. ರಸ್ತೆ, ಹುಣಸೂರು
5. ಮತಗಳ ಎಣಿಕೆಯ ದಿನಾಂಕ ಹಾಗೂ ವೇಳೆ ಹಾಗೂ ಚುನಾವಣಾ ಫಲಿತಾಂಶ ಪ್ರಕಟಣೆ	ದಿ:18-2-2025ರಂದು ಮತದಾನ ಮುಕ್ತಾಯ ವಾದ ನಂತರ ಮತದಾನ ನಡೆದ ಸ್ಥಳದಲ್ಲಿ ಮತ ಎಣಿಕೆ ನಡೆಸಲಾಗುತ್ತದೆ.

ಸ್ಥಳ : ಹುಣಸೂರು
ದಿನಾಂಕ : 1-2-2025

ಸಹಿ/-
(ರಾಜು .ಬಿ)
ರಿಟರ್ನಿಂಗ್ ಅಫೀಸರ್
ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,
ಹುಣಸೂರು ತಾಲ್ಲೂಕು



ಮಡಿವಾಳ ಮಾಚಿದೇವರಿಂದ ಸಂಸ್ಕೃತಿ, ವಚನ ಸಾಹಿತ್ಯ ಜೀವಂತ

ಎಲ್ಲರೂ ಮಾಚಿದೇವರ ತತ್ವಾದರ್ಶ ಅಳವಡಿಸಿಕೊಳ್ಳಿ: ಶಾಸಕ ದರ್ಶನ್

ನಂಜನಗೂಡು, ಫೆ.1– ನಾಡಿನ ಸಂಸ್ಕೃತಿ, ಇತಿಹಾಸ ಶರಣರ ವಚನ ಸಾಹಿತ್ಯ ಜೀವಂತವಾಗಿರಲು ಮಡಿವಾಳ ಮಾಚಿದೇವರ ಹೋರಾಟ ಕಾರಣ. ಅವರ ವಚನಗಳಲ್ಲಿ ಎಲ್ಲರೂ ಬದುಕು ಕೊಟ್ಟುಕೊಳ್ಳುವ ಮಾರ್ಗದರ್ಶನವಿದೆ. ಆದ್ದರಿಂದ ಅವರ ತತ್ವಾದರ್ಶಗಳನ್ನು ಎಲ್ಲರೂ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಶಾಸಕ ದರ್ಶನ್ ಸಲಹೆ ನೀಡಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಏರ್ಪಡಿಸಿದ್ದ ಮಡಿವಾಳ ಮಾಚಿದೇವರ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಬಸವಾದಿ ಶರಣರು ತಮ್ಮ ವಚನಗಳ ಮೂಲಕ ಸಮಾಜದಲ್ಲಿ ನೆಲೆಯೂರಿದ್ದ ಅಸಮಾನತೆ ಹೋಗಲಾಡಿಸಿ ಸಮ ಸಮಾಜ ನಿರ್ಮಿಸಲು ಹೋರಾಟ ನಡೆಸಿದರು. ಆದರೆ ಇದನ್ನು ಸಹಿಸದ ಪಟ್ಟಭದ್ರ ಹಿತಾಸಕ್ತಿಗಳು ವಚನ ಸಾಹಿತ್ಯ ಅಳಿಸಿ ಹಾಕಲು ಪ್ರಯತ್ನಿಸಿದರು. ಆದರೆ ಮಡಿವಾಳ ಮಾಚಿದೇವರು ವೀರ ಯೋಧರಂತೆ ಹೋರಾಡಿ ವಚನ ಸಾಹಿತ್ಯ ಕಾಪಾಡಿದ್ದಾರೆ. ಆದ್ದರಿಂದ ಶರಣ ಸಾಹಿತ್ಯದ ಸಂಸ್ಕೃತಿ ಇನ್ನೂ ಜೀವಂತವಾಗಿದೆ ಎಂದರು.

21ನೇ ಶತಮಾನದಲ್ಲಿ ಸಂವಿಧಾನಾತ್ಮಕವಾಗಿ ಅತ್ಯಂತ ಸಣ್ಣ ಸಮುದಾಯಗಳಿಗೂ ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಹೇಗೆ ಒದಗಿಸಬೇಕು ಎಂಬುದನ್ನು ಸರ್ಕಾರಗಳು ಚಿಂತಿಸಬೇಕಿದೆ. ಆ ನಿಟ್ಟಿನಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎಲ್ಲಾ ವರ್ಗದವರಿಗೂ ಸವಲತ್ತುಗಳನ್ನು ತಲುಪಿಸುವ ಕೆಲಸ ಮಾಡಿದೆ. ಕ್ಷೇತ್ರದಲ್ಲಿ ಮಡಿವಾಳ ಸಮಾಜಕ್ಕೆ ರಾಜಕೀಯ ಸ್ಥಾನಮಾನ ಕಲ್ಪಿಸುವ ಸಲುವಾಗಿ ಸಮುದಾಯದ ಕೆ.ಎಂ.ಬಸವರಾಜು ಅವರನ್ನು ನಗರಸಭೆ ನಾಮಿನಿ ಸದಸ್ಯರನ್ನಾಗಿ ನೇಮಿಸಲಾಗಿದೆ.



ಕಾರ್ಯಕ್ರಮವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ಮುಂದಿನ ದಿನಗಳಲ್ಲಿ ಪ್ರಸನ್ನಕುಮಾರ್ ಅವರನ್ನು ಸರ್ಕಾರ ಮಡಿವಾಳ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಕಗೊಳಿಸುವ ಭರವಸೆ ಇದೆ. ಜೊತೆಗೆ ಕ್ಷೇತ್ರದಲ್ಲಿ ಮುಖ್ಯಮಂತ್ರಿಗಳ ಮನವೊಲಿಸಿ ಒಂದು ಕೋಟಿ ಅನುದಾನ ಬಿಡುಗಡೆಗೊಳಿಸಿ ಮಡಿವಾಳ ಸಮುದಾಯ ಭವನ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಮಾತನಾಡಿ, ನಮ್ಮ ಕಾಂಗ್ರೆಸ್ ಸರ್ಕಾರ ಎಲ್ಲಾ ಜನಾಂಗದ ಮಹಾ ಪುರುಷರ ಜಯಂತಿ ಆಚರಣೆಗೆ ತಂದಿದ್ದು, 2017ರಲ್ಲಿ ಮಡಿವಾಳ ಮಾಚಿದೇವರ ಜಯಂತಿ ಜಾರಿಗೆ ತರಲಾಯಿತು. 12ನೇ ಶತಮಾನದಲ್ಲಿ ಬಸವಾದಿ ಶರಣರು ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ತಂದಿದ್ದರು. ಅಂತಹ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೊಡ್ಡಕ್ರಾಂತಿ ಮಾಡಿ ಎಲ್ಲಾ ಸಮುದಾಯಕ್ಕೂ ಅವಕಾಶ ಕಲ್ಪಿಸಿದ್ದರು ಎಂದರು.

ಅಂಬೇಡ್ಕರ್ ಅವರ ಸಂವಿಧಾನದಿಂದಾಗಿ ಎಲ್ಲಾ ಸಣ್ಣಪುಟ್ಟ ಸಮುದಾಯದವರು ತಮ್ಮ ಹಕ್ಕು ಪಡೆಯಲು ಸಾಧ್ಯವಾಗಿದೆ. ಕೆಲ ಪಟ್ಟಭದ್ರ ಹಿತಾಸಕ್ತಿಗಳು ಸಂವಿಧಾನದ ಅಡಿ ಅಧಿಕಾರಕ್ಕೆ ಬಂದು ಸಂವಿಧಾನ ನಾಶ ಮಾಡುವ ಕೆಲಸ ಮಾಡುತ್ತಾರೆ. ಸಂವಿಧಾನ ನಾಶವಾದರೆ ಶೋಷಿತ ಸಮುದಾಯಗಳು ಮತ್ತೆ ಸನಾತನ ಧರ್ಮದ ಶ್ರೇಣೀಕೃತ ವ್ಯವಸ್ಥೆಗೆ ಮರಳಿ ಶೋಷಣೆ ಅನುಭವಿಸಬೇಕಾಗುತ್ತದೆ. ಆದ್ದರಿಂದ ಶೋಷಿತ ಸಮುದಾಯಗಳು ಸಂವಿಧಾನವನ್ನು ಕಾಪಾಡಿಕೊಳ್ಳಬೇಕು. ಬಾಬಾ ಸಾಹೇಬರು ಕೊಟ್ಟಂತಹ ಶಿಕ್ಷಣ, ಸಂಘಟನೆ, ಹೋರಾಟ ಎಂಬ ಮಂತ್ರ ಅನುಸರಿಸಿರುವ ಮೂಲಕ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು. ಆ ನಿಟ್ಟಿನಲ್ಲಿ ಸಮುದಾಯದ ಎಲ್ಲಾ ಜನರು ನಿಮ್ಮ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಕೊಡಿಸಬೇಕು ಎಂದರು.

> ಜ್ಞಾನ, ವಿದ್ಯೆ ಇದ್ದರೆ ಎಲ್ಲಾ ಸಮುದಾಯದವರಿಗೂ ಸ್ಥಾನಮಾನ ಅವಕಾಶಗಳು ಒದಗಿ ಬರಲಿವೆ. ಆದ್ದರಿಂದ ಎಲ್ಲರೂ ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ, ವಿದ್ಯೆ ಜೊತೆಗೆ ಸಂಸ್ಕಾರ ಬೆಳೆಸಿ.
> - ಆನಂದ್ ಗುರೂಜಿ.

ಇದಕ್ಕೂ ಮುನ್ನಾ ನಗರದ ಜೂನಿಯರ್ ಕಾಲೇಜು ಮೈದಾನದಿಂದ ಮಡಿವಾಳ ಮಾಚಿದೇವರ ಭಾವಚಿತ್ರವನ್ನು ವಿವಿಧ ಜಾನಪದ ಕಲಾತಂಡಗಳ ಮೂಲಕ ಮೆರವಣಿಗೆ ಮಾಡಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕೇಶವ ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ಮಡಿವಾಳ ಸಮಾಜ ಅಧ್ಯಕ್ಷ ಪ್ರಸನ್ನಕುಮಾರ್, ಕಾರ್ಯದರ್ಶಿ ಕೆ.ಎಂ.ಬಸವರಾಜು, ಚಿತ್ರದುರ್ಗ ಮಹಾಸಂಸ್ಥಾನ ಮಠದ ಬಸವ ಮಾಚಿದೇವಸ್ವಾಮೀಜಿ, ಮುಖ್ಯ ಭಾಷಣಕಾರರಾದ ವಿಜಯಲಿಂಗಂ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಮುಖಂಡರಾದ ದಕ್ಷಿಣಮೂರ್ತಿ, ಮುದ್ದು ಮಾದೇಗೌಡ, ಬಾಲಚಂದ್ರ, ಶಿವಣ್ಣ, ಮಹೇಶ್, ರವಿ, ಸೋಮಣ್ಣ, ನಾಗರಾಜು, ಮಹದೇವಸ್ವಾಮಿ, ಪ್ರಭುಸ್ವಾಮಿ, ವಿಜಯ್ ಕುಮಾರ್, ನಗರಸಭಾ ಸದಸ್ಯರಾದ ಗಾಯತ್ರಿ, ರಮೇಶ್, ರವಿ, ದೀಪು, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್ ಸೇರಿದಂತೆ ಇತರರಿದ್ದರು.

ಹನಗೋಡಲ್ಲಿ ಮಡಿವಾಳ ಮಾಚಿದೇವರ ಜಯಂತಿ




ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು.

ಹನಗೋಡು, ಫೆ.1– ಗ್ರಾಮದ ಮಡಿವಾಳ ಸಮುದಾಯದಿಂದ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು.

ಪ್ರತಿ ವರ್ಷದಂತೆ ಈ ಬಾರಿಯೂ ಮಡಿವಾಳ ಮತ್ತು ಇತರೆ ಸಮುದಾಯದ ಮುಖಂಡರು, ಗ್ರಾಮಸ್ಥರು ಮಡಿವಾಳ ಮಾಚಿದೇವರ ಫೋಟೋಗೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು. ಇದೇ ವೇಳೆ ಸಾರ್ವಜನಿಕರಿಗೆ ಸಿಹಿ, ಅನ್ನಸಂತರ್ಪಣೆ ಮಾಡಲಾಯಿತು.

ಈ ವೇಳೆ ಮಡಿವಾಳ ಮಾಚಯ್ಯ ಸಂಘದ ಅಧ್ಯಕ್ಷ ಹರೀಶ್, ಕಾರ್ಯದರ್ಶಿ ಸಿದ್ದರಾಜು, ಗ್ರಾಪಂ ಅಧ್ಯಕ್ಷ ಚೆನ್ನಯ್ಯ, ಮಾಜಿ ಉಪಾಧ್ಯಕ್ಷ ಸದಸ್ಯ ಬೋರೇಗೌಡ, ಸದಸ್ಯರಾದ ಸಂತೋಷ್, ಶಿವಣ್ಣ, ಪ್ರಸನ್ನ, ನಂಜುಂಡ, ದರ್ಶನ್, ದೇವರಾಜ್, ಪೇಪರ್ ಕುಮಾರ್ ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ಮೈಸೂರು ವಿವಿ ಕುಲಸಚಿವರಿಗೆ ಅಭಿನಂದನೆ



ಮೈಸೂರು ವಿಶ್ವವಿದ್ಯಾಲಯದ ಕುಲಸಚಿವರಾಗಿ ನೇಮಕಗೊಂಡ ಎಂ.ಕೆ.ಸವಿತಾ ಅವರನ್ನು ತಿ.ನರಸೀಪುರ ಪುರಸಭೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಯುವ ಮುಖಂಡ ರಘು ಅಭಿನಂದಿಸಿದರು. ಮೈಸೂರು ಯೂನಿವರ್ಸಿಟಿ ನೌಕರ ಚೇತನ್ ಕುಮಾರ್, ರೈಲ್ವೆ ಇಲಾಖೆಯ ಶ್ರೀನಿವಾಸ್ ಹಾಗೂ ಪರಮೇಶ್ ಹಾಜರಿದ್ದರು.

ಮಡಿವಾಳ ಸಮುದಾಯ ಭವನಕ್ಕೆ ಜಾಗ ಮಂಜೂರು



ಮಡಿವಾಳ ಮಾಚಿದೇವರ ಜಯಂತಿಯನ್ನು ಶಾಸಕ ಅನಿಲ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಫೆ.1– ಮಡಿವಾಳ ಸಮುದಾಯ ಭವನ ನಿರ್ಮಾಣಕ್ಕೆ 80 ಲಕ್ಷ ರೂ. ಬೆಲೆಬಾಳುವ 8 ಗುಂಟೆ ಜಾಗ ಮಂಜೂರು ಮಾಡಲಾಗುವುದು ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ವಿಶ್ವನಾಥಯ್ಯ ಕಾಲೋನಿಯಲ್ಲಿ ನಡೆದ ಮಡಿವಾಳ ಮಾಚಿದೇವರ ಜಯಂತ್ಯುತ್ಸವ, ಭೂಮಿ ಪೂಜೆ ಹಾಗೂ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ಸಮುದಾಯ ಭವನ ನಿರ್ಮಾಣಕ್ಕೆ 50 ಲಕ್ಷ ಹಣ ಮಂಜೂರಾಗಿದ್ದು, ಪ್ರಸ್ತುತ 25 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ ಎಂದರು.

ಸಮಾಜದ ಬಂಧುಗಳು ಒಂದೆಡೆ ಸೇರುವ ಹಿತದೃಷ್ಟಿಯಿಂದ ಜಯಂತಿ ಆಯೋಜಿಸಲಾಗುತ್ತಿದೆ. ವೃತ್ತಿಯಿಂದ ಜಾತಿ ಬಂದಿದೆ. ಆದರೆ ಜಾತಿಯಿಂದ ವೃತ್ತಿ ಬಂದಿಲ್ಲ ಎಂದು ತಿಳಿಸಿದರು.

ಶಾಸಕನಾಗಿ ನಾನು ಎಲ್ಲಾ ಸಮುದಾಯದವರ ಏಳ್ಗೆಗೆ ಶ್ರಮಿಸಿದ ಫಲವಾಗಿ ನನ್ನನ್ನು ಮತ್ತೆ ಶಾಸಕನನ್ನಾಗಿ ಮಾಡಿದ್ದೀರಿ ಎಂದರು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, 12 ಶತಮಾನದಲ್ಲಿ ಬಸವಣ್ಣನವರ ಅನುಯಾಯಿಗಳಾಗಿ ಮಾಚಿದೇವರು ಹಲವು ವಚನಗಳನ್ನು ರಚಿಸಿದ್ದು, ಅಸಮಾನತೆಯ ವಿರುದ್ಧ ಹೋರಾಡಿದರು ಎಂದರು.

ಶ್ರೀಮಂತ, ಬಡವ, ಬಲ್ಲಿದ ಎಂಬ ಭೇದವಿಲ್ಲದ ರೀತಿ ಬಾಳಿದವರು ವಚನಕಾರರು. ಅವರ ಶ್ರಮ ವ್ಯರ್ಥವಾಗದ ರೀತಿ ಸಂವಿಧಾನ ರಚನೆ ಮಾಡಲಾಗಿದ್ದು, ನಾವೆಲ್ಲರೂ ಸಹ ಸಂವಿಧಾನದ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದೇವೆ ಎಂದರು.

ಮಡಿವಾಳ ಮಾಚಿದೇವರ ಕುರಿತು ಶಿಕ್ಷಕ ಡಾ.ಕಿರಣ್ ಸಿಡ್ಲೇಹಳ್ಳಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಡಿವಾಳರ ಸಂಘದ ಕೋಟೆ, ಸರಗೂರು ತಾಲೂಕು ಅಧ್ಯಕ್ಷರಾದ ಮಹೇಶ್, ಧರಣೇಶ್, ಕಾರ್ಯದರ್ಶಿ ರಂಗಸ್ವಾಮಿ, ಖಜಾಂಚಿ ನಾಗೇಂದ್ರ ಯಜಮಾನರಾದ ಬಸವರಾಜು, ಸಂಘದ ಗೌರವಾಧ್ಯಕ್ಷ ಬಸವರಾಜಶೆಟ್ಟಿ, ಉಪಾಧ್ಯಕ್ಷ ತಿಮ್ಮಶೆಟ್ಟಿ, ಮೈಮುಲ್ ನಿರ್ದೇಶಕ ಈರೇಗೌಡ, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಸದಸ್ಯರಾದ ರಾಜು ವಿಶ್ವಕರ್ಮ, ಮಧು, ಶಾಂತಮ್ಮ ಗೋವಿಂದರಾಜು, ದಿನೇಶ್, ಮುಖಂಡರಾದ ಹೆಚ್.ಕೆ.ಪ್ರಕಾಶ್, ಮಂಜುನಾಥ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶಶಿಕಲಾ, ಬಿಇಓ ಕಾಂತರಾಜು, ರಮೇಶ್, ಶಿವಪ್ಪಶೆಟ್ಟಿ, ನಾಗರಾಜು, ಸೌಮ್ಯ, ತಿಮ್ಮಶೆಟ್ಟಿ, ಮಲ್ಲೇಶ್, ಜವರಯ್ಯ, ಫಯಾಜ್ ಪಾಷ, ಬೀರೇಶ್, ಮಂಚಯ್ಯಶೆಟ್ಟಿ, ಶಿವಣ್ಣ, ಹೊನ್ನಶೆಟ್ಟಿ, ರಮೇಶ್ ಕೋಟೆ, ನೂರ್ ಪಾಷ, ಸವಿತಾ, ಶಿವರಾಜು, ಸಿದ್ದಶೆಟ್ಟಿ, ಸುರೇಶ್, ಬಸವರಾಜು, ಈರಾಜ್, ಮರಿಲಿಂಗಶೆಟ್ಟಿ ಇನ್ನಿತರರಿದ್ದರು.

ಕಸುಬುಗಳಲ್ಲಿ ಮಡಿವಾಳರ ಮಡಿ ಕಾಯಕ ಶ್ರೇಷ್ಠ

ತಹಸೀಲ್ದಾರ್ ಮೋಹನಕುಮಾರಿ ಅಭಿಪ್ರಾಯ

ಸರಗೂರು, ಫೆ.1– ರೂಢಿಗತವಾಗಿ ಬಂದ ಕಸುಬುಗಳಲ್ಲಿ ಮಡಿವಾಳರ ಮಡಿ ಕಾಯಕ ಶ್ರೇಷ್ಠ ಎಂದು ತಹಸೀಲ್ದಾರ್ ಮೋಹನಕುಮಾರಿ ಅಭಿಪ್ರಾಯಪಟ್ಟರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಹಿಂದೆ ಶೋಷಣೆ, ಜಾತೀಯತೆ, ಮೇಲು–ಕೀಳು ತಾರತಮ್ಯ, ಅಸ್ಪೃಶ್ಯತೆ, ಮೂಢನಂಬಿಕೆ, ಶಿಕ್ಷಣದಲ್ಲಿ ಅವಕಾಶ ವಂಚನೆ ಹೀಗೆ ಅನೇಕ ಸಾಮಾಜಿಕ ಅಸಮಾನತೆಯಿಂದ ಜನರು ತುಳಿತಕ್ಕೆ ಒಳಗಾಗಿದ್ದರು. ಸರ್ವರಿಗೂ ಸಮಬಾಳು, ಸಮಪಾಲು ಒದಗಿಸಲು ಬಸವ–ಮಾಚಿದೇವಾದಿ ಶರಣರು ಸಾಮಾಜಿಕ ಕ್ರಾಂತಿಯನ್ನೇ ಕೈಗೊಂಡರು. ಹೀಗಾಗಿ ಮಾಚಿದೇವರ ಆದರ್ಶಗಳನ್ನು ಪ್ರತಿಯೊಬ್ಬರು ಅನುಸರಿಬೇಕು ಎಂದರು.



ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮೋಹನಕುಮಾರಿ ಮಾತನಾಡಿದರು.

ವೀರಮಡಿವಾಳ ಮಾಚಿದೇವರ ಸಮಾಜದ ಅಧ್ಯಕ್ಷ ಎಸ್.ಬಿ.ಧರಣೇಶ್ ಮಾತನಾಡಿ, ಮಾಚಿದೇವರು ಹುಟ್ಟಿನಿಂದಲೂ ಅಚಲ ಕಾಯಕ ನಿಷ್ಠನಾಗಿದ್ದವರು. ಅರಸುತನ ಮೇಲಲ್ಲ ಅಗಸತನ ಕೀಳಲ್ಲ ಎಂಬುದನ್ನು ಜನಕ್ಕೆ ಸಾರಿದರು. ವೀರಮಡಿವಾಳ ಮಾಚಿದೇವರು ಶರಣ ಧರ್ಮದ ಸಾರವನ್ನು 12ನೇ ಶತಮಾನದಲ್ಲೇ ಉಣಬಡಿಸಿ ವಚನ ಸಾಹಿತ್ಯ ಕಾಪಾಡಿದ ಮಹಾಚೇತನ ಎಂದರು.

ಕೊತ್ತೇಗಾಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಕೆ.ರಮೇಶ್ ಮಡಿವಾಳ ಮಾಚಿದೇವರ ಕುರಿತು ಮಾತನಾಡಿದರು. ಮಡಿವಾಳ ಸಮಾಜದ ಸಮುದಾಯ ಭವನಕ್ಕೆ ನಿವೇಶನ ಹಾಗೂ ಕಪಿಲಾ ನದಿ ದಡದಲ್ಲಿ ಮಡಿ ಕಟ್ಟೆ ನಿರ್ಮಿಸಿ ಕೊಡಬೇಕೆಂದು ಸಮಾಜದ ವತಿಯಿಂದ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಎಲ್.ನಾಗೇಂದ್ರಯ್ಯ, ಅಕ್ಷರ ದಾಸೋಹ ಸಹಾಯಕ ತಾಲೂಕು ನಿರ್ದೇಶಕ ರಾಜು, ಮುಖಂಡರಾದ ಶ್ರೀನಾಥ್, ಸ್ವಾಮಿ, ಕೃಷ್ಣ, ಗಡಿ ಯಜಮಾನ ಬಿ.ವೆಂಕಟೇಶ್, ಕಾರ್ಯದರ್ಶಿ ವೆಂಕಟೇಶ್, ಉಪಾಧ್ಯಕ್ಷ ಸುರೇಶ್ ಶೆಟ್ಟಿ, ಗೌರವಾಧ್ಯಕ್ಷ ಮಹದೇವಶೆಟ್ಟಿ, ಖಜಾಂಚಿ ನಂಜುಂಡಶೆಟ್ಟಿ, ಸಂಘಟನಾ ಕಾರ್ಯದರ್ಶಿ ಶಿವಣ್ಣ ಶೆಟ್ಟಿ, ಸಹ ಕಾರ್ಯದರ್ಶಿ ಚಿಕ್ಕಹೊನ್ನಶೆಟ್ಟಿ, ಗ್ರಾಪಂ ಸದಸ್ಯೆ ಸವಿತಾ, ಸಮಾಜದ ಮುಖಂಡರಾದ ನಾಗೇಶ್, ದೇವಶೆಟ್ಟಿ, ಮಹಿಳಾ ಸದಸ್ಯರಾದ ಮಂಜುಳ, ಗೌರಮ್ಮ, ಗ್ರೇಡ್–2 ತಹಸೀಲ್ದಾರ್ ಪರಶಿವಮೂರ್ತಿ, ಡಿ.ಟಿ.ಸುನೀಲ್, ಆರ್‌ಐ ಮುಜೀಬ್ ಇನ್ನಿತರರಿದ್ದರು.

ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ

ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿ ಶಫಿವುದ್ದೀನ್ ಖಾನ್ ಕರೆ



ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸ ಜಾಥಾಕ್ಕೆ ಚಾಲನೆ ನೀಡಲಾಯಿತು.

ತಿ.ನರಸೀಪುರ, ಫೆ.1– ಅಮೂಲ್ಯವಾದ ಜೀವ ರಕ್ಷಣೆಗೆ ಪ್ರತಿಯೊಬ್ಬ ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂದು ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿ ಶಫಿವುದ್ದೀನ್ ಖಾನ್ ಕರೆ ನೀಡಿದರು.

ಪಟ್ಟಣದ ವಿದ್ಯೋದಯ ವೃತ್ತದಲ್ಲಿ 36ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸ –2025 ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಾದೇಶಿಕ ಸಾರಿಗೆ ಇಲಾಖೆ ಸಂಚಾರದ ಸುರಕ್ಷಿತ ಮತ್ತು ಪರಿಣಾಮಕಾರಿ ಚಾಲನಾ ನಿಯಮಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ರಸ್ತೆ ಸುರಕ್ಷತಾ ಜಾಗೃತಿ ಜಾಥಾ ನಡೆಸಲಾಗುತ್ತಿದೆ ಎಂದರು.

ಹೆಲ್ಮೆಟ್ ಧರಿಸುವುದರಿಂದ ಅಪಘಾತದ ವೇಳೆ ತಲೆಗೆ ಪೆಟ್ಟು ಬೀಳುವುದನ್ನು ತಡೆಗಟ್ಟಬಹುದು. ಸುರಕ್ಷತೆಯ ಪ್ರಯಾಣಕ್ಕಾಗಿ ಹೆಲ್ಮೆಟ್ ಅಗತ್ಯ. ಆದ್ದರಿಂದ ಸಾರ್ವಜನಿಕರು ಹೆಲ್ಮೆಟ್ ಧರಿಸಿ ಸಹಕರಿಸುವಂತೆ ಮನವಿ ಮಾಡಿದರು.

ರಸ್ತೆ ಸುರಕ್ಷತಾ ನಿಯಮ ಪಾಲನೆ ನಿಮ್ಮೆಲ್ಲರ ಹೊಣೆಯಾಗಿದ್ದು, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಬೇಡಿ. ವಾಹನ ಚಲನೆ ಮಾಡುವಾಗ ಮೊಬೈಲ್ ಬಳಸಬಾರದು. ಕಾರು ಚಾಲನೆ ಮಾಡುವಾಗ ಸೀಟ್ ಬೆಲ್ಟ್ ಕಡ್ಡಾಯವಾಗಿ ಬಳಸಿ, ನಿಗದಿತ ಸ್ಥಳದಲ್ಲಿ ವಾಹನ ನಿಲುಗಡೆ ಮಾಡಿ, ಹೆದ್ದಾರಿಗಳಲ್ಲಿ ವಾಹನ ನಿಲುಗಡೆ ಮಾಡಬಾರದು. ಅಪಘಾತದಿಂದ ಉಂಟಾಗುವ ಅನಾಹುತದಿಂದ ಸಂಸಾರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ವಾಹನ ಸವಾರರು ಪ್ರಾದೇಶಿಕ ಸಾರಿಗೆ ಇಲಾಖೆ ನಿಯಮಗಳನ್ನು ಪಾಲಿಸುವಂತೆ ತಿಳಿಸಿದರು. ಖಾಸಗಿ ಬಸ್ ಏಜೆಂಟರ ಸಂಘದ ಗೌರವಾಧ್ಯಕ್ಷ ಹೋಟೆಲ್ ರಾಜಣ್ಣ, ಅಧ್ಯಕ್ಷ ಶ್ರೀನಿವಾಸ್, ವಿದ್ಯೋದಯ ಶಿಕ್ಷಣ ಸಂಸ್ಥೆ ಪ್ರಾಂಶುಪಾಲ ಟಿ.ಎಸ್.ಬಸವಣ್ಣಸ್ವಾಮಿ, ಉಪನ್ಯಾಸಕ ಕುಮಾರಸ್ವಾಮಿ, ಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ಲಿಂಗಪ್ಪ, ಸಾರಿಗೆ ಇಲಾಖೆ ಇನ್ಸ್‌ಪೆಕ್ಟರ್‌ಗಳಾದ ಸುವರ್ಣ, ಇಫಿಯಾಜ್ ಪಾಷಾ, ಸಿದ್ದೇಶ್ವರ ಡ್ರೈವಿಂಗ್ ಸ್ಕೂಲ್‌ನ ಡಿ.ಶಿವಣ್ಣ, ಮಹದೇಶ್ವರ ಡ್ರೈವಿಂಗ್ ಸ್ಕೂಲ್‌ನ ನಾಗರಾಜು, ಮಹದೇವಸ್ವಾಮಿ, ಚಾಮುಂಡೇಶ್ವರಿ ಡ್ರೈವಿಂಗ್ ಸ್ಕೂಲ್‌ನ ಶಿವು, ಬಸ್ ಮಾಲೀಕರಾದ ಜಗದೀಶ್, ನಂದ, ನರಸಿಂಹ, ರಮೇಶ್, ನಂಜುಂಡ, ನಾಗರಾಜು, ಮಹದೇವಸ್ವಾಮಿ, ಏಜೆಂಟರ ಸಂಘದ ಕಾರ್ಯದರ್ಶಿ ರಾಜಣ್ಣ, ಶೇಷಾದ್ರಿ ಕುಮಾರ್, ಪೊಲೀಸ್ ಇಲಾಖೆಯವರು ಸೇರಿದಂತೆ ಮತ್ತಿತರರಿದ್ದರು.

ವನ್ಯಜೀವಿ ಬೇಟೆಗೆ ಯತ್ನಿಸಿದ ಐವರ ಬಂಧನ



ಹುಣಸೂರು, ಫೆ.1– ನಾಗರಹೊಳೆ ಉದ್ಯಾನವನದ ಆನೆ ಚೌಕೂರು ವಲಯದಲ್ಲಿ ವನ್ಯಜೀವಿ ಬೇಟೆಯಾಡಲು ಯತ್ನಿಸಿದ ಐವರು ಬೇಟೆಗಾರರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ.

ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲೂಕಿನ ಕುಟ್ಟಂದಿ ಗ್ರಾಮದ ಸಿ.ಬಿ.ಮೋಟಯ್ಯ, ಬಿ.ಎನ್.ನಾಚಪ್ಪ, ಕೆ.ಎಂ.ಸತೀಶ್, ಈತನ ಪುತ್ರ ಕೆ.ಎಸ್.ಚಂದನ್ ಹಾಗೂ ಕೊಂಗನ ಗ್ರಾಮದ ಪಿ.ಎಂ.ಸಂದೀಪ್ ಬಂಧಿತರು. ಇವರಿಂದ ಬೇಟೆಯಾಡಲು ಬಳಸಿದ್ದ ಕಾರು, 2 ಎಸ್‌ಬಿಬಿಎಲ್ ಒಂಟಿ ನಳಿಕೆಯ ಲೋಡ್ ಮಾಡಿದ್ದ ಬಂದೂಕು, 11 ಜೀವಂತ ಕಾಡತೂಸು, ಟಾರ್ಚ್, ಮೊಬೈಲ್‌ಗಳು, ಚೂರಿ, ಪ್ಲಾಸ್ಟಿಕ್ ಚೀಲ, ಕತ್ತಿ, ಅರ, ಟಾರ್ಪಲ್ ಹಾಗೂ ಒಂದು ಬ್ಯಾಗ್ ಅನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಫೆ.1ರಂದು ಮುಂಜಾನೆ 3.30ರಲ್ಲಿ ಹುಣಸೂರು ವನ್ಯಜೀವಿ ವಲಯದ ಕಚುವಿನಹಳ್ಳಿ ಶಾಖೆಯ ಡಿಆರ್‌ಎಫ್‌ಓ ಹೆಚ್.ಎಂ.ಪ್ರಮೋದ್, ಗಸ್ತು ಅರಣ್ಯ ಪಾಲಕರು, ಎಪಿಸಿ ಸಿಬ್ಬಂದಿ ಹಾಗೂ ಎಸ್‌ಟಿಪಿಎಫ್‌ನ ಡಿಆರ್‌ಎಫ್‌ಓ ಚಂದನ್‌ರೊಂದಿಗೆ ರಾತ್ರಿ ಗಸ್ತು ನಡೆಸುತ್ತಿದ್ದ ವೇಳೆ ಆರೋಪಿಗಳು ಅನುಮಾನಾಸ್ಪದವಾಗಿ ಕಾರಿನಲ್ಲಿ ಸಂಚರಿಸುತ್ತಿದ್ದರಿಂದ ಅನುಮಾನಗೊಂಡ ಅರಣ್ಯ ಸಿಬ್ಬಂದಿ ಆರೋಪಿಗಳ ಕಾರನ್ನು ಸಿನಿಮೀಯ ಮಾದರಿ ಬೆನ್ನಟ್ಟಿ ಆನೆಚೌಕೂರು ಗೇಟ್ ಬಳಿಯ ಜಡೆ ಆಲದಮರ ಗೇಟ್ ಸಮೀಪ ಅಡ್ಡಗಟ್ಟಿ ನಿಲ್ಲಿಸಿ ತಪಾಸಣೆ ನಡೆಸಿದ ವೇಳೆ ಐವರು ಕಾರಿನಲ್ಲಿ 2 ಒಂಟಿ ನಳಿಕೆ ಬಂದೂಕು ಮತ್ತಿತರ ಪರಿಕರಗಳೊಂದಿಗೆ ಸಿಕ್ಕಿ ಬಿದ್ದಿದ್ದಾರೆ.

ಆರೋಪಿಗಳನ್ನು ವಿಚಾರಣೆಗೊಳಪಡಿಸಿದಾಗ 2 ದಿನಗಳ ಹಿಂದೆ ಕಡವೆ ಬೇಟೆಯಾಡಿರುವ ಬಗ್ಗೆ ಬಾಯ್ಬಿಟ್ಟಿದ್ದಾರೆ. ಎಸಿಎಫ್ ಎನ್.ಲಕ್ಷ್ಮೀ ಕಾಂತ್ ಮತ್ತು ಆರ್‌ಎಫ್‌ಓ ಕೆ.ಇ.ಸುಬ್ರಹ್ಮಣ್ಯ ನೇತೃತ್ವದಲ್ಲಿ ಸಿಬ್ಬಂದಿ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುವುದಾಗಿ ನಾಗರಹೊಳೆ ಹುಲಿ ಯೋಜನೆ ನಿರ್ದೇಶಕಿ ಪಿ.ಎ.ಸೀಮಾ ಅವರು ತಿಳಿಸಿದ್ದಾರೆ.

ಪಡಿತರ ವಿತರಣಾ ಕೇಂದ್ರ ಉದ್ಘಾಟನೆ

ಚುಂಚನಕಟ್ಟೆ, ಫೆ.1– ಸರ್ಕಾರ ಸಾರ್ವಜನಿಕರಿಗೆ ಉಚಿತ ಪಡಿತರ ವಿತರಿಸುತ್ತಿದ್ದರೂ, ಪಡಿತರ ಪಡೆಯಲು ಊರೂರು ಅಲೆಯಬೇಕಾದ ಪರಿಸ್ಥಿತಿ ಇರುವುದು ಶೋಚನೀಯ. ಈ ಬಗ್ಗೆ ಆಹಾರ ಇಲಾಖೆ ಗಮನ ಹರಿಸಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಮುದ್ದನಹಳ್ಳಿಯಲ್ಲಿ ಪಡಿತರ ವಿತರಣಾ ಕೇಂದ್ರ ಉದ್ಘಾಟಿಸಿ, ಸಾಂಕೇತಿಕವಾಗಿ ಪಡಿತರ ವಿತರಣೆ ಮಾಡಿ ಮಾತನಾಡಿದ ಅವರು, ಕ್ಷೇತ್ರದ ಸಂಪರ್ಕ ರಸ್ತೆಗಳ ಅಭಿವೃದ್ಧಿಗೆ 10 ಕೋಟಿ ಅನುದಾನ ಬಿಡುಗಡೆಯಾಗಿದೆ. ಕೆಸ್ತೂರಿನಿಂದ ಮುದ್ದನಹಳ್ಳಿ ಗ್ರಾಮಕ್ಕೆ ಬರುವ ರಸ್ತೆ, ಬಸವೇಶ್ವರ ದೇವಸ್ಥಾನ ಅಭಿವೃದ್ಧಿ, ಈ ಭಾಗಕ್ಕೆ ಪಶು ಆಸ್ಪತ್ರೆ ಬಹುದಿನಗಳ ಬೇಡಿಕೆಯಾಗಿರುವ ಮುದ್ದನಹಳ್ಳಿ ಗ್ರಾಮವನ್ನು ಕಂದಾಯ ಗ್ರಾಮವಾಗಿ ಮಾಡಲು ಸದ್ಯದಲ್ಲೇ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ನನ್ನ ರಾಜಕೀಯ ಜೀವನ ಆರಂಭಗೊಳ್ಳಲು ಆಶೀರ್ವಾದ ಮಾಡಿದ ಸಾಲಿಗ್ರಾಮ ಜಿಪಂನ ಕುಪ್ಪೆ, ಹೊಸಕೋಟೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳು ಪ್ರಮುಖವಾಗಿದ್ದು, ನಿಮ್ಮ ಮನೆ ಮಗನಾಗಿ ನಿಮ್ಮ ಸೇವೆಗೆ ನಾನು ಸದಾ ಸಿದ್ಧನಾಗಿದ್ದೇನೆ ಎಂದರು.

ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಪಿಎಸಿಎಸ್ ಅಧ್ಯಕ್ಷ ಸಂತೋಷ್, ಉಪಾಧ್ಯಕ್ಷ ಕಲ್ಯಾಣಮ್ಮ, ಎಂಡಿಸಿಸಿ ಬ್ಯಾಂಕ್ ಮ್ಯಾನೇಜರ್ ಪ್ರತಾಪ್, ಮೇಲ್ವಿಚಾರಕ ದಿನೇಶ್, ತಾಪಂ ಮಾಜಿ ಸದಸ್ಯ ಪ್ರಭಾಕರ್, ಗ್ರಾಪಂ ಮಾಜಿ ಅಧ್ಯಕ್ಷ ಕುಳ್ಳೇಗೌಡ, ತಿಮ್ಮೇಗೌಡ, ಮಾಜಿ ಉಪಾಧ್ಯಕ್ಷ ತಮ್ಮಯ್ಯ, ಆಹಾರ ನಿರೀಕ್ಷಕರಾದ ಸುರೇಶ್, ಕುಮಾರ್, ಗ್ರಾಮದ ಮುಖಂಡರಾದ ಕಾಳೇಗೌಡ, ಬಸವರಾಜ್, ಜಿಲ್ಲಾ ಕುರುಬರ ಸಂಘದ ನಿರ್ದೇಶಕ ಪುನೀತ್, ಸಂಘದ ಕಾರ್ಯದರ್ಶಿ, ಪುನೀತ್, ಸಹಾಯಕ ಜಗದೀಶ್ ಮತ್ತಿತರರಿದ್ದರು.

ಕೆ.ಆರ್.ನಗರದಲ್ಲಿ ಕರಾಮುವಿವಿ ತರಬೇತಿ ಕೇಂದ್ರ

ಶಾಸಕ ಡಿ.ರವಿಶಂಕರ್ ಭರವಸೆ


ಕೆ.ಆರ್.ನಗರ, ಫೆ.1– ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ತರಬೇತಿ ಕೇಂದ್ರ ಆರಂಭಿಸಲಾಗುವುದು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣ ದಲ್ಲಿ ಶನಿವಾರ ನಡೆದ ಕಾಲೇಜಿನ 2024–25ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ತರಬೇತಿ ಕೇಂದ್ರ ಆರಂಭ ಮಾಡುವುದರಿಂದ ಗೃಹಿಣಿಯರು ಸೇರಿದಂತೆ ಕೆಲ ಉದ್ಯೋಗಸ್ಥರು ಪದವಿ ಪಡೆ ಯಲು ಅನುಕೂಲವಾಗಲಿದೆ ಎಂದರು.

ಕ್ಷೇತ್ರದ ವಿದ್ಯಾರ್ಥಿಗಳಿಗಾಗಿ ಪಟ್ಟಣದಲ್ಲಿ ಐಟಿಐ, ನರ್ಸಿಂಗ್ ಮತ್ತು ಕಾನೂನು ಕಾಲೇಜು ಆರಂಭಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದ್ದು, ಕಾನೂನು ಕಾಲೇಜು ಪ್ರಾರಂಭಿಸಲು ಮುಂಬರುವ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಘೋಷಣೆ ಮಾಡಲಿದ್ದಾರೆ. ನನ್ನ ಅಧಿಕಾರವಧಿಯಲ್ಲಿ ಶಿಕ್ಷಣಕ್ಕೆ ಮತ್ತು ಆರೋಗ್ಯ ಒತ್ತುಕೊಟ್ಟು ಕೆಲಸ ಮಾಡುತ್ತೇನೆ ಎಂದರು.

ಕಾಲೇಜಿನ ಸುತ್ತ ಕಾಂಪೌಂಟ್ ಜೊತೆಗೆ ಸಾಂಸ್ಕೃತಿಕ ಸಭಾಂಗಣ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಲಾಗುವುದು. ಕಳೆದ ವರ್ಷ ನೀಡಿದ ಭರವಸೆಯಂತೆ ಕುಡಿಯುವ ನೀರಿಗಾಗಿ ಕೊಳವೆಬಾವಿ ಕೊರೆಸಲಾಗಿದ್ದು, ಶೌಚಾಲಯ ನಿರ್ಮಿಸಲಾಗಿದೆ ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನವೀಕರಣ ಹಾಗೂ ಕಾಲೇಜಿಗೆ ಹೈಟೆಕ್ ಸ್ಪರ್ಶ ನೀಡಲು 5.20 ಕೋಟಿ ರೂ. ಬಿಡುಗಡೆ ಮಾಡಿಸಲಾಗಿದ್ದು, ಕಾಮಗಾರಿಗೆ ಶೀಘ್ರ ಚಾಲನೆ ನೀಡಲಾಗುತ್ತದೆ. ಮುಂದಿನ ವರ್ಷ 590 ಅಂಕ ಗಳಿಸುವ ವಿದ್ಯಾರ್ಥಿನಿಯರಿಗೆ ವೈಯಕ್ತಿಕವಾಗಿ ಒಂದು ಲಕ್ಷ ಬಹುಮಾನ ನೀಡುವುದಾಗಿ ಘೋಷಿಸಿದರು.



ಕಾರ್ಯಕ್ರಮವನ್ನು ಶಾಸಕ ಡಿ.ರವಿಶಂಕರ್ ಉದ್ಘಾಟಿಸಿದರು.

ಪುರಸಭೆ ಅಧ್ಯಕ್ಷ ಶಿವುನಾಯಕ್, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷೆ ಸುನೀತಾ, ಪ್ರಾಂಶುಪಾಲ ಹೆಚ್.ಕೆ.ಕೃಷ್ಣಯ್ಯ, ಮೈಸೂರು ರಾಮಕೃಷ್ಣ ವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಎಸ್.ಬಾಲಾಜಿ, ಹುಣಸೂರು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎ.ರಾಮೇಗೌಡ, ಉಪನ್ಯಾಸಕರಾದ ಡಿ.ಶ್ರೀನಿವಾಸ್, ಕೃಷ್ಣ, ರುಚಿತಕೇಶವ್, ಶಶಿಗೌಡ ಮಾತನಾಡಿದರು.

ಕಾಲೇಜಿನ ವಿದ್ಯಾರ್ಥಿಗಳು ಸಾಂಸ್ಕೃತಿಕ ಮತ್ತು ಮನೋರಂಜನಾ ಕಾರ್ಯಕ್ರಮ ನಡೆಸಿಕೊಟ್ಟರು. ಕಾಂಗ್ರೆಸ್ ಪಕ್ಷದ ನಗರಾಧ್ಯಕ್ಷ ಎಂ.ಜೆ.ರಮೇಶ್, ವಕ್ತಾರ ಸೈಯದ್ ಜಾಬೀರ್, ಬಗರ್ ಹುಕುಂ ಸದಸ್ಯ ಅಪ್ಪಾಜಿಗೌಡ, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯೆ ಲತಾ, ಮುಖಂಡರಾದ ಹರಿರಾಜ್, ಮಂಜುನಾಥ್, ಕುಮಾರ್ ಮತ್ತು ಕಾಲೇಜು ಉಪನ್ಯಾಸಕರು, ಸಿಬ್ಬಂದಿ ಹಾಜರಿದ್ದರು.

ಕೊರಚ ಸಮುದಾಯಕ್ಕೆ ನಿವೇಶನ ಮಂಜೂರು ಮಾಡಿಸಿರುವ

ದಸಂಸ ಕಾರ್ಯಕರ್ತರ ಶ್ರಮ ಶ್ಲಾಘನೀಯ

ಹಿರಿಯ ಹೋರಾಟಗಾರ ಬಿ.ಡಿ.ಶಿವಬುದ್ಧಿ

ತಿ.ನರಸೀಪುರ, ಫೆ.1– ಜನಪ್ರತಿನಿಧಿಗಳಿಂದ ನಿರ್ಲಕ್ಷ್ಯಕ್ಕೊಳಗಾದ ಕೊರಚ ಸಮುದಾಯಕ್ಕೆ ಹೋರಾಟದ ಮೂಲಕ ಆಡಳಿತ ವರ್ಗದ ಗಮನ ಸೆಳೆದು ನಿವೇಶನ ಮಂಜೂರು ಮಾಡಿಸಿರುವುದು ದಲಿತ ಸಂಘರ್ಷ ಸಮಿತಿ ಚಳುವಳಿ ಮೈಲಿಗಲ್ಲು. ನಿರಾಶ್ರಿತರಿಗೆ ಆಸರೆಯಾಗಲು ಹಗಲಿರುಳು ಹೋರಾಟಕ್ಕೆ ನಿಂತ ದಸಂಸ ಕಾರ್ಯಕರ್ತರ ಶ್ರಮ ನಿಜಕ್ಕೂ ಶ್ಲಾಘನೀಯ ಎಂದು ಹಿರಿಯ ಹೋರಾಟಗಾರ ಬಿ.ಡಿ.ಶಿವಬುದ್ಧಿ ತಿಳಿಸಿದರು.

ಪಟ್ಟಣದ ಹೊರವಲಯದ ತಾಯೂರು ರಸ್ತೆಯಲ್ಲಿ ಕೊರಚ ಸಮುದಾಯದ ಕುಟುಂಬಗಳಿಗೆ ತಾಲೂಕು ಆಡಳಿತ ಮಂಜೂರು ಮಾಡಿರುವ ನಿವೇಶನದಲ್ಲಿ ದಲಿತ ಸಂಘರ್ಷ ಸಮಿತಿಯಿಂದ ಹಮ್ಮಿಕೊಂಡಿದ್ದ ಶಿವಪಾರ್ವತಿ ನಗರದ ನೂತನ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ಆಡಳಿತರೂಢ ಸರಕಾರ ಹಾಗೂ ಜನಪ್ರತಿನಿಧಿಗಳ ತೀವ್ರ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಕೊರಚ ಸಮುದಾಯದ ಕುಟುಂಬಗಳು ನಿವೇಶನದ ಕೂಗಿಗೆ ದಸಂಸ ಧ್ವನಿಯಾಗಿದ್ದರಿಂದ ಕೊನೆಗೂ ನಿವೇಶನ ಮಂಜುರಾಯಿತು ಎಂದರು.



ನಾಮಫಲಕವನ್ನು ದಸಂಸ ಹಿರಿಯ ಹೋರಾಟಗಾರ ಬಿ.ಡಿ.ಶಿವಬುದ್ಧಿ ಅನಾವರಣಗೊಳಿಸಿದರು.

ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಶಂಭುಲಿಂಗಸ್ವಾಮಿ ಮಾತನಾಡಿ, ಸ್ವಾರ್ಥದ ಜೀವನ ನಡೆಸುವ ಇಂದಿನ ದಿನಗಳಲ್ಲಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ನಿಸ್ವಾರ್ಥದಿಂದ ಬಡವರು, ಅಲೆಮಾರಿಗಳ ಪರ ಹೋರಾಟ ಮಾಡಿ ಅವರಿಗೆ ನಿವೇಶನ, ಮನೆ ಮತ್ತು ಮೂಲ ಸೌಲಭ್ಯಗಳು ದೊರೆಯುವಂತೆ ಮಾಡುತ್ತಿರುವುದು ಉತ್ತಮ ಸಾಮಾಜಿಕ ಕೆಲಸವಾಗಿದೆ. ಬಡವರ ಪರವಾದ ಕಳಕಳಿ ಬಿಂಬಿಸುತ್ತದೆ ಎಂದರು.

ಇದೇ ವೇಳೆ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಅವರನ್ನು ಅಲೆಮಾರಿ ಕುಟುಂಬಸ್ಥರು ಪೇಟ, ಶಾಲು ಹೊದಿಸಿ ಸನ್ಮಾನಿಸಿದರು. ದಸಂಸ ತಾಲೂಕು ಸಂಚಾಲಕ ಕುಕ್ಕೂರು ರಾಜು, ಮುಖಂಡರಾದ ಕಿರಗಸೂರು ರಜನಿ, ಶಿವು, ಬನ್ನಹಳ್ಳಿಹುಂಡಿ ಉಮೇಶ್, ನಾಗರಾಜ್ ಮೂರ್ತಿ, ಕರೋಹಟ್ಟಿ ನಾಗೇಶ್, ವಾಟಾಳ್ ಕೃಷ್ಣ, ಬಿಲಿಗೆರೆಹುಂಡಿ ಎಂ.ಶಿವಕುಮಾರ್, ಶ್ರೀನಿವಾಸ್, ಸಿದ್ದರಾಜು, ಮುತ್ತತ್ತಿ ನಾಗರಾಜು, ಎಂ.ಬಿ.ಲಿಂಗರಾಜು, ಶಾಂತಕುಮಾರ್, ಮುತ್ತು, ಕೊರಚರ ಮುಖಂಡರಾದ ರಾಜು, ವೆಂಕಟೇಶ್, ಮಂಜು, ಮಾರಪ್ಪ, ಸುರೇಶ್, ಗಾಳಿಯಪ್ಪ ಹಾಗೂ ಇತರರಿದ್ದರು.

ಆಂಗ್ಲ ಭಾಷೆ ವ್ಯಾಮೋಹದಿಂದ ಭಾರತೀಯ ಭಾಷೆಗಳಿಗೆ ಕಂಟಕ

• ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಆತಂಕ • 'ಸಂಸ್ಕೃತ ಕಾವೇರಿ' ಪ್ರಾಂತ ಸಮ್ಮೇಳನಕ್ಕೆ ಚಾಲನೆ

ಮೈಸೂರು, ಫೆ.1(ಎಂಟಿವೈ)– ಆಂಗ್ಲ ಭಾಷೆಯ ವ್ಯಾಮೋಹದಿಂದ ಮುಂಬರುವ ದಿನಗಳಲ್ಲಿ ಕನ್ನಡ ಸೇರಿದಂತೆ ಇನ್ನಿತರ ಭಾರತೀಯ ಭಾಷೆಗಳು ಸಂಕಷ್ಟಕ್ಕೆ ತುತ್ತಾಗುವ ಸಾಧ್ಯತೆಯಿರುವ ಸಂದರ್ಭದಲ್ಲಿ ಸಂಸ್ಕೃತವನ್ನು ಒಂದು ವರ್ಗಕ್ಕೆ ಸೀಮಿತಗೊಳಿಸುತ್ತಿರುವುದು ಸರಿಯಲ್ಲ ಎಂದು ಮೇಘಾಲಯದ ರಾಜ್ಯಪಾಲ ಸಿ.ಹೆಚ್. ವಿಜಯಶಂಕರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಸಂಸ್ಕೃತ ಭಾರತಿ ಕರ್ನಾಟಕ ದಕ್ಷಿಣ ಸಂಸ್ಥೆ ಶನಿವಾರ ಆಯೋಜಿಸಿದ್ದ 'ಸಂಸ್ಕೃತ ಕಾವೇರಿ' ಪ್ರಾಂತ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲ ವರ್ಗದವರಿಗೂ ಅನ್ವಯಿಸುವ ಭಾಷೆಯಾಗಿದೆ. ಆದರೆ, ಕೆಲವರು ಸಂಸ್ಕೃತ ಭಾಷೆಯನ್ನು ಒಂದೇ ವರ್ಗಕ್ಕೆ ಸೀಮಿತಗೊಳಿಸುತ್ತಿರುವುದು ವಿಷಾದನೀಯ. ಕವಿರತ್ನ ಕಾಳಿದಾಸ, ವ್ಯಾಸ, ವಾಲ್ಮೀಕಿ ಮೇಲ್ವರ್ಗಕ್ಕೆ ಸೇರಿದವರಲ್ಲ. ರಾಮಾಯಣ, ಮಹಾಭಾರತ ಕಾವ್ಯಗಳನ್ನು ಸಂಸ್ಕೃತದಲ್ಲಿ ರಚಿಸಿ ಸಂಸ್ಕೃತವನ್ನು ಉತ್ತುಂಗಕ್ಕೆ ಕೊಂಡೊಯ್ದಿದ್ದಾರೆ ಎಂದು ತಿಳಿಸಿದರು.



ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಸಂಸ್ಕೃತ ಭಾರತಿ ಕರ್ನಾಟಕ ದಕ್ಷಿಣ ಸಂಸ್ಥೆ ಶನಿವಾರ ಆಯೋಜಿಸಿದ್ದ 'ಸಂಸ್ಕೃತ ಕಾವೇರಿ' ಪ್ರಾಂತಸಮ್ಮೇಳನವನ್ನು ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಉದ್ಘಾಟಿಸಿದರು.

ಸಂಸ್ಕೃತದ ಬಗ್ಗೆ ಇರುವ ಕೆಲವು ಗೊಂದಲಗಳನ್ನು ನಿವಾರಿಸುವ ನಿಟ್ಟಿನಲ್ಲಿ ಈ ಸಮ್ಮೇಳನ ಪ್ರಮುಖ ಪಾತ್ರ ವಹಿಸುತ್ತದೆ. ಇಂಗ್ಲೀಷಿನ ವ್ಯಾಮೋಹದಿಂದ ಮುಂಬರುವ ದಿನಗಳಲ್ಲಿ ಕನ್ನಡ ಸೇರಿದಂತೆ ಭಾರತೀಯ ಭಾಷೆಗಳು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಹೆಚ್ಚಾಗಿದೆ. ಆದ್ದರಿಂದ ನಮ್ಮ ಸಂಸ್ಕೃತಿಯ ಮೂಲವಾದ ಸಂಸ್ಕೃತವನ್ನು ಬೆಳೆಸಿದಾಗ ಮಾತ್ರ ಉಳಿದ ಎಲ್ಲ ರಂಗಗಳಲ್ಲೂ ಭಾರತೀಯತೆಯನ್ನು ಉಳಿಸಿಕೊಳ್ಳಲು ಸಾಧ್ಯ ಎಂದು ತಿಳಿಸಿದರು.

ಇದೇ ವೇಳೆ ದೆಹಲಿಯ ಸಂಸ್ಕೃತ ಭಾರತೀಯ ಅಖಿಲ ಭಾರತೀಯ ಸಂಘಟನ ಮಂತ್ರಿ ಜಯಪ್ರಹಾಶ್ ಗೌತಮ್ ಮಾತನಾಡಿ, ಸಂಸ್ಕೃತ ಭಾಷೆ ಹಲವು ಭಾರತೀಯ ಭಾಷೆಗಳ ಜನನಕ್ಕೆ ಕಾರಣ. ಸಂಸ್ಕೃತ ಮತ್ತು ಸಂಸ್ಕೃತಿ ಭಾರತದ ಪ್ರತಿಷ್ಠೆಗಳೆನಿಸಿವೆ. ಸಂಸ್ಕೃತವು ಕಠಿಣ, ಸಂಸ್ಕೃತ ಒಂದು ವರ್ಗಕ್ಕೆ ಮಾತ್ರ ಸೀಮಿತ, ಸಂಸ್ಕೃತದಲ್ಲಿ ದೋಷವಾದರೆ ಪಾಪ ಸುತ್ತಿಕೊಳ್ಳುತ್ತದೆ ಎನ್ನುವ ನಕಾರಾತ್ಮಕ ವಿಚಾರಗಳನ್ನು ಸಂಸ್ಕೃತ ಭಾರತಿ ಸಂಸ್ಥೆ ನಿರ್ಮೂಲನ ಮಾಡಿ ಸಕಾರಾತ್ಮಕ ಅಂಶಗಳನ್ನು ಸಮಾಜಕ್ಕೆ ತಲುಪಿಸುವ ಕೆಲಸ ಮಾಡುತ್ತಿದೆ. ವಿಶ್ವದ 30 ದೇಶಗಳಲ್ಲಿ ಸಂಸ್ಕೃತ ಭಾರತಿ ಕಾರ್ಯ ನಿರ್ವಹಿಸುತ್ತಿದೆ. ಸಂಸ್ಕೃತದ ಸಂರಕ್ಷಣೆಗಾಗಿ ಪ್ರತಿದಿನ ಕೆಲ ಸಮಯವನ್ನಾದರೂ ಮೀಸಲಿಡುವ ಸಂಕಲ್ಪ ಮಾಡಬೇಕು ಎಂದರು.

ಸಮ್ಮೇಳನದ ಸಾನ್ನಿಧ್ಯ ವಹಿಸಿದ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದ ಜೀ ಮಹಾರಾಜ್ ಮಾತನಾಡಿ, ಸಂಸ್ಕೃತವು ಆಡುಭಾಷೆಯಾಗಿ ಪ್ರಚಲಿತವಾಗದಿದ್ದರೂ, ಸಂಸ್ಕೃತದಿಂದ ಹುಟ್ಟಿದ ಹತ್ತಾರು ಭಾಷೆಗಳಲ್ಲಿ ಸಂಸ್ಕೃತದ ಛಾಪನ್ನು ಕಾಣಲು ಸಾಧ್ಯವಾಗಿದೆ. ಭಾರತೀಯರು ಸಂಸ್ಕೃತವನ್ನು ಅಭ್ಯಾಸ ಮಾಡಿದರೆ ಸಂಸ್ಕೃತಿಯು ಪ್ರವರ್ಧಮಾನಕ್ಕೆ ಬಂದು ಭಾರತಕ್ಕೆ ಜಗತ್ತಿನಲ್ಲಿ ಹೆಚ್ಚಿನ ಮಾನ್ಯತೆ ದೊರೆಯಲಿದೆ. ವಿದೇಶಿಗರು ಇಸ್ರೇಲ್ ದೇಶಕ್ಕೆ ಹೋದರೆ ಹಿಬ್ರೂ ಭಾಷೆಯನ್ನು ಕಲಿಸಿಯೇ ಅವರಿಗೆ ದೇಶದಲ್ಲಿ ಉಳಿಯುವ ಅವಕಾಶ ನೀಡುತ್ತಿದೆ. ಭಾರತೀಯ ಪ್ರಜ್ಞೆಯು ಸಂಸ್ಕೃತದ ಮೂಲಕ ಸಹಸ್ರಾರು ವರ್ಷಗಳಲ್ಲಿ ತನ್ನ ಹಿರಿಮೆಯನ್ನು ಮೆರೆದಿದೆ. ಎಲ್ಲ ಭಾರತೀಯರೂ ಸಂಸ್ಕೃತದ ಕಾರ್ಯದೊಂದಿಗೆ ಕೈಜೋಡಿಸಬೇಕು ಎಂದರು.

ಸಮ್ಮೇಳನದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ ಸಂಸ್ಕೃತ ಭಾರತಿ ಕರ್ನಾಟಕ ದಕ್ಷಿಣ ಸಂಸ್ಥೆಯ ಅಧ್ಯಕ್ಷ ಪ್ರೊ.ಪ.ನಾ.ಶಾಸ್ತ್ರೀ, ಸಮ್ಮೇಳನ ಸ್ವಾಗತ ಸಮಿತಿ ಕಾರ್ಯದರ್ಶಿ ಅ.ಮ.ಭಾಸ್ಕರ, ಸಂಚಾಲಕ ಡಾ.ರುಕ್ಮಾಂಗ ಆರ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮದಗಜರಾಜ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಾರ್ಕೋ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬೇಗೂರು ಕಾಲೋನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ದೇವ (ಹಿಂ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ಗಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮದಗಜರಾಜ (ತ)	4 ಪ್ರದರ್ಶನಗಳು
ಪ್ರಭಾ	
ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರಾಯಲ್ (ಕ): ಬೆ.10.15ಕ್ಕೆ, ಮ.1.15ಕ್ಕೆ, ರಾ.7.15ಕ್ಕೆ, ಎಮರ್ಜೆನ್ಸಿ (ಹಿಂ): ಸಂ.4.15ಕ್ಕೆ, ಭೂ ಮಂತರ್ (ಕ): ರಾ.10.10ಕ್ಕೆ.
ಸ್ಕ್ರೀನ್ 2	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.10.35ಕ್ಕೆ, ಕುಟುಂಬಸ್ಥನ್ (ತ): ಮ.1ಕ್ಕೆ, ಸಂಕ್ರಾಂತಿಕಿ ವಸ್ತುನಾಂ (ತೆ): ಸಂ.4.05ಕ್ಕೆ, ಭೂ ಮಂತರ್ (ಕ): ರಾ.7.05ಕ್ಕೆ, ಟ್ವೈಲೈಟ್ ಆಫ್ ದಿ ವಾರಿಯರ್ಸ್ ವಾಲ್ಡ್ ಇನ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.10.25ಕ್ಕೆ, ಮಿ. ಹೌಸ್‌ಕೀಪಿಂಗ್ (ತ): ಮ.1.05ಕ್ಕೆ, ರಾಮಾಯಣ ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ (ಹಿಂ): ಸಂ.4.10ಕ್ಕೆ, ರುದ್ರ ಗರುಡ ಪುರಾಣ (ಕ): ರಾ.7.05ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.20ಕ್ಕೆ, ಮ್ಯಾಕ್ಸ್ (ಕ): ಮ.1.20ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕುಂಭಮೇಳದಲ್ಲಿ ನಟ ಪ್ರಕಾಶ್ ರಾಜ್ ಸ್ನಾನ ಫೋಟೋ ವೈರಲ್!

ಮೈಸೂರಲ್ಲಿ ಬಿಗ್‌ಬಾಸ್ ಸ್ಪರ್ಧಿ ಪ್ರಶಾಂತ್ ಸಂಬರಗಿ ವಿರುದ್ಧ ಪ್ರಕರಣ ದಾಖಲು



ಮೈಸೂರಿನ ಲಕ್ಷ್ಮೀಪುರಂ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ರವಿಶಂಕರ್ ಅವರಿಗೆ ಬಹುಭಾಷಾ ನಟ ಪ್ರಕಾಶ್ ರಾಜ್ ದೂರು ನೀಡಿದರು.

ಮೈಸೂರು, ಫೆ.1(ಆರ್‌ಕೆ)– ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭ ಮೇಳದಲ್ಲಿ ಬಹುಭಾಷಾ ನಟ ಪ್ರಕಾಶ್ ರಾಜ್ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡುತ್ತಿರುವಂತೆ ಫೋಟೋ ವೈರಲ್ ಮಾಡಿದ ಆರೋಪದ ಮೇಲೆ ಬಿಗ್‌ಬಾಸ್ ಸ್ಪರ್ಧಿ ಹಾಗೂ ಸಾಮಾಜಿಕ ಕಾರ್ಯಕರ್ತ ಪ್ರಶಾಂತ್ ಸಂಬರಗಿ ವಿರುದ್ಧ ಮೈಸೂರಿನ ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಬೆಳಗ್ಗೆ ಪ್ರಕಾಶ್ ರಾಜ್, ಎಐ ಕ್ಯಾಮರಾ ಬಳಸಿ ನಾನು ಕುಂಭಮೇಳದಲ್ಲಿ ಸ್ನಾನ ಮಾಡುತ್ತಿರುವಂತೆ ಫೋಟೋ ವೈರಲ್ ಮಾಡಿರುವ ಪ್ರಶಾಂತ್ ಸಂಬರಗಿ ವಿರುದ್ಧ ಪ್ರಕರಣ ದಾಖಲಿಸುವಂತೆ ದೂರು ನೀಡಿದರು. ಈ ಹಿನ್ನೆಲೆಯಲ್ಲಿ ಲಕ್ಷ್ಮೀಪುರಂ ಠಾಣೆ ಇನ್‌ಸ್ಪೆಕ್ಟರ್ ರವಿಶಂಕರ್ ಎಫ್‌ಐಆರ್ ದಾಖಲಿಸಿದ್ದಾರೆ.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಕಾಶ್‌ರಾಜ್, ಮಹಾಕುಂಭ ಮೇಳದಲ್ಲಿ ಪುಣ್ಯಸ್ನಾನ ನಡೆಯುತ್ತಿದ್ದು, ಹಿಂದೂ ಧರ್ಮ ಮತ್ತು ದೇವರನ್ನು ನಂಬಿದವರು ಅಲ್ಲಿಗೆ ತೆರಳಿ ಸ್ನಾನ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸ್ನಾನ ಮಾಡುತ್ತಿರುವ ರೀತಿ ಬಿಂಬಿಸಿ ನನ್ನ ಫೋಟೋ ವೈರಲ್ ಮಾಡುವ ಮೂಲಕ ರಾಜಕಾರಣ ಮಾಡಲಾಗುತ್ತಿದೆ. ಹಿಂದಿನಿಂದಲೂ ಪ್ರಕಾಶ್ ರಾಜ್ ಹಿಂದೂ ವಿರೋಧಿ ಎಂದು ಸುಳ್ಳು ಸುದ್ದಿಯನ್ನು ಹಬ್ಬಿಸಿಕೊಂಡು ಬರಲಾಗಿದೆ ಎಂದರು.

ಈ ಕೃತ್ಯ ವೆಸಗಿರುವ ಪ್ರಶಾಂತ್ ಸಂಬರಗಿ ಪ್ರಖ್ಯಾತರೋ, ಕುಖ್ಯಾತರೋ ಗೊತ್ತಿಲ್ಲ. ಆದರೆ ದೇಶದಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸುವುದು ಅಭ್ಯಾಸವಾಗಿಬಿಟ್ಟಿದೆ. ಆ ಮೂಲಕ ದ್ವೇಷ ಹರಡುತ್ತಿದ್ದಾರೆ. ಜನರ ನಂಬಿಕೆಗೆ ಚ್ಯುತಿ ಉಂಟು ಮಾಡಿದ್ದಾರೆ. ಅದಕ್ಕಾಗಿ ನಾನು ಪ್ರಶಾಂತ್ ಸಂಬರಗಿ ವಿರುದ್ಧ ದೂರು ನೀಡಿ ಎಫ್‌ಐಆರ್ ದಾಖಲು ಮಾಡಿಸಿದ್ದೇನೆ. ಪೊಲೀಸರು ಈ ಸಂಬಂಧ ತನಿಖೆ ನಡೆಸಿ ಸತ್ಯಾಸತ್ಯತೆಯನ್ನು ಎಲ್ಲರಿಗೂ ತಿಳಿಸಬೇಕು ಎಂದ ಪ್ರಕಾಶ್‌ರಾಜ್, ಈ ರೀತಿ ಸಂಬರಗಿ ಅವರು ಸಾಕಷ್ಟು ಮಂದಿಗೆ ತೊಂದರೆ ಕೊಟ್ಟಿದ್ದಾರೆ. ಅವರಿಗೆ ಪಾಠ ಕಲಿಸಲೇಬೇಕು. ಅನುಮತಿ ಇಲ್ಲದೆ ನನ್ನ ಫೋಟೋಗಳನ್ನು ಬಳಸಿ ನನಗೆ ಘಾಸಿ ಉಂಟು ಮಾಡಿದ್ದಾರೆ ಎಂದರು.

ಕುಂಭಮೇಳದಲ್ಲಿ ಸ್ನಾನ ಮಾಡುವುದು ತಪ್ಪೇನಿಲ್ಲ. ಅದು ಅವರವರ ನಂಬಿಕೆ. ನಾನು ಮನುಷ್ಯರಲ್ಲಿ ನಂಬಿಕೆ ಇಟ್ಟವನು. ದೇವರಿಲ್ಲದೆ ಬದುಕಬಹುದು. ಆದರೆ ಮನುಷ್ಯರಿಲ್ಲದೆ ಬದುಕಲು ಸಾಧ್ಯವಿಲ್ಲ. ಹಾಗೆಂದ ಮಾತ್ರಕ್ಕೆ ಅವರವರ ನಂಬಿಕೆಯನ್ನು ನಾನು ಪ್ರಶ್ನಿಸುವುದಿಲ್ಲ. ಆದರೆ ಅದನ್ನು ರಾಜಕಾರಣಕ್ಕೆ ಬಳಸಿಕೊಳ್ಳುತ್ತಿರುವುದು ತಪ್ಪು. ನಾನು ಯಾರ ಬಗ್ಗೆಯೂ ಮಾತನಾಡುವುದಿಲ್ಲ. ಯಾರ ಬಗ್ಗೆಯೂ ಟೀಕೆ ಮಾಡುವುದಿಲ್ಲ. ನನ್ನ ಹೆಂಡತಿ, ಮಗಳು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡುತ್ತಾರೆ. ಆದರೆ ನಾವು ಸಾಮರಸ್ಯದಿಂದಿದ್ದೇವೆ. ಮೂಢನಂಬಿಕೆಗಳನ್ನು ಮಾತ್ರ ಪ್ರಶ್ನಿಸುತ್ತೇನೆ ಎಂದು ತಿಳಿಸಿದರು.

ಸಚಿವರ ವೇತನಕ್ಕೆ ಬಜೆಟ್‌ನಲ್ಲಿ 1,024 ಕೋಟಿ ರೂ. ಹಂಚಿಕೆ

ನವದೆಹಲಿ, ಫೆ.1– 2025–26ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಸಚಿವರ ವೇತನಕ್ಕಾಗಿ 1,024 ಕೋಟಿ ಹಣವನ್ನು ಹಂಚಿಕೆ ಮಾಡಲಾಗಿದೆ.



ಶನಿವಾರ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಬಜೆಟ್‌ನಲ್ಲಿ, ಸಚಿವ ಸಂಪುಟ, ಸಂಪುಟ ಸಚಿವಾಲಯ, ಪ್ರಧಾನ ಮಂತ್ರಿ ಕಚೇರಿಯ ವೆಚ್ಚಗಳು, ರಾಜ್ಯದ ಅತಿಥಿಗಳ ಆತಿಥ್ಯ ಮತ್ತು ಮನರಂಜನೆಗಾಗಿ 1,024.30 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ ಎಂದು ತಿಳಿಸಿದ್ದಾರೆ.

2024–25 ರಲ್ಲಿ 1,021.83 ಕೋಟಿ ರೂ. ಮೀಸಲಿಡಲಾಗಿತ್ತು. ಆ ಮೊತ್ತದಲ್ಲಿ ಈ ಬಾರಿ ಹೆಚ್ಚಳ ಆಗಿದೆ. ಮುಂಬರುವ ಹಣಕಾಸು ವರ್ಷದಲ್ಲಿ ಸಚಿವ ಸಂಪುಟದ ವೆಚ್ಚಗಳಿಗಾಗಿ ಒಟ್ಟು 619.04 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. 2024–25ರಲ್ಲಿ ಇದು 540.95 ಕೋಟಿ ರೂಗಳಷ್ಟಿತ್ತು ಎಂದು ಹೇಳಿದ್ದಾರೆ.

ಸಂಪುಟ ಸಚಿವರು, ರಾಜ್ಯ ಸಚಿವರು ಮತ್ತು ಮಾಜಿ ಪ್ರಧಾನ ಮಂತ್ರಿಗಳ ಸಂಬಳ, ಇತರ ಭತ್ಯೆಗಳು ಮತ್ತು ಪ್ರಯಾಣದ ವೆಚ್ಚಕ್ಕಾಗಿ ಹಣ ಮೀಸಲಿಡಲಾಗಿದೆ ಇದು ವಿವಿಐಪಿಗಳಿಗಾಗಿ ವಿಶೇಷ ಹೆಚ್ಚುವರಿ ಅವಧಿ ವಿಮಾನ ಕಾರ್ಯಾಚರಣೆಗಳ ನಿಬಂಧನೆಯನ್ನು ಸಹ ಒಳಗೊಂಡಿದೆ.

ವಿಮಾ ವಲಯದಲ್ಲಿ ಎಫ್‌ಡಿಐ ಮಿತಿ ಶೇ.74 ರಿಂದ ಶೇ.100ಕ್ಕೆ ಹೆಚ್ಚಳ


ನವದೆಹಲಿ, ಫೆ1– ವಿಮಾ ವಲಯದಲ್ಲಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಮಿತಿ ಶೇ74 ರಿಂದ ಶೇ 100ಕ್ಕೆ ಹೆಚ್ಚಳ ಮಾಡಲಾಗುತ್ತಿದೆ. ಈ ಹೆಚ್ಚಳದ ಮಿತಿಯು ಸಂಪೂರ್ಣ ಪ್ರೀಮಿಯಂ ಭಾರತದಲ್ಲಿ ಹೂಡಿಕೆ ಮಾಡುವ ಕಂಪನಿಗಳಿಗೆ ಲಭ್ಯವಿರುತ್ತದೆ. ವಿದೇಶಿ ಹೂಡಿಕೆಗೆ ಸಂಬಂಧಿಸಿದ ಷರತ್ತುಗಳನ್ನು ಪರಿಶೀಲಿಸಲಾಗುತ್ತದೆ ಮತ್ತು ಸರಳಗೊಳಿಸಲಾಗುತ್ತದೆ ಎಂದು ವಿತ್ತ ಸಚಿವರು ಹೇಳಿದರು.

ಕೆವೈಸಿ ಸರಳೀಕರಣ: 2025ರಲ್ಲಿ ನವೀಕರಿಸಿದ ಕೇಂದ್ರೀಯ ಕೆವೈಸಿ ನೋಂದಣಿ ಯೋಜನೆ ಜಾರಿಗೊಳಿಸ ಲಾಗುವುದು, ನಿಯಮಿತವಾಗಿ ನವೀಕರಣಕ್ಕಾಗಿ ಸುವ್ಯವಸ್ಥಿತವಾದ ವ್ಯವಸ್ಥೆಯನ್ನು ಸಹ ಜಾರಿಗೆ ತರಲಾಗುವುದು ಎಂದು ಅವರು ತಿಳಿಸಿದರು.

ಕಂಪೆನಿಗಳ ವಿಲೀನ: ಕಂಪನಿ ವಿಲೀನ ಪ್ರಕ್ರಿಯೆಗಳಿಗೆ ತ್ವರಿತ ಅನುಮೋದನೆ ನೀಡುವ ಕಾರ್ಯವಿಧಾನಗಳನ್ನು ತರ್ಕಬದ್ಧಗೊಳಿಸುವ ಪ್ರಕ್ರಿಯೆಯನ್ನು ಸರಳಗೊಳಿಸಲಾಗುವುದು. ತ್ವರಿತ ವಿಲೀನಗಳ ವ್ಯಾಪ್ತಿಯನ್ನು ವಿಸ್ತರಿಸಲಾಗುವುದು ಮತ್ತು ಪ್ರಕ್ರಿಯೆಯನ್ನು ಸರಳಗೊಳಿಸಲಾಗುವುದು ಎಂದು ಸಚಿವರು ಮಾಹಿತಿ ನೀಡಿದರು.

ದ್ವಿಪಕ್ಷೀಯ ಹೂಡಿಕೆ ಒಪ್ಪಂದಗಳು: ಸುಸ್ಥಿರ ವಿದೇಶಿ ಹೂಡಿಕೆಯನ್ನು ಉತ್ತೇಜಿಸಲು ಮತ್ತು 'ಭಾರತದ ಅಭಿವೃದ್ಧಿ ಮೊದಲು' ಸ್ಫೂರ್ತಿಯಡಿ ಪ್ರಸ್ತುತ ಮಾದರಿ ದ್ವಿಪಕ್ಷೀಯ ಹೂಡಿಕೆ ಒಪ್ಪಂದಗಳನ್ನು ಪುನರುಜ್ಜೀವನಗೊಳಿಸಲಾಗುವುದು ಮತ್ತು ಹೆಚ್ಚು ಹೂಡಿಕೆ ಸ್ನೇಹಿಯನ್ನಾಗಿ ರೂಪಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವರು ಹೇಳಿದರು.

ಎಂ.ಜಿ. ಕೊಪ್ಪಲು ಕೃಷ್ಣರಿಗೆ ಶ್ರದ್ಧಾಂಜಲಿ



ಮೈಸೂರಿನ ಎಂ.ಜಿ.ಕೊಪ್ಪಲು ಕೃಷ್ಣ ಅವರ 11ನೇ ದಿನದ ಉತ್ತರ ಕ್ರಿಯಾದಿ ಕಾರ್ಯವನ್ನು ಕಲ್ಯಾಣ ಹೋಟೆಲ್ ಹಿಂಭಾಗ ನೆರವೇರಿಸಲಾಯಿತು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ಮುಖಂಡರಾದ ಡೆಲ್ಲಿ ರವಿ, ಪುನೀತ್, ಕಾಂತರಾಜ್ ಗೌಡ, ಯಜಮಾನ್ ಕರಿಯಪ್ಪ, ಮೂರ್ತಿ, ಲೋಕಿ, ಸೋಮು, ಗೋಪಿ ಇದ್ದರು.

ನಾಳೆಯಿಂದ ಫೆ.10ರವರೆಗೆ ನಿಷೇಧಾಜ್ಞೆ ಜಾರಿ

ಮೈಸೂರು: ಫೆ.3ರಿಂದ 10ರವರೆಗೆ ಗಣಕಯಂತ್ರ ಶಿಕ್ಷಣ ಪರೀಕ್ಷೆ ನಡೆಯಲ್ಲಿದ್ದು, ಸದರಿ ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಫೆ.3ರಂದು ಆದರ್ಶ ವಿದ್ಯಾಲಯ, ಜಾಕಿ ಕ್ವಾರ್ಟರ್ಸ್ ಹಾಗೂ ಫೆ.4ರಿಂದ 10ರವರೆಗೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಡಯಟ್, ವಸಂತಮಹಲ್‌ನಲ್ಲಿ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಸುತ್ತಲೂ 200 ಮೀಟರ್ ವ್ಯಾಪ್ತಿಯ ನಿಷೇಧಾಜ್ಞೆಯನ್ನು ಜಾರಿ ಮಾಡಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಮೈಸೂರಿಗೆ ತೆರಳಲು ನಟ ದರ್ಶನ್‌ಗೆ ಕೋರ್ಟ್ ಅನುಮತಿ

ಮೈಸೂರು, ಫೆ.1(ಆರ್‌ಕೆ)– ರೇಣುಕಾ ಸ್ವಾಮಿ ಹತ್ಯೆ ಪ್ರಕರಣದ ಆರೋಪಿಯಾಗಿರುವ ನಟ ದರ್ಶನ್ ಜನವರಿ 28ರಿಂದ ಫೆಬ್ರವರಿ 10ರವರೆಗೆ ಮೈಸೂರಿಗೆ ತೆರಳಲು ಬೆಂಗಳೂರಿನ 57ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ಅನುಮತಿ ನೀಡಿದೆ. ಜಾಮೀನಿನ ಮೇಲೆ ಬಿಡುಗಡೆಯಾಗಿರುವ ದರ್ಶನ್, ಜ.24



ರಿಂದ ಫೆ.24ರವರೆಗೆ ಮೈಸೂರು, ಧರ್ಮಸ್ಥಳ, ದಕ್ಷಿಣ ಕನ್ನಡ ಜಿಲ್ಲೆಗಳಿಗೆ ತೆರಳಲು ಅನುಮತಿ ನೀಡುವಂತೆ ಅವರ ಪರ ವಕೀಲರು ನ್ಯಾಯಾಲಯಕ್ಕೆ ಪ್ರತ್ಯೇಕ ಅರ್ಜಿ ಸಲ್ಲಿಸಿ ಮನವಿ ಮಾಡಿಕೊಂಡಿದ್ದರು.

ಮೈಸೂರಲ್ಲಿ ಮಡಿವಾಳ ಮಾಚಿದೇವರ ಜಯಂತಿ ಭಕ್ತಿಭಾವದ ಆಚರಣೆ





ಮಡಿವಾಳ ಮಾಚಿದೇವರ ಜಯಂತಿ ಅಂಗವಾಗಿ ನಡೆದ ಮೆರವಣಿಗೆಗೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ಪಾಲ್ಗೊಂಡಿರುವ ಜನಪದ ಕಲಾತಂಡಗಳನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಫೆ.1(ಎಂಟಿವೈ)–ಮಡಿವಾಳ ಮಾಚಿದೇವರ ಜಯಂತಿ ಮಹೋತ್ಸವವನ್ನು ಜಿಲ್ಲಾಡಳಿತದ ವತಿಯಿಂದ ವಿಜೃಂಭಣೆಯಿಂದ ಆಚರಿಸಲಾಯಿತು. ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ಮಡಿವಾಳ ಮಾಚಿದೇವರ ಜಯಂತ್ಯುತ್ಸವ ಆಚರಣಾ ಸಮಿತಿ ವತಿಯಿಂದ ಶನಿವಾರ ಮೈಸೂರಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಮಡಿವಾಳ ಸಮುದಾಯ ಜನ ಪಾಲ್ಗೊಂಡು ಮಾಚಿದೇವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಕಾರ್ಯಕ್ರಮದ ಅಂಗವಾಗಿ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಆಯೋಜಿಸಿದ್ದ ಮಡಿವಾಳ ಮಾಚಿದೇವರ ಭಾವಚಿತ್ರದ ಮೆರವಣಿಗೆಗೆ ಶಾಸಕ ಜಿ.ಟಿ.ದೇವೇಗೌಡ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಂ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಅಲಂಕೃತ ವಾಹನದಲ್ಲಿ ಮಡಿವಾಳ ಮಾಚಿದೇವರ ಭಾವಚಿತ್ರವನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಕಂಸಾಳೆ, ವೀರಗಾಸೆ, ಬೊಂಬೆ ಕುಣಿತ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಕಳಸ ಹೊತ್ತ ಮಹಿಳೆಯರು ಮೆರವಣಿಗೆಸಾಗಿ ಗಮನಸೆಳೆದರು. ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆಯಲ್ಲಿ ಸಾಗಿದ ಮೆರವಣಿಗೆ ಕಲಾಮಂದಿರ ತಲುಪಿತು.

ಸಭಾ ಕಾರ್ಯಕ್ರಮ: ಕಲಾಮಂದಿರದಲ್ಲಿ ಆಯೋಜಿಸಿದ್ದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಇದೇ ವೇಳೆ ಮಡಿವಾಳ ಮಾಚಿದೇವರ ಕುರಿತು ಆಯೋಜಿಸಿದ್ದ ಉಪನ್ಯಾಸದಲ್ಲಿ ಯುವ ಸಾಹಿತಿ ವಿ.ಶ್ರೀಧರ್ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ನಮ್ಮ ಸಮುದಾಯದಲ್ಲಿ ಸಾಕಷ್ಟು ಜನರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ಸಾಧ್ಯವಾಗುತ್ತಿಲ್ಲ. ಆದರೆ, ಮಡಿವಾಳ ಮಾಚಿದೇವರು 12ನೇ ಶತಮಾನದಲ್ಲಿಯೇ ಮಕ್ಕಳಿಗೆ ಶಿಕ್ಷಣವನ್ನು ಕೊಡಬೇಕು ಎಂಬುದನ್ನು ತಿಳಿಸಿಕೊಟ್ಟು, ಶಿಕ್ಷಣ ಕ್ರಾಂತಿ ಮಾಡಿದರು. ಮಾಚಿದೇವರು ಸಕಲ ವಿದ್ಯಾ ಪಾರಂಗತರಾಗುತ್ತಾರೆ. ಸಕಲ ವಿದ್ಯೆಯನ್ನು ಕಲಿತು ಪರಿಪಕ್ವವಾಗಿ ತಮ್ಮನ್ನು ತಾವು ರೂಪಿಸಿಕೊಂಡರು. ಈ ನಿಟ್ಟಿನಲ್ಲಿ ಎಲ್ಲರೂ ಮಕ್ಕಳಿಗೆ ಕೊಡಿಸಲು ಸಮುದಾಯ ಮುಂದಾಗಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮಡಿವಾಳ ಮಾಚಿದೇವರ ಜಯಂತ್ಯುತ್ಸವ ಆಚರಣ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಲಾರಿ ಹೋಟೆಲ್‌ನಲ್ಲಿ ಬೆಣ್ಣೆ ದೋಸೆ ಸವಿದ ಸಿದ್ದರಾಮಯ್ಯ



ಮೈಸೂರಿನ ಅಗ್ರಹಾರದ ಮೈಲಾರಿ ಹೋಟೆಲ್‌ನಲ್ಲಿ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಣ್ಣೆ ದೋಸೆ ಸವಿದರು. ಈ ವೇಳೆ ಮಾಜಿ ಎಂಎಲ್ಸಿ ಸಂದೇಶ್ ನಾಗರಾಜ್, ಎಂಎಲ್ಸಿ ಡಾ.ತಿಮ್ಮಯ್ಯ ಇತರರಿದ್ದಾರೆ.

ಮೈಸೂರು, ಫೆ.1(ಬಿಎಲ್‌ಯು)– ಮೈಸೂರಿನ ಅಗ್ರಹಾರದ ನ್ಯೂ ಸಯ್ಯಾಜಿ ರಾವ್ ರಸ್ತೆಯ ಮೈಲಾರಿ ಹೋಟೆಲ್ ನಲ್ಲಿ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಣ್ಣೆ ದೋಸೆ ಸವಿದರು. ಸಾಮಾನ್ಯವಾಗಿ ಮೈಸೂರಿಗೆ ಬಂದಾಗಲೆಲ್ಲಾ ಸಿದ್ದರಾಮಯ್ಯ ಆಪ್ತರೊಂದಿಗೆ ಮೈಲಾರಿ ಹೋಟೆಲ್‌ಗೆ ಹೋಗಿ ದೋಸೆ ಸವಿಯುತ್ತಾರೆ.

ಅದರಂತೆ ಇಂದು ಪುತ್ರ ಡಾ.ಯತೀಂದ್ರ, ಶಾಸಕ ಎ.ಆರ್.ಕೃಷ್ಣಮೂರ್ತಿ ಜೊತೆ ಮೈಲಾರಿ ಹೋಟೆಲ್‌ಗೆ ಹೋಗಿ ಮಸಾಲೆ ದೋಸೆ ಸವಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಸಂದೇಶ್ ನಾಗರಾಜ್ ಸಹ ಜೊತೆಯಾದರು.

ಇದಕ್ಕೂ ಮೊದಲು ನಗರದ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ದಿವಂಗತ ಮಾಜಿ ರಾಜ್ಯಪಾಲ ರಾಚಯ್ಯ ಅವರ ಪತ್ನಿಯವರ ಆರೋಗ್ಯ ವಿಚಾರಿಸಿ, ಶೀಘ್ರ ಗುಣಮುಖರಾಗುವಂತೆ ಹಾರೈಸಿದರು.

ನಂತರ ಅಗ್ರಹಾರದಲ್ಲಿರುವ ತಮ್ಮ ಸ್ನೇಹಿತರೂ ಆದ ಹಿರಿಯ ವಕೀಲ ಶ್ರೀನಿವಾಸನ್ ಅವರ ಮನೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ತನಿಷ್ಕ್ ವಜ್ರಾಭರಣಗಳ ಪ್ರದರ್ಶನ; ಮಾರಾಟ

ಮೈಸೂರು: ನಗರದ ಬಿ.ಎನ್.ರಸ್ತೆಯ, ಸಬರ್ಬನ್ ನಿಲ್ದಾಣ ಹತ್ತಿರದ ತನಿಷ್ಕ್ ಚಿನ್ನಾಭರಣ ಮಳಿಗೆಯಲ್ಲಿ ಅಪರೂಪದ ವಜ್ರಾಭರಣಗಳ ಮಾರಾಟವನ್ನು ಫೆ28ರವರೆಗೆ ಆಯೋಜಿಸಲಾಗಿದೆ. ಹೊಸ ವಿನ್ಯಾಸದ ವಜ್ರಾಭರಣಗಳ ಪ್ರದರ್ಶನವು ಫೆ3ರಂದು ಮುಕ್ತಾಯಗೊಳ್ಳಲಿದ್ದು, ವಜ್ರಾಭರಣಗಳ ಮೌಲ್ಯದ ಮೇಲೆ ರಿಯಾಯಿತಿಯ ಮಾರಾಟ ಶೇ.20ರಷ್ಟು ಫೆಬ್ರವರಿ ಅಂತ್ಯದವರೆಗೆ ಇರಲಿದೆ. ಚಿನ್ನಾಭರಣಗಳ ಖರೀದಿಯಲ್ಲಿ ತಯಾರಿಕೆಯ ವೆಚ್ಚದ ಮೇಲೆ ಶೇ.20ರಷ್ಟು ರಿಯಾಯಿತಿ ಇರಲಿದೆ ಗ್ರಾಹಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತನಿಷ್ಕ್ ಮಳಿಗೆ ವ್ಯವಸ್ಥಾಪಕ ವಿನೋದಕುಮಾರ್ ತಿಳಿಸಿದ್ದಾರೆ.

TANISHQ


ಹುಣಸೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಯುವ ಶಾಸಕರಾದ
ಸನ್ಮಾನ್ಯ ಶ್ರೀ ಜಿ.ಡಿ. ಹರೀಶ್‌ಗೌಡರವರಿಗೆ
ಎ.ಪಿ.ಎಂ.ಸಿ. ಮಾಜಿ ನಿರ್ದೇಶಕರು ಮತ್ತು ಶ್ರೀನಿಧಿ ಸ್ಟೀಲ್ಸ್ ಮತ್ತು ಶ್ರೀನಿಧಿ ಡೆವಲಪರ್ಸ್ ಮಾಲೀಕರಾದ
ಕೋಟೆಹುಂಡಿ ಶ್ರೀ ಮಹದೇವ್‌ರವರಿಗೆ
ಜನ್ಮದಿನದ ಶುಭಾಶಯಗಳು
ಬಸವೇಗೌಡ್ರು
ಅಧ್ಯಕ್ಷರು, ಗೋಪಾಲಪುರ ಗ್ರಾಮ ಪಂಚಾಯಿತಿ
ಲೀಲಾವತಿ, ಅಧ್ಯಕ್ಷರು, ಧನಗಳ್ಳಿ ಗ್ರಾಮ ಪಂಚಾಯಿತಿ
ಸವಿತಾ, ಉಪಾಧ್ಯಕ್ಷರು, ಧನಗಳ್ಳಿ ಗ್ರಾಮ ಪಂಚಾಯಿತಿ
ರಾಣಿ, ಉಪಾಧ್ಯಕ್ಷರು, ಜಯಪುರ ಗ್ರಾಮ ಪಂಚಾಯಿತಿ
ಮಹದೇವಯ್ಯ, ಅಧ್ಯಕ್ಷರು, ಜಯಪುರ ಗ್ರಾಮ ಪಂಚಾಯಿತಿ
ಸಿದ್ದಯ್ಯ ಉಪಾಧ್ಯಕ್ಷರು, ಗೋಪಾಲಪುರ ಗ್ರಾಮ ಪಂಚಾಯಿತಿ
ಕೃಷ್ಣಮೂರ್ತಿ, ಜೆಡಿಎಸ್ ಮುಖಂಡರು
ನಿಂಗರಾಜು ಪಿ. ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು
ಮಹದೇವಸ್ವಾಮಿ
ಶುಭಕೋರುವವರು
ಮಾಜಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರು ಹಾಗೂ ಧನಗಳ್ಳಿ, ಜಯಪುರ, ಗೋಪಾಲಪುರ,
ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಹಾಗೂ ಕೋಟೆಹುಂಡಿ ಗ್ರಾಮಸ್ಥರು ಹಾಗೂ ಮುಖಂಡರು
ಸುರೇಶ ಸದಸ್ಯರು
(ಧನಗಳ್ಳಿ ಗ್ರಾ.ಪಂ) ಕೋಟೆಹುಂಡಿ
ರವಿ
ಸಿವಿಲ್ ಕಂಟ್ರಾಕ್ಟರ್